
ಗೌರಿ ಲಂಕೇಶ್



ಆ ಮೂರು ದಿನಗಳ ಚಿಂತಿ

26 ಜುಲೈ 2017 ಪುಟ 16 ರೂ. 15/- ರಂಜನೆ • ಬೋಧನೆ • ಪ್ರಚೋದನೆ



ಚಾಂಡಾಲ ಭಟ್ಟನಿಗೆ ಇನ್ನೆಷ್ಟು ಬಲಿ?



ರೆಕಾರ್ಡ್ ಬ್ರೇಕಿಂಗ್ ರಾಜಕುಮಾರ



ಚಿತ್ರದುರ್ಗ: ತಿಪ್ಪಾರೆಡ್ಡಿಯ

ಆಪರೇಷನ್ ಡಬಲ್‌ಗೇಮ್



ಕೊಡಗು

ಸಂಸದ ಸಿಮ್ಮನ ಹಗಲುವೇಷ




ಮೈಸೂರು: ಜೆಡಿಎಸ್

ಸೂಟ್‌ಕೇಸ್ ಬಾಂಬ್‌ನ ಒಳಗುಟ್ಟೇನು?

ರಂಜನೆ | ಬೋಧನೆ | ಪ್ರಚೋದನೆ **ಲಂಕೇಶ್**

ಹಿಂದಿ ಹೇರಿಕೆ ಅಷ್ಟೊಂದು ದೊಡ್ಡ ವಿಚಾರವ

ಅಂಚಿನಿಂದ....



ಡಾ.ವಾಸು ಎಚ್.ವಿ.

ಧರ್ಮ ಒಂದೇ ಆಗಿದ್ದರೂ, ಪೂರ್ವ ಪಾಕಿಸ್ತಾನವೆಂದು ಕರೆಸಿಕೊಳ್ಳುತ್ತಿದ್ದ ಬಾಂಗ್ಲಾ ದೇಶವು, ಪಾಕಿಸ್ತಾನ ಬೇರೆಯಾದದ್ದು ಏಕೆ ಮತ್ತು ಹೇಗೆ ಎಂಬುದನ್ನು ಎಲ್ಲರೂ ಅರಿತಿರಬೇಕು. ವಸಾಹತುಶಾಹಿಗಳ ವಿರುದ ಧೀರೋದಾತ್ತ ಜನಸಂಗ್ರಾಮದಲ್ಲಿ ಒಂದಾದ ದೇಶವಿದು. ಈ ದೇಶ ಈಗಲೂ ಸಾಮಾಜಿಕವಾಗಿ ಜಾತಿ/ಧರ ಹೆಸರಿನಲ್ಲಿ ಛಿದ್ರವೇ ಆಗಿದೆ. ಭಾಷೆಗಳೂ ಜನರನ್ನು ಪ್ರತ್ಯೇಕಿಸಿದೆ. ಈ ಬಹುಭಾಷೆಗಳು ಮತ್ತು ಬಹುಸಂಸ್ಕ ದೇಶದ ಸಂಪತ್ತೂ ಆಗಬಲ್ಲವು. ಆದರೆ, ಜಾತಿಗಳಲ್ಲ, ಧಾರ್ಮಿಕ ಯಾಜಮಾನ್ಯವೂ ಅಲ್ಲ, ಅವು ದೇಶವ ಒಡೆಯಬಲ್ಲವು ಅಷ್ಟೇ. ದೇಶದ ಸಮಸ್ತ ಸಾಮಾನ್ಯ ಜನರು ಸಮಾನ ಶತ್ರುಗಳ ವಿರುದ್ಧದ ಹೋರಾಟದ ಒಂದಾಗುವ ಅಗತ್ಯವಿರುವಾಗ ನಾವು ಒಡಕಿಗೆ ಅವಕಾಶವೀಯಬಾರದು. ಆ ಎಚ್ಚರವನ್ನು ಹೇರಿಕೆ ಮಾಡ ಬಯಸುತ್ತಿರುವವರು, ಹೇರಿಕೆಯನ್ನು ಸಹಜ ಎಂದು ಬಗೆದಿರುವವರು ಹೊಂದಿರುವ ಅಗತ್ಯ ಹೆಚ್ಚಿದೆ

'ಬೆಂಗಳೂರಿನ ನಮ್ಮ ಮೆಟ್ರೋದಲ್ಲಿ ಹಿಂದಿ ಬಳಸಲಾಗುತ್ತಿರುವುದನ್ನು ಕೆಲವರು ಅತಿರೇಕಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ, ಅದೇನು ಅಷ್ಟೊಂದು ದೊಡ್ಡ ವಿಚಾರವಾ?' ಎಂದು ಗೆಳೆಯರೊಬ್ಬರು ಕೇಳಿದರು. 'ಹಿಂದಿ ಬಳಸಲಾಗುತ್ತಿದ್ದರೆ, ಅದು ಅಷ್ಟೊಂದು ದೊಡ್ಡ ವಿಚಾರ ಅಲ್ಲ, ಹಿಂದಿಯನ್ನು ಹೇರುತ್ತಿದ್ದರೆ ದೊಡ್ಡ ವಿಚಾರ' ಎಂದು ಹೇಳಿದೆ. 'ಹೇರಿಕೆ ಎಂದು ನೀವಂದುಕೊಂಡರೆ, ಅದು ಹೇರಿಕೆ. ನಮಗೆ ದೇಶದ ಒಂದು ಲಿಂಕ್ ಭಾಷೆಯನ್ನು ಕಲಿಸಲು ವ್ಯವಸ್ಥೆ ಮಾಡುತ್ತಿದ್ದಾರೆಂದುಕೊಂಡರೆ ಅದು ಹೇರಿಕೆಯಲ್ಲ. ರಾಜ್ಯದಿಂದ ರಾಜ್ಯಕ್ಕೆ ಜನರ ಓಡಾಟ ತುಂಬಾ ಹೆಚ್ಚಾಗುತ್ತಿರುವ ಈ ಕಾಲದಲ್ಲಿ ಹೊರಗಿನಿಂದ ಬಂದವರಿಗೆ ಸಮಸ್ಯೆಯಾಗಬಾರದು ಅಲ್ಲವೇ? ನಾವು ಅಪರಿಚಿತ ಪ್ರದೇಶಕ್ಕೆ ಹೋದರೆ ಎಷ್ಟೊಂದು ಸಮಸ್ಯೆಯಾಗುತ್ತದೆ. ಮೇಲಾಗಿ ಇದನ್ನು ನಮ್ಮ ಮೇಲೆ ದುರುದ್ದೇಶಪೂರ್ವಕವಾಗಿ ಹೇರುತ್ತಿದ್ದಾರೆ ಎಂದು ನೋಡುವುದು ತಪ್ಪು'.

'ಇಲ್ಲಿ ಸಮಸ್ಯೆ ಏನೆಂದರೆ, ಹಿಂದಿಯನ್ನು ಹೇರುತ್ತಿದ್ದರೂ ಅದು ಹೇರಿಕೆಯಲ್ಲವೆನ್ನುವಂತೆ, ಸಹಜವೆನ್ನುವಂತೆ ಮಾಡಲಾಗಿದೆ. ಉದಾಹರಣೆಗೆ ಬೆಂಗಳೂರಿನ ಮೂಲೆಯೊಂದರಲ್ಲಿ ಕರ್ನಾಟಕ ಮೂಲದ್ದೇ ಒಂದು ರಾಷ್ಟ್ರೀಕೃತ ಬ್ಯಾಂಕಿನ ಶಾಖೆ ಇರುತ್ತದೆ (ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕರ್ನಾಟಕ ಮೂಲದ್ದು ಐದು ಇದ್ದವು. ಅದರಲ್ಲಿ ಒಂದಾದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಮುಳುಗಿಸಲಾಯಿತು. ವಿಲೀನ ಎಂದರೆ, ವಿಲೀನ. ಮುಳುಗಿಸಿದರೆ ಎಂದರೆ ಮುಳುಗಿಸಿದರು). ಆ ಶಾಖೆಗೆ ಕನ್ನಡ ಬಲ್ಲವರೇ ಶೇ.95ರಷ್ಟು ಹೋಗುತ್ತಾರೆ. ವಯಸ್ಸಾದ ಮುದುಕ ಮುದುಕಿಯರು ನಿವೃತ್ತಿ ವೇತನವನ್ನೋ, ಮಾಸಾಶನವನ್ನೋ ಪಡೆಯಲೂ ಅಲ್ಲಿಗೇ ಹೋಗುತ್ತಾರೆ. ಕನ್ನಡ ಬಾರದ ಶೇ.5ರಲ್ಲಿ ತಮಿಳು, ತೆಲುಗು, ಮಲಯಾಳಂ ಮತ್ತು ಹಿಂದಿ ಮೂಲದವರಿದ್ದಾರೆ. ಅಲ್ಲಿ ಹಣ ಪಡೆಯಲು ಅಥವಾ ತುಂಬಲು ಇರುವ ಚೀಟಿಗಳಲ್ಲಿ ಇಂಗ್ಲಿಷ್ ಮತ್ತು ಹಿಂದಿ ಇರುತ್ತದೆ. ಅಲ್ಲಿಗೆ ಬರುವ ಸ್ಥಳೀಯರಾದ ಗ್ರಾಹಕರು ಚೀಟಿ ತುಂಬಲು ಬಹಳ ಮುಜುಗರದಿಂದ ಅಲ್ಲಿ ನಿಂತಿರುವ ಅವರಿವರಲ್ಲಿ ಕೇಳಿಕೊಳ್ಳಬೇಕು. ಎಲ್ಲರೂ ಧಾವಂತದಲ್ಲಿ ಇರುವವರೇ. ಹಾಗಾಗಿ ಒಂದಿಬ್ಬರು ನಿರಾಕರಿಸಿಬಿಟ್ಟರೆ, ತನ್ನ ಮನೆ ಪಕ್ಕದ ಬ್ಯಾಂಕಿಗೆ ಬಂದಿರುವ ವಯಸ್ಸಾದ ಮಹಿಳೆ ಅಪರಿಚಿತರನ್ನು ದೈನೇಸಿಯಾಗಿ ಬೇಡಿಕೊಳ್ಳಬೇಕು. ಕನ್ನಡ ಗೊತ್ತಿದ್ದೂ ಹೀಗಾಗುತ್ತದೆ. ಆದರೆ, ಇವೆಲ್ಲವೂ ಸಹಜ ಎಂದು ಸುತ್ತಲಿನ 'ಸಮಾಜ' ನೋಡುತ್ತಿರುತ್ತದೆ. ಆಕೆ ಅನಕ್ಷರಸ್ಥೆಯೆಂದು ಅವರು ತಿಳಿಯುತ್ತಿರುತ್ತಾರೆ. ಹಾಗೆ ನೋಡಿದರೆ, ಕೆಲವರು ಅರೆ ಅಕ್ಷರಸ್ಥರೂ ಬ್ಯಾಂಕಿಗೆ ಬರುತ್ತಾರೆ. ಅವರನ್ನು ಪ್ರೋತ್ಸಾಹಿಸಿದರೆ ಕನ್ನಡ ಬರೆಯಬಲ್ಲರು. ಆದರೆ, ಇಂಗ್ಲಿಷು ಮತ್ತು ಹಿಂದಿ ಅವರನ್ನು ಅನಕ್ಷರಸ್ಥರನ್ನಾಗಿಸುತ್ತದೆ.'

'ಇದನ್ನು ತುಂಬಾ ಎಳೆಯುವುದು ಬೇಡ. ಅನುಕೂಲ ಏನೆಂದು ನೋಡೋಣ. ನೀವು ಹೇಳುತ್ತಿರುವ ಶೇ.95ರಷ್ಟು ಕನ್ನಡ ಬಲ್ಲವರಲ್ಲಿ ಎಲ್ಲರಿಗೂ ಇಂಗ್ಲಿಷ್ ಅಥವಾ ಹಿಂದಿ ಬರುವುದಿಲ್ಲವಾ?', 'ಶೇ.90ರಷ್ಟು ಜನಕ್ಕೆ ಹಿಂದಿ ಅಕ್ಷರ ಗೊತ್ತಾಗೋದೇ ಇಲ್ಲ, ಶೇ.50ಕ್ಕೂ ಹೆಚ್ಚು ಜನರಿಗೆ ಇಂಗ್ಲಿಷ್ ಅಕ್ಷರ ಗೊತ್ತಾಗುತ್ತದೆ, ಆದರೆ ಸರಿಯಾಗಿ ಅರ್ಥ ಆಗುವುದಿಲ್ಲ. ಸಾವಿರಾರು ವರ್ಷಗಳ ಇತಿಹಾಸವಿರುವ, ಅತ್ಯಂತ ಹೆಚ್ಚು ಜನ ಮಾತಾಡುವ ಜಗತ್ತಿನ ಭಾಷೆಗಳಲ್ಲಿ ಮೊದಲ ಐವತ್ತರಲ್ಲೇ ಬರುವ ಭಾಷೆಯೊಂದರ ಸ್ವಂತ ಜನರಿಗೆ, ಅವರ ನೆಲಮೂಲದ್ದೇ ಆಗಿರುವ ಬ್ಯಾಂಕೊಂದರಲ್ಲಿ ಅಪರಿಚಿತ ಭಾವ, ಅಸಹಾಯಕ ಭಾವ ಮೂಡಿಸಲಾಗುತ್ತದೆ. ಮತ್ತು ಇದನ್ನು ಸಹಜ ಎಂದು ಬಗೆಯಲಾಗುತ್ತದೆ. ಆ ಬ್ಯಾಂಕಿಗೆ ಬರುವ ಗ್ರಾಹಕರಲ್ಲಿ ತಮಿಳು ಅಥವಾ ತೆಲುಗು ಮೂಲದವರು ಶೇ.3ರಷ್ಟಿದ್ದರೂ ಅವರ ಭಾಷೆಯಲ್ಲಿ ಯಾವ ಚೀಟಿಯೂ ಇರುವುದಿಲ್ಲ, ಶೇ.1ರಷ್ಟೂ ಇರದ ಹಿಂದಿಯಲ್ಲಿ ಇದ್ದರೆ ಅದು ಸಹಜವಾಗಿಬಿಡುತ್ತದೆ'.

....

ಯಾಜಮಾನ್ಯವನ್ನು, ಗುಲಾಮಗಿರಿಯನ್ನು, ದುರ್ಬಲರು ಸದಾ ಅಸಹಾಯಕರಂತೆಯೇ ಮುಂದುವರೆಯುವುದನ್ನು ಸಹಜ ಎಂದು ಸ್ವೀಕರಿಸಿರುವ ಸಮಾಜ ಇದು. ಹಾಗಾಗಿಯೇ ಹಿಂದಿ ಎಲ್ಲೆಲ್ಲೋ ನುಸುಳುತ್ತಾ ಹೋಗುವುದು ಮತ್ತು ಅಲ್ಲಲ್ಲಿ ಕನ್ನಡ ಮರೆಯಾಗುತ್ತಾ ಹೋಗುವುದು 'ಬಹಳಷ್ಟು ಜನ'ರಿಗೆ ದೊಡ್ಡ ಸಮಸ್ಯೆ ಎನಿಸುವುದಿಲ್ಲ. ಈ 'ಬಹಳಷ್ಟು ಜನ'ರಲ್ಲಿ ಸ್ವತಃ ಇಂಗ್ಲಿಷ್ ಅಥವಾ ಹಿಂದಿ ಕಲಿತವರು ಇರುತ್ತಾರೆ. ಅವರು ಮಾತು ಬಲ್ಲವರಾಗಿರುತ್ತಾರೆ. ಅವರೇ ಅಭಿಪ್ರಾಯ ರೂಪಿಸುವ ಜನ. ಅವರಲ್ಲಿ ಹೆಚ್ಚಿನವರಿಗೆ ಹಿಂದಿ ಮಾತ್ರ ಸಹಜ ಅಲ್ಲ, ಹಿಂದಿ- ಹಿಂದೂ-ಹಿಂದೂಸ್ತಾನ್ ಸಹ ಸಹಜವೇ. ಸಮಸ್ಯೆ ಇಂದು ಬೇರೆ ರೂಪ ತೆಗೆದುಕೊಳ್ಳುತ್ತಿರುವುದಕ್ಕೆ ಈ ಕಾರಣವೂ ಇದೆ.

ಹಿಂದಿಯನ್ನು ಅಗತ್ಯವಿರುವೆಡೆ ಅಗತ್ಯಕ್ಕಾಗಿ ತಂದಿದ್ದಾರೆನ್ನುವುದು ವಾಸ್ತವವಲ್ಲ. ಗೆಳೆಯರೊಬ್ಬರು ಸಾಮಾಜಿಕ ಜಾಲತಾಣದಲ್ಲಿ ರಾಜ್ಯ ಹೆದ್ದಾರಿಯೊಂದರ ಮೈಲಿಗಲ್ಲಿನ ಫೋಟೋ ಹಾಕಿದ್ದರು. ಅದು ಕೊರಟಗೆರೆ ಊರಿಗೆ ಇಂತಿಷ್ಟು ಕಿ.ಮೀ. ಎಂದು ತೋರಿಸುವ ಮೈಲಿಗಲ್ಲು, ಹಿಂದಿಯಲ್ಲಿತ್ತು, ಹಿಂದಿಯಲ್ಲಿ ಮಾತ್ರವೇ ಇತ್ತು! ಖಂಡಿತಾ ಹೊರಗಿನಿಂದ ಬರುವ ಜನರನ್ನು ನಾವು ಅತಿಥಿಗಳಾಗಿ ನೋಡಬೇಕು, ಅವರಿಗೆ ಇಲ್ಲಿ ಅನುಕೂಲಗಳನ್ನು ಕಲ್ಪಿಸಬೇಕು. ಆದರೆ ಬರುವವರು ಯಾರು ಹೆಚ್ಚು? ಆಂಧ್ರ, ತಮಿಳುನಾಡುಗಳಿಂದ ಇಲ್ಲಿಗೆ ಬರುವವರು ಹೆಚ್ಚೋ, ಉತ್ತರ ಭಾರತದಲ್ಲಿ ಹಿಂದಿ ಓದಲು ಗೊತ್ತಿರುವ ಭಾಗದಿಂದ ಬರುವವರು ಹೆಚ್ಚೋ? ಎಲ್ಲಕ್ಕಿಂತ ಹೆಚ್ಚಾಗಿ ಕರ್ನಾಟಕದಲ್ಲಿ ಬೀದಿಗಳಲ್ಲಿ ಓಡಾಡುವವರು, ವ್ಯವಹಾರಗಳನ್ನು ನಡೆಸುವವರಲ್ಲಿ ಕನ್ನಡಿಗರೂ ಇದ್ದಾರಲ್ಲವೇ? ಆದರೆ, ಬೆಂಗಳೂರಿನ ಎಷ್ಟೊಂದು ಹೆಸರಿನ ಫಲಕಗಳಲ್ಲಿ ಕನ್ನಡವೇ ಇಲ್ಲ, ಇಂಥದ್ದು ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಇನ್ನೂ ಒಂದು ಮುಖ್ಯ ಸಂಗತಿಯಿದೆ. ಇದು ಮುಖ್ಯ ಎಂದು ಎಲ್ಲರಿಗೂ ಅನಿಸುತ್ತದೋ ಇಲ್ಲವೋ ಗೊತ್ತಿಲ್ಲ. ಅನಕ್ಷರಸ್ಥರು ಇನ್ನೂ ಸಾಕಷ್ಟು ಸಂಖ್ಯೆಯಲ್ಲಿ ಇರುವ ಒಂದು ದೇಶದಲ್ಲಿ ಅವರಿಗೂ ಅರ್ಥವಾಗುವ ರೀತಿಯ ಬೋರ್ಡುಗಳು ಬೇಕಲ್ಲವಾ? ಶೌಚಾಲಯ ಗಂಡಸರದ್ದೋ, ಹೆಂಗಸರದ್ದೋ ಎಂದು ಸೂಚಿಸುವ ಫಲಕಗಳಲ್ಲಿ ಚಿತ್ರವನ್ನೇನೋ ಹಾಕಿರುತ್ತಾರೆ. ಆದರೆ, ಆ ಚಿತ್ರವನ್ನು ದಿಢೀರನೆ ನೋಡಿದರೆ ಕೆಲವೊಮ್ಮೆ ವ್ಯತ್ಯಾಸವೇ ಗೊತ್ತಾಗುವುದಿಲ್ಲ. ಎಷ್ಟು ಜನ 'ಹೊರಗಿನಿಂದ' ಬರುತ್ತಾರೆ ಎಂದು ಲೆಕ್ಕ ಹಾಕಿ ವೇದನೆಯನ್ನು ತೋರುವವರು, ಒಳಗೇ ಇರುವವರನ್ನು ಹೊರಗಿನವರನ್ನಾಗಿಸುವ ಇಂತಹ ಸಂಗತಿಗಳ ಬಗ್ಗೆ ಯಾಕೆ ಸಂವೇದನೆ ತೋರುವುದಿಲ್ಲ?

ಈ ಸಮಸ್ಯೆ ಹೆಚ್ಚಾಗಿ ಕಾಡುವುದು ಆಸ್ಪತ್ರೆಗಳಲ್ಲಿ, ಶೌಚಾಲಯಗಳ ಮುಂದೆ ಇಂಗ್ಲಿಷಿನಲ್ಲಿ ಹಿ (ಅವನು) ಅಥವಾ ಷಿ (ಅವಳು) ಎಂದು ಮಾತ್ರ ಹಾಕುವ, ಚಿತ್ರ ಹಾಕದ ದೊಡ್ಡ ಹೋಟೆಲ್ಲಿಗೆ ಹೋಗೋದೇ ಬೇಡ ಎಂದಿಟ್ಟುಕೊಳ್ಳೋಣ. ಆದರೆ, ಆಸ್ಪತ್ರೆಗೆ ಹೋಗದಿರಲಾದೀತೇ? ಆಸ್ಪತ್ರೆಗೆ ಹೋಗಬೇಕೆಂದರೆ, ಬಹಳಷ್ಟು ಹಳ್ಳಿ ಜನರಿಗೆ ಇರುವ ಸಮಸ್ಯೆ 'ನಮ್ಮನ್ನು ಬಹಳ ಸುತ್ತಿಸ್ತಾರೆ. ಎಲ್ಲಿಗೆ ಹೋಗಬೇಕು ಎಂಬುದೇ ಗೊತ್ತಾಗಲ್ಲ,' ಅಂತಹ ಕಡೆ ಹೆಚ್ಚಿನ ಫಲಕಗಳು ಇಂಗ್ಲಿಷಿನಲ್ಲಿ ಇರುತ್ತವೆ. ಖಾಸಗಿ ಆಸ್ಪತ್ರೆಗಳಲ್ಲಿ ಇದು ಇನ್ನಷ್ಟು ಹೆಚ್ಚು.

ಇವೆಲ್ಲವೂ ಹಿಂದಿ ಬಳಕೆಯ ಒಂದು ಮುಖ ಮಾತ್ರ. ಹಿಂದಿ ಹೇರಿಕೆಯನ್ನು ಸುಗಮಗೊಳಿಸುವ ಇನ್ನೂ ಹಲವು ವಿಧಾನಗಳನ್ನು ಅಲ್ಪಸಂಖ್ಯಾತ ಹಿಂದಿ ಯಜಮಾನರು ಬಹಳ ಹಿಂದಿನಿಂದಲೂ ಕಂಡುಕೊಂಡಿದ್ದಾರೆ. ಸಾಕಷ್ಟು ಸರ್ಕಾರೀ ಅನುದಾನದೊಂದಿಗೆ ಹಿಂದಿ ಪ್ರಚಾರ ಪರಿಷತ್ ಮಾತ್ರವಲ್ಲದೇ ದಕ್ಷಿಣ ಭಾರತ ಹಿಂದೀ ಪ್ರಚಾರ ಪರಿಷದ್ ಸಹ ದಶಕಗಳಿಂದ ಅಸ್ತಿತ್ವದಲ್ಲಿದೆ. ಕೇಂದ್ರ ಸರ್ಕಾರದ ಬಹುತೇಕ ಇಲಾಖೆಗಳಲ್ಲಿ ದಿನಕ್ಕೊಂದು ಹಿಂದೀ ಪದ ಬರೆದು ಪ್ರಚುರಗೊಳಿಸಲಾಗುತ್ತದೆ. ಇದು ಕೇವಲ ಒಂದು ಮೆಟ್ರೋದಲ್ಲಿನ ಸಮಸ್ಯೆಯಲ್ಲ, ಕೇಂದ್ರ ಸ್ವಾಮ್ಯದ ರೈಲ್ವೇ, ಟೆಲಿಕಾಂ, ಸಾರ್ವಜನಿಕ ಉದ್ದಿಮೆಗಳು, ಕೇಂದ್ರ ಇಲಾಖೆಗಳು ಎಲ್ಲೆಡೆಯೂ ಹಿಂದಿಗೆ ಪ್ರಾಶಸ್ತ್ಯ ಇದ್ದೇ ಇದೆ. ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಭಾರತದ ಇತರ ಭಾಷೆಗಳಲ್ಲಿ ಬರೆಯುವುದು ಸಾಧ್ಯವಿರಲಿಲ್ಲ, ಈಗ ಕೆಲವು ಕಡೆ ಅವಕಾಶ ಕಲ್ಪಿಸಲಾಗಿದೆಯಾದರೂ, ಹಿಂದಿಗಿರುವ ವಿಶೇಷ ಸ್ಥಾನಮಾನ ಇದ್ದೇ ಇದೆ.



ಹಾಗೆಂದು ಹಿಂದಿಯೆಂಬುದು ಉತ್ತರ ಭಾರತದ ಬಹುಭಾಗದಲ್ಲಿ ಇರುವ ಭಾಷೆಯೆಂಬುದೂ ವಾಸ್ತವವಲ್ಲ. ಹರಿಯಾಣ, ಹಿಮಾಚಲ ಪ್ರದೇಶ, ರಾಜಸ್ತಾನ, ಮಧ್ಯಪ್ರದೇಶ, ಉತ್ತರ ಪ್ರದೇಶ, ಬಿಹಾರ, ಛತ್ತೀಸ್‌ಗಡ, ಜಾರ್ಖಂಡ್, ಉತ್ತರಾಖಂಡಗಳಲ್ಲಿ ಆಡುವ ಭಾಷೆಯೇ ಹಿಂದಿ ಎಂದು ಕೆಲವರು ತಿಳಿದಿದ್ದಾರೆ. ಈ ಎಲ್ಲಾ ರಾಜ್ಯಗಳಲ್ಲಿ ಅವರದ್ದೇ ಆದ ಒಂದು ಭಾಷೆ ಮಾತ್ರವಲ್ಲ, ಕೆಲವೊಮ್ಮೆ 3-4 ಭಾಷೆಗಳಿವೆ. ಇವೆಲ್ಲವೂ ಒಂದೇ ತಾಯಿ ಭಾಷೆಯ ವಿವಿಧ ಉಪಭಾಷೆಗಳಲ್ಲ, ತಮ್ಮದೇ ಆದ ವಿಶಿಷ್ಟ ಯಾಸೆ ಮತ್ತು ಪದಭಂಡಾರಗಳನ್ನು ಹೊಂದಿವೆ. ಪಿಕೆ ಸಿನಿಮಾದಲ್ಲಿ ಅಮೀರ್‌ಖಾನ್ ಮಾತಾಡುವುದು ಭೋಜ್‌ಪುರಿ. ರಾಮ್‌ವಿಲಾಸ್ ಪಾಸ್ವಾನ್ ಮತ್ತು ಲಾಲೂ ಪ್ರಸಾದ್ ಯಾದವ್ ಈ ಭಾಷೆಯನ್ನು ಮಾತಾಡುತ್ತಾರೆ. ಅದೇ ಸಿನಿಮಾದಲ್ಲಿ ಸಂಜಯ್ ದತ್ ಆಡುವುದು ರಾಜಸ್ತಾನೀ ಅನಿಸುತ್ತದೆ. ಪೊಲೀಸ್ ಇನ್ಸ್‌ಪೆಕ್ಟರ್ ಪಾಂಡೆ ಪಾತ್ರಧಾರಿ ಆಡುವುದು ದೆಹಲಿಯ ಅಕ್ಕಪಕ್ಕದಲ್ಲೇ ಇರುವ 'ಹಿಂದಿ'ಗಿಂತ ಭಿನ್ನವಾದ ಭಾಷೆ. ತನು ವೆಡ್ಸ್ ಮನು ರಿಟರ್ನ್ಸ್‌ನ ನಾಯಕಿ ಕಂಗನಾ ರನಾವತ್ ಲಖನೌನಲ್ಲಿ ಮಾತನಾಡುವ ಡಯಲೆಕ್ಟ್ ಮಾತನಾಡಿದರೆ, ಇನ್ನೊಬ್ಬ ನಾಯಕಿ (ಅದೂ ಕಂಗನಾನೇ, ದ್ವಿಪಾತ್ರ) ಹರಿಯಾಣ್ವೀ ಮಾತಾಡುತ್ತಾಳೆ. ರುದಾಲಿಯ ಹಿಂದಿಯೇ ಬೇರೆಯಾಗಿದೆ. ಸಿನಿಮಾ ರಂಗ ಸಾಮಾನ್ಯವಾಗಿ ಒಂದು ಭಾಷೆಯ ಒಂದು ಡಯಲೆಕ್ಟ್‌ಅನ್ನೇ ಪ್ರಧಾನವಾಗಿ ಮುಂದಿಡುತ್ತದೆ. ಇದಕ್ಕೆ ಬಾಲಿವುಡ್ ಹೊರತಲ್ಲ. ಹಾಗೆ ನೋಡಿದರೆ, ಕೇಂದ್ರ ಸರ್ಕಾರದ ಹಿಂದಿ ಹೇರಿಕೆ ಯೋಜನೆಗಿಂತ ಬಾಲಿವುಡ್ ಮತ್ತು ಟಿವಿ ಧಾರಾವಾಹಿಗಳು ಹಿಂದಿಯನ್ನು ಹೆಚ್ಚು ಹರಡಿವೆ. ಆದರೂ, ಮೇಲೆ ಹೇಳಿದಂತಹ ಉದಾಹರಣೆಗಳು ನಮಗೆ 'ಹಿಂದಿ' ಪ್ರದೇಶದ ವಿವಿಧ ಭಾಷೆಗಳ ಸೊಗಡನ್ನು ಪರಿಚಯಿಸುತ್ತವೆ. ಇವುಗಳ ಮಧ್ಯೆ ಕೇವಲ ಯಾಸೆಯ ವ್ಯತ್ಯಾಸವಲ್ಲದೇ ಪದಗಳೇ ಬೇರೆಬೇರೆಯಾಗಿವೆ.

ಇವೆಲ್ಲದರ ಮಧ್ಯೆ ಇನ್ನೊಂದು ಅಂಶವನ್ನೂ ಗಮನಿಸಬೇಕು. ಉತ್ತರ ಭಾರತ ಅಹಂಕಾರ ಎಂಬುದೊಂದು ಸಾರ್ವತ್ರಿಕವಾಗಿ ಇಲ್ಲದಿರಬಹುದು. ಆದ

ಮಧ್ಯಮವರ್ಗಕ್ಕಂತೂ ಅದು ಎದ್ದು ಕಾ

ಇದೆ. ಹೊಟ್ಟೆ ಪಾಡಿಗೆ ದುಡಿಯಲು ಬರು

ಅದು ಇರುವುದಿಲ್ಲ, ಇನ್ನು 'ಹಿಂದೀ ಭಾಗದ

ಏನಿದೆ? ಅವರಿಗೆ ಇಡೀ ದೇಶ ಅವರ ಅಂಗೈ

ಇರಬೇಕೆಂಬ ಭಾವ ಇದೆ. ಹಿಂದಿಯೆಂಬು

(ಹೌದು, ಸೃಷ್ಟಿಸಿ. 300 ವರ್ಷಗಳ ಹಿಂದೆ ಹಿ

ದೊಂದು ಇರಲಿಲ್ಲ, 'ಹಿಂದೂ ಧರ್ಮ' ಎ

ಲಾಗುತ್ತಿರುವುದು ಹೇಗೆ 300 ವರ್ಷಗಳ

ಲಿಲ್ಲವೋ ಹಾಗೆ), ಅದನ್ನು ಭಾರತದಾದ್ಯಂತ ಹ

ಹಿಂದೆ ಈ ರೊಕ್ಕಸ್ಥರ ಹಿತಾಸಕ್ತಿಯೂ ಇದ

ಈಗ ದೇಶವನ್ನು ಕೆಲವು ಜನರ ಯ

ಕೆಳಗೆ ತರಲು ಇಚ್ಛಿಸುತ್ತಿರುವ ಶಕ್ತಿಗಳು ಹಿಂದ

ಹೆಚ್ಚು ಬಲಶಾಲಿಗಳಾಗಿದ್ದಾರೆ. ಅವರು

ಹೆಸರಿನಲ್ಲಿ ಭಾರತವೆಂಬ ದೇಶದ ಪರಿಕಲ್ಪನೆ

ತಂದೊಡ್ಡುತ್ತಿದ್ದಾರೆ. ಅವರ ನಿಲುವಿನೊಂ

ಭಾರತದಲ್ಲೂ ಕೈ ಜೋಡಿಸಿರುವ ಶಕ್ತಿಗಳಿವೆ.

ಅವರು ಇತರ ರಾಜ್ಯಗಳಿಗಿಂತ ಹೆಚ್ಚು ಬಲಶಾ

ಹೀಗಾಗಿಯೂ ಹಿಂದಿ ಹೇರಿಕೆಯೆಂಬುದು ಹಿ

ಹೆಚ್ಚು ಅಪಾಯಕಾರಿ ಸಂಗತಿಯಾಗಿದೆ.

ಈ ಎಲ್ಲಾ ಕಾರಣಗಳಿಂದ ನಿಧಾನಕ್ಕೆ

ಭಾಷೆಯೊಂದರ ಹೇರಿಕೆಯ ವಿಷಯವಾಗಿ ಉ

ಕೆಲವರು ಉತ್ತರ ಭಾರತ ಮತ್ತು ದ್ರಾವಿಡ

ಎರಡು ಭಿನ್ನ ಪ್ರಾಂತಗಳ ಕುರಿತು ಮಾ

ಇದಕ್ಕೆ ಹಲವು ಆಯಾಮಗಳಿವೆ. ಸದ್ಯಕ್ಕೆ

ಹೇಳಬಹುದು. ಧರ್ಮ ಒಂದೇ ಆಗಿದ್ದರ

ಪಾಕಿಸ್ತಾನವೆಂದು ಕರೆಸಿಕೊಳ್ಳುತ್ತಿದ್ದ ಬಾಂಗ

ಪಾಕಿಸ್ತಾನದಿಂದ ಬೇರೆಯಾದದ್ದು ಏಕೆ ಮ

ಎಂಬುದನ್ನು ಎಲ್ಲರೂ ಅರಿತಿರಬೇಕು. ವಸಾ

ವಿರುದ್ಧದ ಧೀರೋದಾತ್ತ ಜನಸಂಗ್ರಾಮದ

ದೇಶವಿದು. ಈ ದೇಶ ಈಗಲೂ ಸಾಮಾಜಿ

ಧರ್ಮಗಳ ಹೆಸರಿನಲ್ಲಿ ಛಿದ್ರವೇ ಆಗಿದೆ.

ಜನರನ್ನು ಪ್ರತ್ಯೇಕಿಸಿದೆ. ಈ ಬಹುಭಾಷ

ಬಹುಸಂಸ್ಕೃತಿಗಳು ದೇಶದ ಸಂಪತ್ತೂ ಆಗಬ

ಜಾತಿಗಳಲ್ಲ, ಧಾರ್ಮಿಕ ಯಾಜಮಾನ್ಯವೂ

ದೇಶವನ್ನು ಒಡೆಯಬಲ್ಲವು ಅಷ್ಟೇ. ದೇ

ಸಾಮಾನ್ಯ ಜನರು ಸಮಾನ ಶತ್ರುಗಳ

ಹೋರಾಟದಲ್ಲಿ ಒಂದಾಗುವ ಅಗತ್ಯವಿರು

ಒಡಕಿಗೆ ಅವಕಾಶವೀಯಬಾರದು. ಆ ಎಚ್ಚರ

ಮಾಡಲು ಬಯಸುತ್ತಿರುವವರು, ಹೇರಿಕೆಯ

ಎಂದು ಬಗೆದಿರುವವರು ಹೊಂದಿರುವ ಅ

ಕಡೆಯದಾಗಿ ಒಂದು ಮಾತು. ಹಿ

ಯೆಂಬುದು ಸಮಸ್ಯೆ ಇಂಗ್ಲಿಷ್ ಹೇರಿಕೆ ಸಮ

ಮೇಲೆ ಹೇಳಿದ ಬಹಳಷ್ಟು ಸಮಸ್ಯೆಗಳು ಇಂ

ಇವೆ. ಇನ್ನೂ ಹೆಚ್ಚು ಇವೆ. ನಮ್ಮ ಭಾಷೆಯ

ಹಾಕುತ್ತಿರುವುದರಲ್ಲಿ ಇಂಗ್ಲಿಷಿನ ಪಾಲು

ಹಿಂದಿ ಹೇರಿಕೆಯ ವಿರುದ್ಧ ಮಾತಾಡುತ್ತಿರುವ

ಈ ಕುರಿತು ಹೆಚ್ಚು ತಲೆ ಕೆಡಿಸಿಕೊಂಡಿ

ಇಂಗ್ಲಿಷಿನ 'ಪರವಾಗಿ' ವಾದಿಸುವುದಂತೂ

ತೋರುತ್ತದೆ. ಇಂದಿನ ರಾಜಕೀಯ ಸಾಮಾ

ದಲ್ಲಿ ಇಂಗ್ಲಿಷಿನ ಪರವಾದ ವಾದಗಳು ಹಿಂದಿ

ವಾದಗಳಿಗೂ ನಿಧಾನಕ್ಕೆ ಪುಷ್ಟಿ ಕೊಡಬಹು

ವನ್ನೂ ನಾವು ಹೊಂದಬೇಕಿದೆ. ಆದರೆ, 'ಹಿಂ

ಮಾತಾಡುವವರು ಇಂಗ್ಲಿಷ್‌ನ ವಿರುದ್ಧ ಏಕೆ

ವುದಿಲ್ಲ' ಎಂದು ಹಿಂದಿಪರ ವಾದಿಗಳು

ಮಾತ್ರ ಇನ್ನೂ ವಿಚಿತ್ರ. ಏಕೆಂದರೆ, ಒಂದು ವ

ವಿರುದ್ಧ ಹೋರಾಟ ಮಾಡಲು, ಇನ್ನೊಂದು ವ

ವಿರುದ್ಧವೂ ಹೋರಾಟ ಮಾಡಲೇ ಬೇಕೆಂಬು

ಷರತ್ತೇನಲ್ಲ, ಒಂದು ವೇಳೆ ಇಂಗ್ಲಿಷಿನ ವಿರು

ಅಷ್ಟೊಂದು ಮೊಳಗುತ್ತಿಲ್ಲ ಎಂದು ಅಂಥವರ

ಅದನ್ನು ಬೇಕಾದರೆ ಅವರೇ ಮಾಡಬಹುದ

ಒಟ್ಟಿನಲ್ಲಿ ಹಿಂದಿ ಹೇರಿಕೆಯ

ಹೋರಾಟವು ಈ ಕಾಲದ ಅಗತ್ಯಗಳಲ್ಲಿ


ವುದಂತೂ ಸತ್ಯ.


ಎಲ್ಲರ ಮನಸ್ಸು ಗೆದ್ದ ಅಬ್ದುಲ್ ಮತ್ತು ಸಲೀಂ

ಇತ್ತೀಚೆಗೆ ಇಬ್ಬರು ಸಾಮಾನ್ಯ ಮುಸಲ್ಮಾನರು ಮಾನವೀಯತೆಯಿಂದ ಮತ್ತು ಕಾಳಜಿಯಿಂದ ...ಸುವ ಮೂಲಕ ಜನರ ಪ್ರೀತಿ ಮತ್ತು ಸನ್ಮಾನವನ್ನು ಗಳಿಸಿದ್ದಾರೆ. ಮೊದಲನೆಯವರು ... ಕರ್ನಾಟಕದವರೇ ಆದ ಅಬ್ದುಲ್ ರವೂಫ್. ...ರು ಬಂಟ್ವಾಳದಲ್ಲಿ ಹಣ್ಣು ಹಂಪಲು ಮಾರುವ ಅಂಗಡಿ ಮಾಲೀಕ. ಇವರ ಅಂಗಡಿಯ ಸಮೀಪದಲ್ಲೇ ...ತ್ ಮಡಿವಾಳ ಎಂಬುವವರು ... ತಂದೆಯ ಲಾಂಡ್ರಿ ಅಂಗಡಿ ...ಡಿಕೊಳ್ಳುತ್ತಿದ್ದರು. ಹತ್ತಿರದಲ್ಲೇ ...ಣ್ ಎಂಬುವವರ ...ರಿಯೂ ಇದೆ.

ಕಳೆದ ಬುಧವಾರ ರಾತ್ರಿ ...ತ್ ಮಡಿವಾಳನ ಮೇಲೆ ದಾಳಿ ಮಾಡಿದವರು ಆತನನ್ನು ರಕ್ತದ ಮಡುವಿನಲ್ಲಿ ಆತನ ಲಾಂಡ್ರಿ ...ನಲ್ಲೇ ಬಿಟ್ಟುಹೋಗಿದ್ದರು. ...ೇ ಹೊತ್ತಿಗೆ ಅಬ್ದುಲ್ ಅವರು ... ನಮಾಜ್ ಮುಗಿಸಿ ...ರ್ಥನೆಗೆ ಕೂತಿದ್ದರು. ರಾತ್ರಿ ...ಮಾರು ಹತ್ತು ಗಂಟೆ. ಆಗ ...ಕರಿ ನಡೆಸುವ ಪ್ರವೀಣ್ ...ಬಂದು ಶರತ್ ಮೇಲಿನ ದಾಳಿಯ ಬಗ್ಗೆ ಅಬ್ದುಲ್ ಅವರಿಗೆ ಹೇಳಿದರು. ಅಬ್ದುಲ್ ಲಾಂಡ್ರಿ ಅಂಗಡಿಗೆ ಹೋಗುವ ಹೊತ್ತಿಗೆ ಸುತ್ತಮುತ್ತಲಿನ ಅಂಗಡಿ ಮಾಲೀಕರು ಅಲ್ಲಿ ನೆರೆದಿದ್ದರು. ...ದರೆ ರಕ್ತದ ಮಡುವಿನಲ್ಲಿ ಬಿದ್ದು ...ನ್ನೂ ಪ್ರಾಣ ಉಳಿಸಿಕೊಂಡಿದ್ದ ಶರತ್‌ನ ನೆರವಿಗೆ ...ರೂ ಮುಂದಾಗಲಿಲ್ಲ. ಆಗ ಅಬ್ದುಲ್ ಅವರೇ ...ತನನ್ನು ಎತ್ತಿಕೊಂಡು ತಾವು ಹಣ್ಣುಹಂಪಲು ತರುವ ...ಮ್ಮ ರಿಕ್ಷಾದಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಸೇರಿಸಿದರು.

ಆದರೆ ಅಲ್ಲಿ ಚಿಕಿತ್ಸೆ ನೀಡಿದ ವೈದ್ಯರು ...ರತ್‌ನನ್ನು ಕೂಡಲೆ ಮಂಗಳೂರಿನ ಆಸ್ಪತ್ರೆಗೆ ...ಬುಲೆನ್ಸ್‌ನಲ್ಲಿ ಸಾಗಿಸಲು ಹೇಳಿದರು. ಅಷ್ಟುಹೊತ್ತಿಗೆ ಅಲ್ಲಿ ನೂರಾರು ಜನ ಸೇರಿದ್ದರೂ ಅವರ್‍ಯಾರೂ ...ರತ್‌ನನ್ನು ಆಂಬುಲೆನ್ಸ್‌ಗೆ ಸಾಗಿಸಲೂ ನೆರವು ...ಡಲಿಲ್ಲ. ಅಬ್ದುಲ್ ಅವರೊಂದಿಗೆ ರಿಕ್ಷಾ ಏರಿದ್ದ ಇನ್ನಿಬ್ಬರ ನೆರವು ಪಡೆದ ಅಬ್ದುಲ್ ಶರತ್‌ನನ್ನು ಮಂಗಳೂರಿಗೆ ಸಾಗಿಸಿದರು. ಅಲ್ಲಿ ಎರಡು ದಿನ ಜೀವನ್ಮರಣದ ನಡುವೆ ಹೊಯ್ದಾಡಿದ ಶರತ್ ...ವಾರ ಕೊನೆಯುಸಿರೆಳೆದ.





ಶರತ್ ಮಡಿವಾಳ ಓರ್ವ ಆರೆಸ್ಸೆಸ್ ಸದಸ್ಯ ಎಂಬುದು ಅಬ್ದುಲ್‌ಗೆ ಮತ್ತು ಸುತ್ತಮುತ್ತಲಿನವರಿಗೆ ಗೊತ್ತಿತ್ತು. ಅವರಲ್ಲಿ ಹಲವರು ಶರತ್‌ನ ಹಿಂದೂತ್ವ ಮಿತ್ರರೂ ಇದ್ದಿರಲಿಕ್ಕೂ ಸಾಕು. ಆದರೆ ಅವರ್‍ಯಾರೂ ತೀವ್ರವಾಗಿ ಗಾಯಗೊಂಡಿದ್ದ ಶರತ್‌ನ ನೆರವಿಗೆ ಧಾವಿಸಲಿಲ್ಲ. ಬದಲಾಗಿ ಆತನಿಗೆ ನೆರವಾದದ್ದು ಚೆಡ್ಡಿಗಳು ದ್ವೇಷಿಸುವ ಮುಸಲ್ಮಾನ ಅಬ್ದುಲ್. ಈ ಬಗ್ಗೆ ವಾರ್ತಾ ಭಾರತಿ ಪತ್ರಿಕೆಯವರು ಅಬ್ದುಲ್ ಅವರನ್ನು ಪ್ರಶ್ನಿಸಿದಾಗ ಆತ ಕೊಟ್ಟ ಉತ್ತರ "ಜೀವ ಉಳಿಸುವುದಕ್ಕಿಂತ ದೊಡ್ಡ ಧರ್ಮ ಯಾವುದು?" ಅಬ್ದುಲ್ ಅವರನ್ನು ಮೆಚ್ಚದಿರಲು ಸಾಧ್ಯವೇ?

ಈ ಪ್ರಕರಣ ಕುರಿತು ಮಿತ್ರ ಶಶಿಧರ್ ಹೆಮ್ಮಾಡಿ ಬರೆದಿರುವ ಮನಮುಟ್ಟುವ ಕವನ ಈ ಪುಟದಲ್ಲಿಯೇ ಇದೆ. ಜೊತೆಗೆ ಬಾಪು ಅಮ್ಮೆಂಬಳ ಎಂಬುವವರು ಬರೆದಿರುವ ಕವನವೂ ಇಲ್ಲಿದೆ. ಹಾಗೆಯೇ 'ಸಂದೀಪ್ ಸುವರ್ಣ ಸೂರತ್ಕಲ್' ಎಂಬುವವರು ಫೇಸ್‌ಬುಕ್‌ನಲ್ಲಿ ಬರೆದಿರುವ ಟಿಪ್ಪಣಿ ಸಹ. (ಇದು ನಿಜವಾಗಲೂ ನಡೆದದ್ದೋ ಅಥವಾ ಕಾಲ್ಪನಿಕವಾದದ್ದೋ ಗೊತ್ತಿಲ್ಲ.) ಇದು ಅರ್ಥಗರ್ಭಿತವಾಗಿರುವುದರಿಂದ ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ:

"ನಾನು ಒಬ್ಬ ಆರೆಸ್ಸೆಸ್ ಕಾರ್ಯಕರ್ತ. ಮುಲ್ಕಿ ಸುಖಾನಂದ ಶೆಟ್ಟಿಯ ಕೊಲೆ ನಡೆದಾಗ ನಾನು ಕೂಡಾ ಅವತ್ತು ನಡೆದ ಬಂದ್‌ನಲ್ಲಿ ಭಾಗವಹಿಸಿದ ಒಬ್ಬ ಕಟ್ಟರ್ ಹಿಂದೂತ್ವವಾದಿ. ಆದರೆ ಈಗ ನಾನು ಆರೆಸ್ಸೆಸ್‌ನಲ್ಲೂ ಇಲ್ಲ, ಹಿಂದೂತ್ವವಾದಿಯೂ ಅಲ್ಲ. ನಾನು ಬದಲಾಗಲು ಕಾರಣ ನಮ್ಮ ನೆರೆಮನೆಯ ಮುಸ್ಲಿಮರು.

ನನ್ನ ತಲೆಯಲ್ಲಿ ಮುಸ್ಲಿಮರು ಅಂದರೆ ಭಯೋತ್ಪಾದಕರು, ಅವರು ಹಾಗೆ ಅವರು ಹೀಗೆ ಅಂತಲೆ ತುಂಬಿತ್ತು, ಇದನ್ನು ನನ್ನ ತಲೆಯಲ್ಲಿ ತುಂಬಿದ್ದು ಇದೇ ಚೆಡ್ಡಿ ಆರೆಸ್ಸೆಸ್ ಶಾಖೆಯಲ್ಲಿ. ಈ ಆರೆಸ್ಸೆಸ್‌ನವರು ಹಿಂದೂಗಳನ್ನು ಮುಸ್ಲಿಮರ ವಿರುದ್ಧ ಎತ್ತಿ ಕಟ್ಟಿ, ಜಗಳ ತಂದಿಟ್ಟು, ವೋಟ್ ರಾಜಕಾರಣ ಮಾಡುವುದೇ ಇವರ ಕೆಲಸ. ನಾನು ಕೂಡಾ ಮುಸ್ಲಿಂ ವಿರೋಧಿಯಾಗಿ ಬೆಳೆದೆ.

ಆದರೆ ಒಂದು ದಿನ ಅನಾರೋಗ್ಯದಿಂದ ಸುಮಾರು ಎರಡು ತಿಂಗಳು ಮನೆಯಲ್ಲಿ ಮಲಗಿದಾಗ ಎಲ್ಲಾ ಹಿಂದೂ ಬಾಂಧವರಿಗೆ ಫೋನ್ ಮಾಡಿದೆ. ಆದರೆ ಒಬ್ಬನೇ ಒಬ್ಬ ಕನಿಷ್ಠ ಪಕ್ಷ ನೆರೆಮನೆಯ ಹಿಂದೂ ಕೂಡಾ ಬಂದು ನನ್ನನ್ನು ನೋಡಲಿಲ್ಲ, ಅವತ್ತು ನನ್ನನ್ನು ಬಳಸಿಕೊಂಡ ಹಿಂದೂ ಸಂಘಟನೆಗಳಿಗೂ ನನ್ನನ್ನು ನೋಡುವ, ಸಹಾಯ ಮಾಡುವ ಮನಸ್ಸಾಗಲಿಲ್ಲ. ಫೋನ್ ಮಾಡಿದರೆ, ಅದು ನನ್ನ ಕರೆ ಎಂದು ಗೊತ್ತಾದ ಕೂಡಲೇ ಅವರು ಫೋನ್ ರಿಸೀವ್ ಮಾಡುತ್ತಲೇ ಇರಲಿಲ್ಲ.

ಆದರೆ ನನ್ನ ನೋಡಲು ನೆರೆಹೊರೆಯ ಮುಸ್ಲಿಮರು ಬಂದು ನನ್ನ ಕೈಯಲ್ಲಿ 100, 200 ರೂಪಾಯಿ ಇಟ್ಟು ಹೋಗುತ್ತಿದ್ದರು. ಕೊನೆಗೆ ಒಂದು ದಿನ ಐದಾರು ಮುಸ್ಲಿಂ ಮುಖಂಡರು ನನ್ನ ಮನೆಗೆ ಬಂದ್ರು. ಅವರಲ್ಲಿ ಒಬ್ಬರಿಗೆ ನಾನು ಬೈಕ್ ಸೈಡ್ ಕೊಡುವ ವಿಚಾರದಲ್ಲಿ ರಕ್ತ ಬರುವ ಹಾಗೆ ಥಳಿಸಿದ್ದೆ. ಅದೆ ರೀತಿ ಮತ್ತೆ ಇಬ್ಬರಿಗೂ ಅವರು ಮುಸ್ಲಿಂ ಅನ್ನೋ ಕಾರಣಕ್ಕೆ ಕೆಟ್ಟದಾಗಿ ಆವಾಜ್ ಹಾಕಿದ್ದೆ... ಆದರೆ ಆ ಮುಸ್ಲಿಂ ಮುಖಂಡರು ನನ್ನ ಹತ್ತಿರ ಬಂದು ಹತ್ತು ಸಾವಿರ ರೂಪಾಯಿ ಕೊಟ್ಟು 'ಇಂದು ನಿನ್ನ ಕಷ್ಟವನ್ನು ನಮ್ಮ ಗುರುಗಳು ಮಸೀದಿಯಲ್ಲಿ ಹೇಳಿದಾಗ ನಿನ್ನ ನೆರೆಹೊರೆಯ ಮುಸ್ಲಿಮರು ಕೊಟ್ಟ ಸಹಾಯ. ಅಷ್ಟೇ ಅಲ್ಲ, ನಿನ್ನ ಚಿಕಿತ್ಸೆಯ ಖರ್ಚುವೆಚ್ಚವನ್ನು ನಾವು ನೋಡುತ್ತೇವೆ. ನೀನು ಹೆದರಬೇಡ' ಅಂತ ಹೇಳಿದಾಗ ನನ್ನ ಕಣ್ಣು ಒದ್ದೆ ಆದವು. ಅವರು ಹೇಳಿದ ಹಾಗೆ ನನಗೆ ಎಲ್ಲಾ ಸಹಾಯ ಮಾಡಿದರು. ಈಗ ನಾನು ಸಂಪೂರ್ಣವಾಗಿ ಗುಣಮುಖನಾಗಿದ್ದೇನೆ...

ಈಗ ಹೇಳಿ, ಅನ್ಯಾಯ ಮಾಡಿದ ನನ್ನನ್ನು ಕ್ಷಮಿಸಿ ನನ್ನ ಜೀವ ಉಳಿಸಿದ ಮುಸ್ಲಿಮರು ಭಯೋತ್ಪಾದಕರಾ? ದಾನ ಧರ್ಮ ವಾತ್ಸಲ್ಯ ಪ್ರೀತಿ ಸಹಾಯ ಮಾಡೋ ಗುಣ ಮುಸ್ಲಿಮರಿಂದ ನಾವು ಕಲಿಯಬೇಕಲ್ಲವಾ?"

ಅಬ್ದುಲ್ ರವೂಫ್ ಅವರಂತೆ ಜನರ ಮನಸ್ಸು ಗೆದ್ದ ಇನ್ನೊಬ್ಬ ಮುಸಲ್ಮಾನ ಸಲೀಂ ಶೇಖ್. ಈತ ಗುಜರಾತ್ ಮೂಲದ ಬಸ್ ಚಾಲಕ. ಹೋದವಾರ ಈತ ಅರವತ್ತು ಅಮರನಾಥ ಯಾತ್ರಿಗಳಿದ್ದ ಬಸ್ ಅನ್ನು ಶ್ರೀನಗರದ ಹತ್ತಿರ ಚಲಾಯಿಸುತ್ತಿದ್ದಾಗ ಭಯೋತ್ಪಾದಕರು ಆ ವಾಹನದ ಮೇಲೆ ದಾಳಿ ಮಾಡಿದರು. ಆಗ ಭಯೋತ್ಪಾದಕರು ಬಸ್ ಏರದಂತೆ ಒಳಗಿನಿಂದಲೇ ಸಲೀಂ ಬಾಗಿಲನ್ನು ಲಾಕ್ ಮಾಡಿದರು. ಆದರೂ ಭಯೋತ್ಪಾದಕರು ಹೊರಗಿನಿಂದ ಸಿಡಿಸಿದ ಗುಂಡುಗಳಿಗೆ ಬಸ್‌ನಲ್ಲಿದ್ದ ಏಳು ಪ್ರಯಾಣಿಕರು ಸತ್ತುಹೋದರು. ಆಗ ಅಕಸ್ಮಾತ್ ಸಲೀಂ ಶೇಖ್ ಭಯಭೀತನಾಗಿ ಬಸ್‌ಅನ್ನು ನಿಲ್ಲಿಸಿದ್ದರೆ ಆತ ಮಾತ್ರವಲ್ಲ, ಬಸ್‌ನಲ್ಲಿದ್ದ ಇತರೆ 50 ಜನರೂ ಸತ್ತುಹೋಗುತ್ತಿದ್ದರು. ಆದರೆ ಸಲೀಂ ಧೃತಿಗೆಡದೆ ಧೈರ್ಯದಿಂದ ಬಸ್ ಚಲಾಯಿಸುತ್ತಾ ಅದನ್ನು ಸುರಕ್ಷಿತ ಸ್ಥಳಕ್ಕೆ ತಗೆದುಕೊಂಡು ಹೋಗಿದ್ದರಿಂದ ಬಸ್‌ನಲ್ಲಿದ್ದ 50 ಜನರ ಪ್ರಾಣ ಉಳಿಯಿತು. ಸಲೀಂ ಶೇಖ್ ಅವರಿಗೊಂದು ದೊಡ್ಡ ಸಲಾಂ.

ಅಬ್ದುಲ್ ರವೂಫ್ ಮತ್ತು ಸಲೀಂ ಶೇಖ್ ಅವರ ಕ್ರಿಯೆಗಳು ಇವತ್ತು ಯಾಕೆ ಮುಖ್ಯವಾಗುತ್ತವೆ ಎಂಬುದನ್ನು ಫೇಸ್‌ಬುಕ್ ಮಿತ್ರರೊಬ್ಬರು ಹಂಚಿಕೊಂಡ ಬಗೆ ಮನಕಲಕುತ್ತದೆ. ಮಿತ್ರರು ಹೀಗೆ ಬರೆದಿದ್ದರು: "ರೈಲು ಬೋಗಿಯಲ್ಲಿದ್ದ ಐವತ್ತಕ್ಕೂ ಹೆಚ್ಚು ಹಿಂದೂ ಜನರು ಅಮಾಯಕ ಮುಸಲ್ಮಾನ ಬಾಲಕ ಜುನೈದನ ಪ್ರಾಣವನ್ನು ಉಳಿಸಲು ಮುಂದಾಗಲಿಲ್ಲ, ಆದರೆ ಒಬ್ಬ ಮುಸಲ್ಮಾನ ಐವತ್ತು ಹಿಂದೂ ಯಾತ್ರಿಕರ ಪ್ರಾಣ ರಕ್ಷಿಸಿದರು."

ಇದೆಲ್ಲ ಆರೆಸ್ಸೆಸ್ ಬುದ್ಧಿಯ ಮೋದಿ ಭ್ರಮೆಯ ಇಂಡಿಯಾದ ಬಗ್ಗೆ ಏನನ್ನು ಹೇಳುತ್ತದೆ... ನೀವೇ ಯೋಚಿಸಿ...




• ಗೌರಿ ಲಂಕೇಶ್
editorlankesh@gmail.com

ಸಂಘವಲ್ಲ ಕಣಾ, ನನ್ನ ನಿನ್ನ ಸಂಗ ಮುಖ್ಯ

...ಯು ರವೂಫ್,
...ಲ್ಲರೂ ನೋಡುತ್ತಾ ನಿಂತಿದ್ದರು.
...ನೊಬ್ಬನೆ
ಅಲ್ಲಿ ಮನುಷ್ಯನಂತೆ ಇದ್ದೆ.
...ಕ್ತದ ಮಡುವಿನಲ್ಲಿ ಬಿದ್ದವನನ್ನು
...ನು ಎದೆಗಪ್ಪಿಕೊಂಡು ಎತ್ತಿ
ಆಸ್ಪತ್ರೆಗೆ ಸಾಗಿಸಿದೆ.

...ಘದಲ್ಲಿ ಅಭ್ಯಾಸದ ವೇಳೆ
...ಮ್ಮ ಕುರಿತು
...ದರೆ ನಿನ್ನವರ ಕುರಿತು
...ವರು ಅಂದುಕೊಂಡವರು
...ಗೆಲ್ಲ ಹೇಳಿದ್ದು
...ತಹ ಸುಳ್ಳು ಎಂದು
...ಮ್ಮ ರಿಕ್ಷಾದಲ್ಲೇ ನನ್ನನ್ನು
...ನು ಎದೆಗವಚಿಕೊಂಡು
...ೂತಿದ್ದಾಗ ಅರಿವಾಯಿತು.

...ಘವಲ್ಲ ಕಣಾ
...ಮ್ಮ ನಿನ್ನ ಸಂಗ ಮುಖ್ಯ
...ನು ಬರಬೇಕಂತಲೇ ಇದ್ದೆ
...ಮ್ಮ ರಕ್ತಮಂಟಿದ ನಿನ್ನ ಅಂಗಿ
... ಕೈಯಾರೆ ತೊಳೆದು
... ಮಾಡಿ ಕೊಡಬೇಕು
...ನು ಆಸೆಪಟ್ಟು ಅಂದುಕೊಂಡಿದ್ದೆ,



ಕ್ಷಮಿಸು ರವೂಫ್,
ಬರಲಾಗುತ್ತಿಲ್ಲ ನನಗೆ
ಉದಯ ಲಾಂಡ್ರಿ ಅಸ್ತಂಗತವಾಗಿದೆ.
ನನ್ನ ರಕ್ತ ಮೆತ್ತಿದ
ನಿನ್ನ ಅಂಗಿಯನ್ನು
ಹಾಗೆಯೆ ಇಟ್ಟಿರು,
ಜಗತ್ತಿಗೆ ತೋರಿಸು.

ಸಂಘವಲ್ಲ ಕಣಾ
ನನ್ನ ನಿನ್ನ ಸಂಗ
ಅದು ಮಾತ್ರ ಮುಖ್ಯ
ದುಬಾದಲ್ಲಿ ನೆನಪಿಡುವೆಯಲ್ಲ
ನಾನು ಕಂಡ ಕೊನೆಯ ವ್ಯಕ್ತಿ
ಮತ್ತು ಮೊದಲ ಗೆಳೆಯ ನೀನೆ.
ಇಂತೀ .ಶರತ್
ದಿವಂಗತ ಮನುಷ್ಯ

• ಶಶಿಧರ್ ಹೆಮ್ಮಾಡಿ

ನಾನೇ ಕೊನೆ, ಮತ್ತೆಂದಿಗೂ ರಕ್ತ ಚಿಮ್ಮದಿರಲಿ

ಒಂದು ವಿನಂತಿಯಿದೆ, ಎಚ್ಚರಿಕೆಯೆಂದೇ ತಿಳಿಯಿರಿ,
ದೇವ್ರಾಣೆಗೂ ಬೇಜಾರಿಲ್ಲ, ಖೇದವೂ ಇಲ್ಲ!!
ಮಂಗಳೂರಿನ ಕಲ್ಲಡ್ಕದವ ನಾನು,
ಮಂಗಳೂರು, ಕಲ್ಲಡ್ಕ ಗೊತ್ತಲ್ಲ?? ಜೀವಕ್ಕೆ ಜೀವ!!

ಮೊನ್ನೆ ಅಶ್ರಫ್, ಇಂದು ಶರತ್,
ಪ್ರಜ್ಞಾವಂತರಂತೆ ಥೂ...
ನಾಳೆ ನಾನೂ ಆಗಿರಬಹುದು.
ಸಮಯ, ಜಾಗ ಅರಿವಿಲ್ಲದೆ ಅಲೆದಾಡುವವ ನಾನು
ರಾಕ್ಷಸರ ಕೈಗೆ ಸಿಗಲು ಒಂದೇಕ್ಷಣ...!!
ಸಾವು ನಿಗಿ ನಿಗಿ ಸತ್ಯ, ಬಂದೇ ಬರುತ್ತದೆ.
ಒಂದು ವೇಳೆ ನನ್ನ ಕೊಂದರೆ, ಹಾಗೇ ಇದ್ದು ಬಿಡಿ,
ಸಂಭ್ರಮಿಸುವವರು ಸಂಭ್ರಮಿಸಲಿ ಬಿಡಿ,
ನಿಮಗೇನು ತೊಂದರೆ, ಹಾ??

ಸರಣಿ ಮುಂದುವರೆಯದಿರಲಿ, ಕೊನೆಯವನಾಗಿ ನಾನೇ ಸಾಕು.
ಇದು ನನ್ನ ವಿನಂತಿ, ಎಚ್ಚರಿಕೆಯೆಂದೇ ತಿಳಿಯಿರಿ ಪರವಾಗಿಲ್ಲ,
ನನ್ನ ಕೊಂದರೆ, ಯಾರೂ ಕರಾಳ ದಿನವೆನ್ನದಿರಿ,
ಬಂದ್ ಆಚರಿಸದಿರಿ.
ನೆರೆಯ ಶಿವಪ್ಪಜ್ಜನ ಮನೆಯಿಂದ ಬಸಳೆ ಸೊಪ್ಪು ತಂದು,
ಘಮಘಮ ಪದಾರ್ಥ ಮಾಡಿ,
ನನ್ನ ಸದ್ಗತಿಗೆ ಪ್ರಾರ್ಥಿಸಿರಿ. ಅಷ್ಟೇ ಸಾಕು.

ಆ ದಿನ ಸಂತಾಪವೆಂದು
ಯಾವ ರಾಜಕೀಯದ ನಾಯಿಯೂ
ನನ್ನ ಹೊಸಿಲು ತುಳಿಯದಿರಲಿ.
ಸಾಧ್ಯವಿದ್ದರೆ ಆ ದಿನ ಊರು ಬಿಟ್ಟು ತೊಲಗಿಲಿ.
ಮೌನವಾಗಿದ್ದು ಬಿಡಿ, ಅದೇ ನನಗೆ ಗೌರವ, ಸಾಕಷ್ಟೇ.

ವಿನಂತಿಯಿದೆ, ಎಚ್ಚರಿಕೆಯೇ ಎಂದುಕೊಳ್ಳಿ.
ನನ್ನ ಕೊಂದ ದಿನ
ಯಾರೋ ಒಬ್ಬ ಮನುಷ್ಯನ
ಕೊಂದರೆಂದು ಮರುಕಪಟ್ಟು ಸುಮ್ಮನಿದ್ದು ಬಿಡಿ.
ಸ್ವಧರ್ಮಿಯನ ಕೊಂದರೆಂದು ಪ್ರತಿಕ್ರಿಯಿಸದಿರಿ,
ಪ್ರತಿಕಾರವೆಂದು ಇನ್ನೊಬ್ಬ ತಾಯಿಯ
ಕಣ್ಣೀರ ಶಾಪಕ್ಕೆ ಯಾವೊಬ್ಬನೂ ಬೀಳದಿರಿ.


ಎಚ್ಚರಿಕೆಯಿದೆ,
ಓಟು ಪಡೆವ ನಾಯಿಗಳೆ ಅರಿತುಬಿಡಿ.
ವಿನಂತಿಯೆಂದರೆ,
ಸಾಧ್ಯವಿದ್ದರೆ ತಣ್ಣಗೆ ನನ್ನ ಕೊಂದವರ ಕ್ಷಮಿಸಿಬಿಡಿ.
ನನಗೆ ಸಾಕಷ್ಟೆ.

ನಾನೇ ಕೊನೆ, ಮತ್ತೆಂದಿಗೂ ರಕ್ತ ಚಿಮ್ಮದಿರಲಿ.

• ಬಾಪು ಅಮ್ಮೆಂಬಳ

(ರಾಜಕೀಯ ಚದುರಂಗದಾಟಕ್ಕೆ ಬಲಿಯಾದ ಪವಿತ್ರಾತ್ಮಗಳಿಗೆ ಅರ್ಪಣೆ)

ಚಿತ್ರದುರ್ಗ: ಜೆಡಿಎಸ್ ಬಾಗಿಲಲ್ಲಿ ತಿಪ್ಪಾರೆಡ್ಡಿಯ 'ಆಪರೇಷನ್ ಡಬಲ್‌ಗೇಮ್'




ಚಿತ್ರದುರ್ಗದ ಹಾಲಿ ಬಿಜೆಪಿ ಶಾಸಕ ತಿಪ್ಪಾರೆಡ್ಡಿಯ ಅಷ್ಟೂ ಪೊಲಿಟಿಕಲ್ ಗೆಲುವುಗಳನ್ನು ಅಡ್ಡಡ್ಡ ಕೊಯ್ದು ಪೋಸ್ಟ್‌ಮಾರ್ಟಂ ಮಾಡಿನೋಡಿದರೆ ಅಲ್ಲಿ ದಕ್ಷ ಜನಾಭಿಪ್ರಾಯಕ್ಕಿಂತ ಹೊಲಸು ತಂತ್ರಗಾರಿಕೆಯ ವ್ರಣಗಳೇ ಕಾಣಬರುತ್ತವೆ. ತನ್ನ ಪೊಲಿಟಿಕಲ್ ಮೈಲೇಜಿಗೋಸ್ಕರ ಆತ ಕಟ್ಟಿದ ರಾಜಕೀಯ ಥೋರಿಗಳಿಗೆ ಲೆಕ್ಕವಿಲ್ಲ. ಆತನದ್ದು ಪರಮ ಸಮಯಸಾಧಕ ರಾಜಕಾರಣ. ಲಿಂಗಾಯತರ ಏಕಾಂತಯ್ಯನಂತಹ ಪ್ರಭಾವಿ ಕೈ ರಾಜಕಾರಣಿಯ ವಿರುದ್ಧ ಪಕ್ಷೇತರನಾಗಿ ಗೆದ್ದ ತಿಪ್ಪಾರೆಡ್ಡಿಯ ಮೊದಲ ಗೆಲುವಿಂದ ಹಿಡಿದು ಇಲ್ಲಿಯವರೆಗಿನ ಆತನ ಗೆಲುವುಗಳೆಲ್ಲ ಪಕ್ಕಾ ಹೈಬ್ರಿಡ್ ಗೆಲುವುಗಳು ಎಂಬುದರಲ್ಲಿ ಎರಡು ಮಾತಿಲ್ಲ. ವಿರೋಧಿ ಪಕ್ಷದ ಅತೃಪ್ತ ಮತ್ತು ಬಂಡಾಯ ಆತ್ಮಗಳನ್ನೆಲ್ಲ ಗುಡ್ಡೆ ಹಾಕಿಕೊಂಡೊ ಅಥವಾ ವಿರೋಧಿ ಪಾಳಯದಲ್ಲಿ ಗೊಂದಲವನ್ನು ಹುಟ್ಟುಹಾಕಿಯೋ ಗೆದ್ದು ಬಿಡೋದು ತಿಪ್ಪಾರೆಡ್ಡಿಯ ವೆರಿಓಲ್ಡ್ ಫಾರ್ಮುಲಾ. 2018ಕ್ಕೂ ಅಂತದ್ದೇ ಗೆಲುವಿಗಾಗಿ ಈಗಾಗಲೇ ಮಸಲತ್ತು ಶುರು ಹಚ್ಚಿಕೊಂಡಿದ್ದಾನೆ.

ನಾಚಿಕೊಳ್ಳುವಂತೆ ರಾಜ್ಯ ಸರ್ಕಾರದ ಭಾಗ್ಯಗಳ ಗುಣಗಾನ ಮಾಡುತ್ತಾ, ಸಿಎಂ ಸಿದ್ದರಾಮಯ್ಯನ ಖರಾಕು ಹಾಕುತ್ತಿರುವ ತಿಪ್ಪಾರೆಡ್ಡಿ ಕಾಂಗ್ರೆಸ್ ಸೇರ್ತಾನೆ ಅನ್ನೋ ವಾತಾವರಣ ಸೃಷ್ಟಿಯಾಗಿತ್ತು. ಅರ್ಥಾತ್ ತಿಪ್ಪಾರೆಡ್ಡಿ ಸೃಷ್ಟಿ ಮಾಡಿದ್ದ. ಆದರೆ ಈಗ ಜೆಡಿಎಸ್ ಸೇರುತ್ತಿದ್ದಾನೆ ಅನ್ನೋ ವದಂತಿಗಳು ಹರಿದಾಡುವಂತೆ ಮಾಡಿದ್ದಾನೆ. ಒಟ್ಟಿನಲ್ಲಿ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಈ ಮೂರೂ ಪಾರ್ಟಿಗಳಲ್ಲಿನ ಟಿಕೆಟ್ ತಂತ್ರಗಾರಿಕೆಗಳನ್ನು ಬುಡಮೇಲು ಮಾಡಿ, ಹೊಸಹೊಸ ಬಂಡಾಯಗಾರರನ್ನು, ಅತೃಪ್ತ ಆತ್ಮಗಳನ್ನೂ ಸೃಷ್ಟಿ ಮಾಡಿ ಅವರ ನೆರವಿಂದಲೇ ಗೆದ್ದು ಬರುವ ತಂತ್ರಕ್ಕೆ ತಿಪ್ಪಾರೆಡ್ಡಿ ಚಾಲನೆ ನೀಡಿರೋದು ಸಾಬೀತಾಗುತ್ತೆ.

ಅಸಲಿಗೆ, ಕೆಲದಿನಗಳ ಹಿಂದಷ್ಟೇ ಪತ್ರಿಕಾಗೋಷ್ಠಿ ಕರೆದಿದ್ದ ತಿಪ್ಪಾರೆಡ್ಡಿ ತಾನು ಮುಂದಿನ ಸಲ ಚಿತ್ರದುರ್ಗ ಕ್ಷೇತ್ರ ಬಿಟ್ಟು ಹಿರಿಯೂರಿನಿಂದ ಸ್ಪರ್ಧಿಸುವುದಾಗಿ ಹೇಳಿದಾಗಲೇ ಆತ ಜೆಡಿಎಸ್ ಸೇರಬಹುದೆನ್ನುವ ವಾಸನೆ ಬಡಿದಿತ್ತು. ಯಾಕೆಂದರೆ ಹಿರಿಯೂರಿನಿಂದ ಬಿಜೆಪಿ ಟಿಕೆಟ್ ಮಾಜಿ ಮಂತ್ರಿ ದಿವಂಗತ ಎ.ಕೃಷ್ಣಪ್ಪನ

ವಿಧಾನಸಭಾ ಕ್ಷೇತ್ರಕ್ಕೆ ಒಳಪಡುತಿತ್ತು, ತಿಪ್ಪಾರೆಡ್ಡಿಯ ಗೆಲುವುಗಳಿಗೆ ಅತಿಹೆಚ್ಚು 'ಲೀಡ್' ತಂದುಕೊಡುತ್ತಿದ್ದ ಪ್ರಾಂತ್ಯ ಅದು. ಹಾಗಾಗಿ ಐಮಂಗಲ ಸುತ್ತಮುತ್ತಲ ಮತಗಳ ಮೇಲೆ ಆತನಿಗೆ ಒಳ್ಳೆಯ ಹಿಡಿತವಿದೆ. ಈಗ ಅದು ಹಿರಿಯೂರು ಕ್ಷೇತ್ರದಲ್ಲಿರೋದರಿಂದ ಆತ ಹಿರಿಯೂರಿನಿಂದ ಸ್ಪರ್ಧಿಸಿದರೂ ಗೆಲ್ಲುವ ಚಾನ್ಸ್ ಇರುತ್ತೆ. ಅಲ್ಲದೇ ಹಾಲಿ ಶಾಸಕ ಸುಧಾಕರ್ ಕ್ಷೇತ್ರದಲ್ಲಿ ತಕ್ಕಮಟ್ಟಿಗೆ ಹೆಸರು ಕೆಡಿಸಿಕೊಂಡಿದ್ದಾನೆ. ಇನ್ನು ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿರುವ ಗೊಲ್ಲರ ಸಮುದಾಯದ ಶ್ರೀನಿವಾಸ್‌ಗೆ ಜಾತಿ ಲೆಕ್ಕಾಚಾರವೇ ಮೈನಸ್ ಆಗುವ ಸಾಧ್ಯತೆ ಇದೆ. ಇಲ್ಲಿ ಗೊಲ್ಲ ಮತಗಳೇ ಅಧಿಕ ಸಂಖ್ಯೆಯಲ್ಲಿದ್ದರೂ, ಇನ್ನುಳಿದ ಜಾತಿ ಮತಗಳು ಗೊಲ್ಲರ ಸಮುದಾಯಕ್ಕೆ ಪ್ರತಿಯಾಗಿ ಧ್ರುವೀಕರಣಗೊಳ್ಳುವುದು ಇಲ್ಲಿನ ಸಂಪ್ರದಾಯ. ಅದೇ ಕಾರಣಕ್ಕೆ ಗೊಲ್ಲ ಸಮುದಾಯದ ಎ.ಕೃಷ್ಣಪ್ಪ ಜೆಡಿಎಸ್‌ನಿಂದ ಸ್ಪರ್ಧಿಸಿದರೂ ಆತನ ಎದುರಾಳಿಯಾಗಿ ಕಾಂಗ್ರೆಸ್‌ನಿಂದ ಅಖಾಡಕ್ಕಿಳಿದಿದ್ದ, ಲೆಕ್ಕ ಹಾಕಿದರೂ ನೂರಿನ್ನೂರು ಮತಗಳನ್ನೂ ದಾಟದ ಜೈನ ಸಮುದಾಯದ ಡಿ.ಸುಧಾಕರ್ ಗೆದ್ದು ಬರಲು


ಹರಿದಾಡುತ್ತಿರೋ ಇಂಥಾ ಗಾಳಿಸುದ್ದಿಗಳನ್ನು ಎಷ್ಟರಮಟ್ಟಿಗೆ ನಂಬಬೇಕೊ ಗೊತ್ತಿಲ್ಲ. ಆದರ… ಒಂದಂತೂ ಸತ್ಯ, ಮುಂದಿನ ಸರಕಾರ ರಚನೆ… ಒಂದು ಮಂತ್ರಿಗಿರಿ ಲಪಟಾಯಿಸುವ ತುರಿಕೆ… ತಿಪ್ಪಾರೆಡ್ಡಿಯ ಮುಖದಲ್ಲಿ ಭರ್ಜರಿಯಾಗೇ ಕಾ… 2018ರ ಫಲಿತಾಂಶದ ನಂತರ ಸ್ಪಷ್ಟ ಬಹುಮ… ಯಾವ ಪಕ್ಷಕ್ಕೂ ಸಿಗದೆ, ನಲವತ್ತೋ ಐವತ್ತೋ… ಸೀಟು ದಕ್ಕಿಸಿಕೊಳ್ಳುವ ಜೆಡಿಎಸ್ ಕಿಂಗ್‌ಮೇ…




ಏಕಾಂತಯ್ಯ




ಸೌಭಾಗ್ಯ



ರಘು ಆಚಾರ್



ಮಂಜುನಾಥ್



ಷಣ್ಮುಖಪ್ಪ

ತನ್ನ ರಾಜಕೀಯ ಭವಿಷ್ಯದ' ಬಗ್ಗೆ ದಿನಕ್ಕೊಂದು ಗಾಸಿಪ್ ಹರಡುವಂತೆ ಮಾಡುತ್ತಿರುವ ತಿಪ್ಪಾರೆಡ್ಡಿ ಜಿಲ್ಲಾ ರಾಜಕಾರಣವನ್ನು ತಬ್ಬಿಬ್ಬು ಮಾಡುತ್ತಿದ್ದಾನೆ. ಆತ ಸದ್ಯ ಬಿಜೆಪಿಯಲ್ಲಿದ್ದರೂ ಪಕ್ಷದ ಸಂಘಟನೆಯಿಂದ ಬಲು ದೂರವೇ ಉಳಿದಿದ್ದಾನೆ. ಕೇಸರಿ ಬ್ಯಾನರ್‌ನಲ್ಲಿ ಆತನ ಮುಖ ಕಂಡೇ ಬಹಳ ದಿನವಾಯ್ತು. ಯಡ್ಯೂರಪ್ಪ ಅದ್ಯಾವಾಗ ರಾಜ್ಯಾಧ್ಯಕ್ಷನಾಗಿ ಆತನ ಜಾತಸ್ಥ ನವೀನ್ ಎಂಬ ಎಳಸು ಮುಖ ಚಿತ್ರದುರ್ಗದಲ್ಲಿ ಕದಲಾಡಲು ಶುರುವಾಯ್ತೋ ಆಗಿನಿಂದಲೇ ತಿಪ್ಪಾರೆಡ್ಡಿ ಬಿಜೆಪಿ ಸಭೆ, ಸಮಾರಂಭಗಳಿಗೆ ಚಕ್ಕರ್ ಹೊಡೆಯಲು ಶುರು ಮಾಡಿದ್ದ. ಮುಂದಿನ ಎಲೆಕ್ಷನ್ ಹೊತ್ತಿಗೆ ಆತ ಬಿಜೆಪಿಯಲ್ಲಿ ಇರೋಲ್ಲ ಅನ್ನೋದು ನಿಕ್ಕಿಯಾಗಿದೆ.

ಆದರೆ ಆತ ಕಾಂಗ್ರೆಸ್ ಸೇರ್ತಾನೋ ಅಥವಾ ಜೆಡಿಎಸ್ ತೆನೆ ಹೊರ್ತಾನೋ ಅನ್ನೋದೆ ವಿಷಯ. ಸಾರ್ವಜನಿಕ ಫಂಕ್ಷನ್‌ಗಳಲ್ಲಿ ಕಾಂಗ್ರೆಸ್ ಶಾಸಕರುಗಳೂ

ಅಳಿಯ ಶ್ರೀನಿವಾಸ್‌ಗೆ ಅನ್ನೋದು ನಿಕ್ಕಿಯಾಗಿದೆ. ಮಡದಿಯನ್ನು ಬೆಂಗಳೂರಿನ ಬಿಬಿಎಂಪಿ ಕಾರ್ಪೊರೇಟರ್ ಮಾಡಿರುವ ಶ್ರೀನಿವಾಸ್ ಅದಾಗಲೇ ಹಿರಿಯೂರಿನ ಊರೂರು ಸುತ್ತುತ್ತಿದ್ದಾನೆ. ಇನ್ನು ಕಾಂಗ್ರೆಸ್‌ನಲ್ಲಿ ಹಾಲಿ ಶಾಸಕ ಡಿ.ಸುಧಾಕರ್‌ಗೆ ಕೈಟಿಕೆಟು ತಪ್ಪಿಸುವುದು ಕಷ್ಟದ ಮಾತು. ಹೀಗಿರುವಾಗ ಬಿಜೆಪಿ, ಕಾಂಗ್ರೆಸ್ ಬಿಟ್ಟರೆ ಅಲ್ಲಿ ಸದ್ಯಕ್ಕೆ ಖಾಲಿಯಿರೋದು ಜೆಡಿಎಸ್ ಜಾಗ ಮಾತ್ರ. ಹಾಗಾಗಿ ಆತ ಹಿರಿಯೂರಿನಿಂದ ಸ್ಪರ್ಧಿಸುವುದೇ ನಿಜವಾದರೆ ಜೆಡಿಎಸ್ ಅಭ್ಯರ್ಥಿಯಾಗಿ ಅನ್ನೋ ಗುಮಾನಿ ಬಂದಿತ್ತು. ಅದೀಗ ದಟ್ಟವಾಗುವಂತೆ ಸ್ವತಃ ತಿಪ್ಪಾರೆಡ್ಡಿಯೇ ವದಂತಿ ಹರಡಿಸುತ್ತಿದ್ದಾನೆ.

ಅಂದಹಾಗೆ, ತಿಪ್ಪಾರೆಡ್ಡಿ ಹಿರಿಯೂರನ್ನು ಆಯ್ಕೆ ಮಾಡಿಕೊಳ್ಳುವುದಕ್ಕೂ ಒಂದು ಕಾರಣವಿದೆ. ಈ ಮೊದಲು ಐಮಂಗಲ ಹೋಬಳಿ ಚಿತ್ರದುರ್ಗ

ಸಾಧ್ಯವಾದದ್ದು. ಇದನ್ನೇ ಎನ್‌ಕ್ಯಾಶ್ ಮಾಡಿಕೊಂಡು ತಾನು ಜೆಡಿಎಸ್‌ನಿಂದ ಸ್ಪರ್ಧಿಸಿದರೆ ಗೆಲುವು ಗ್ಯಾರಂಟಿ ಅನ್ನೋದು ಆತನ ಲೆಕ್ಕಾಚಾರ.

ಈಗಾಗಲೇ ಈ ಕುರಿತು ತಿಪ್ಪಾರೆಡ್ಡಿ, ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಜೊತೆ ಒಂದು ಸುತ್ತಿನ ಮಾತುಕತೆ ಕೂಡಾ ಮುಗಿಸಿದ್ದಾನೆ ಎನ್ನಲಾಗುತ್ತಿದೆ. ಅದೂ ಇಲ್ಲಲ್ಲ, ದೂರದ ಅಮೆರಿಕದಲ್ಲಂತೆ. ತಮ್ಮ ಮಗ ನಿಖಿಲ್‌ನ ಎರಡನೇ ಸಿನಿಮಾ ಪ್ರಿ-ಪ್ರೊಡಕ್ಷನ್ ಕೆಲಸಕ್ಕೆಂದು ಕುಮಾರಸ್ವಾಮಿಯವರು ಅಮೆರಿಕಗೆ ತೆರಳಿದ್ದಾಗ ತನ್ನ ಅಣ್ಣ ಮತ್ತು ಸಂಬಂಧಿಕರನ್ನು ಭೇಟಿಯಾಗುವ ನೆಪದಲ್ಲಿ ಅಮೆರಿಕಗೆ ಹಾರಿದ್ದ ತಿಪ್ಪಾರೆಡ್ಡಿ ಅಲ್ಲಿ ಜೆಡಿಎಸ್ ಸೇರುವ ಬಗ್ಗೆ ಮಾತುಕತೆ ನಡೆಸಿದ್ದಾನೆ ಎಂಬ ಗಾಸಿಪ್ ಜೋರಾಗಿಯೇ ಕೇಳಿಬರುತ್ತಿದೆ. ಬರೀ ಗಾಸಿಪ್‌ಗಳಿಂದಲೇ ರಾಜಕಾರಣ ಮಾಡಿಕೊಂಡು ಬಂದ ತಿಪ್ಪಾರೆಡ್ಡಿ ಬಗ್ಗೆ

ಆಗಲಿದೆ ಅನ್ನೋ ಸ್ವಯಂಕೃತ ಗುಣಾಕಾರವೇ ತಿಪ್ಪಾರೆಡ್ಡಿಯನ್ನು ಜೆಡಿಎಸ್ ತೆನೆ ಹೊರಲು ಒತ್ತಾಯಿಸುತ್ತಿದೆಯಂತೆ.

ಅತೃಪ್ತ ಆತ್ಮಗಳಿಗೆ ಸ್ಕೆಚ್

ವಿರೋಧಿ ಪಾಳಯಗಳಲ್ಲಿ ಸಾಧ್ಯವಾದಷ್ಟು… ಆತ್ಮಗಳನ್ನು ಸೃಷ್ಟಿಸಿ, ಅವರ ಮೂಲಕವೇ ಗ… ಸೃಷ್ಟಿಸಿ ಗೆದ್ದು ಬರೋದು ತಿಪ್ಪಾರೆಡ್ಡಿಯ ತಂತ್ರ… ಜಗಳೂರಿನಲ್ಲಿ ಕಾಂಗ್ರೆಸ್‌ನಿಂದ ನಿಂತು ಗೆಲ್ಲುತ್ತಿ… ಅಣ್ಣ ಅಶ್ವಥ್‌ರೆಡ್ಡಿಯನ್ನು ಬರೋಬ್ಬರಿ ನಾಲ್ಕು… ಗೆಲ್ಲಿಸಿಕೊಂಡದ್ದು ಇಂತದೇ ತಂತ್ರದಿಂದ. 19… ಮೊದಲ ಬಾರಿ ಸ್ವತಃ ತಿಪ್ಪಾರೆಡ್ಡಿ ಗೆದ್ದಿದ್ದು ಕೂ… ಇದೇ ಫಾರ್ಮುಲಾದಲ್ಲಿ. ಆ ಸಲ ಆತ ಚಿತ್ರ… ಕೈ ಟಿಕೆಟ್‌ಗೆ ಭಾರೀ ಪ್ರಯತ್ನಪಟ್ಟಿದ್ದ. ಆದರೆ… ಕಾಂಗ್ರೆಸ್ ಹೈಕಮಾಂಡ್ ನೂರುಲ್ಲಾ ಷರಿಫ್‌ಗೆ…

▶▶ 5


ಹೊಳಲ್ಕೆರೆ ಬಿಜೆಪಿ ಟಿಕೆಟ್‌ಗಾಗಿ ಬಾಡೂಟ ಸ್ಪರ್ಧೆ!

ಹೊಳಲ್ಕೆರೆ ಬಿಜೆಪಿಯಲ್ಲಿ ಟಿಕೆಟ್‌ಗಾಗಿ ಭಾರಿ ಪೈಪೋಟಿಯೇ ನಡೆಯುತ್ತಿದೆ. ಮಾಜಿ ಶಾಸಕ, ಯಡ್ಡಿಯ ಪರಮಾಪ್ತ ಚಂದ್ರಪ್ಪ ಟಿಕೆಟ್ ಪಡೆಯುವ ಹವಣಿಕೆಯಲ್ಲಿದ್ದರೆ, ಆತನ ವಿರೋಧಿ ಬಣ ಹನುಮಕ್ಕ ಎಂಬ ರೊಕ್ಕಸ್ಥ ಹೆಂಗಸನ್ನು ಅಖಾಡಕ್ಕೆ ಕೆಡವಲು ಸದ್ದಿಲ್ಲದೆ ಕಸರತ್ತು ನಡೆಸಿದೆ. ದರ್ಪಿಷ್ಟ ಚಂದ್ರಪ್ಪನ ವೈಖರಿಗೆ ಸ್ಥಳೀಯ ಬಿಜೆಪಿಗರು ಸಿಟ್ಟಾಗಿ ಕೂತಿದ್ದಾರೆ. ಆತ ಶಾಸಕನಾಗಿದ್ದಾಗ ಸ್ವಪಕ್ಷೀಯರಿಗೂ ಅವಕಾಶ ಕೊಡದೆ ನಡೆಸಿದ್ದ ಮೆರ್ಯಾಟ ಅವನ ವಿರೋಧಿ ಬಣ ಹುಟ್ಟುಹಾಕಿತ್ತು. ಆದರೆ ಯಡ್ಡಿಯ ಆಪ್ತನೆಂಬ ಕಾರಣಕ್ಕೆ ಬಿಜೆಪಿಯ ಬಿ-ಟೀಮು ನೇರ ಕಾರ್ಯಾಚರಣೆಗೆ ಇಳಿದಿರಲಿಲ್ಲ. ಆದರೂ ಶಿವಪುರದ ರಮೇಶ್ ಎಂಬ ಮಾಜಿ ಶಾಸಕನ ನೇತೃತ್ವದಲ್ಲಿ ಚಂದ್ರಪ್ಪನಿಗೆ ಪರ್ಯಾಯ ನಾಯಕತ್ವವನ್ನು ಹುಟ್ಟುಹಾಕುವ ಕಾಯಕದಲ್ಲಿತ್ತು. ಆಗ ಅವರಿಗೆ ಅಸ್ತ್ರವಾಗಿ ಕಂಡದ್ದು ಹನುಮಕ್ಕ. ಬೋವಿ ಸಮುದಾಯದ ಈಕೆಯ ಗಂಡ ಆಂಜನೇಯ ಇದೇ ಹೊಳಲ್ಕೆರೆಯಲ್ಲಿ ಹತ್ತಾರು ವರ್ಷ ಇಒ ಆಗಿ ಕಮಾಯಿ ಮಾಡಿದ್ದವ. ಈಗಲೂ ಸರ್ಕಾರಿ ಹುದ್ದೆಯಲ್ಲಿದ್ದಾನೆ. ರಿಟೈರ್‌ಮೆಂಟ್ ಹತ್ತಿರದಲ್ಲೇ ಇರುವ ಆತನಿಗೆ ನಿವೃತ್ತಿ ಬದುಕನ್ನು ರಾಜಕಾರಣದಲ್ಲಿ ಕಳೆಯುವಾಸೆ. ಹಾಗಾಗಿ ಹೆಂಡತಿ ಮೂಲಕ ಆದಕ್ಕೆ ಚಾಲನೆ ನೀಡಿದ್ದ. ಮೊದಮೊದಲು ಕಾಂಗ್ರೆಸ್‌ನಲ್ಲಿ ಓಡಾಡಿದರೂ ಹನುಮಕ್ಕ ಚಲಾವಣೆಗೆ ಬಂದದ್ದು ಬಿಜೆಪಿಗೆ ಬಂದಮೇಲೆ.

ಹೊಳಲ್ಕೆರೆಯಂತಹ ಮೀಸಲು ಕ್ಷೇತ್ರದಲ್ಲಿ ಆಕೆ ಮತ್ತು ಆಕೆಯ ಗಂಡನ ರೊಕ್ಕವೇ ಚಂದ್ರಪ್ಪನಿಗೆ ಸರಿಯಾದ ಪ್ರತಿಸ್ಪರ್ಧಿ ಅನ್ನೋ ತೀರ್ಮಾನಕ್ಕೆ ಬಿ-ಟೀಮು ಬಂದಾಗಿತ್ತು.

ಅದ್ಯಾವಾಗ ಯಡ್ಡಿಯ ಬಾಲಬಡುಕನಂತೆ ಚಂದ್ರಪ್ಪ ಬಿಜೆಪಿ ತೊರೆದು ಕೆಜೆಪಿ ಹೊಕ್ಕನೋ ಆಗಿನಿಂದ ಹನುಮಕ್ಕನನ್ನು ಈ ಬಿ-ಟೀಮು ಭರ್ಜರಿಯಾಗೇ ಬೆಳೆಸಿತು. ಈಗ ಚಂದ್ರಪ್ಪ ಬಿಜೆಪಿಗೆ ವಾಪಸಾದರೂ ಬಿಜೆಪಿಯ ಬಿ-ಟೀಮಿಗೆ ಹನುಮಕ್ಕನೇ ಫೇವರಿಟ್. ಈ ಹಿಂದೆಯೇ ಅಂದರೆ ಚಂದ್ರಪ್ಪ ಇನ್ನು ಬಿಜೆಪಿಯಲ್ಲಿ ಇರುವಾಗಲೇ ಹನುಮಕ್ಕನನ್ನು ಜಿ.ಪಂ. ಎಲೆಕ್ಷನ್‌ನಲ್ಲಿ ಗೆಲ್ಲಿಸಿ ಚಂದ್ರಪ್ಪನಿಗೆ ಟಾಂಗ್ ಕೊಡಬೇಕೆಂದು ಬಿ-ಟೀಮು ಹವಣಿಸಿತ್ತು. ಇದರ ವಾಸನೆಹಿಡಿದ ಚಂದ್ರಪ್ಪ ಆಕೆಗೆ ತಾಳ್ಯದ ಜಿ.ಪಂ. ಟಿಕೆಟು ಸಿಗದಂತೆ ತಡೆದಿದ್ದ. ಸಿಟ್ಟಿಗೆದ್ದ ಹನುಮಕ್ಕ ಗಂಡನ ರೊಕ್ಕದ ಬಲದಲ್ಲಿ ಪಕ್ಷೇತರೆಯಾಗಿ ನಿಂತಳಾದರೂ ಕೊನೆಗೆ ಠೇವಣಿಯೂ ಸಿಗದೆ ನೆಲಕಚ್ಚಿದಳು. ಅಂತವಳು ಬಿಜೆಪಿ ಎಂಎಲ್‌ಎ ಅಭ್ಯರ್ಥಿಯಾಗಿ ಗೆಲ್ಲುತ್ತಾಳಾ? ಅನ್ನೋದು ಬೇರೆ ಮಾತು. ಆದರೆ ದುರಹಂಕಾರಿ ಚಂದ್ರಪ್ಪನಿಗೆ ಪಾಠ ಕಲಿಸಬೇಕು ಅಂತ ಬಿಜೆಪಿಯ ಬಿ-ಟೀಮು ಹನುಮಕ್ಕನನ್ನು ಬಿ-ಫಾರಂ ಹಿಂದೆ ಗದುಮಾಡುತ್ತಿದೆ.

ಹುಮ್ಮಸ್ಸಿಗೆ ಬದ್ದಿರುವ ಹನುಮಕ್ಕ ಕೂಡಾ ಹೊಳಲ್ಕೆರೆ ಕ್ಷೇತ್ರದಲ್ಲಿ ಹೋಳಿಗೆ ಮತ್ತು ಬಾಡೂಟದ ಔತಣಕೂಟಗಳನ್ನು ಏರ್ಪಡಿಸಿ ಜನರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾಳೆ. ಅದಾಗಲೇ ರಾಮಗಿರಿ ಮತ್ತು ಭರಮಸಾಗರದ ಲಿಂಗಾಯತ ಮತದಾರರಿಗೆ ಹೋಳಿಗೆ



ಚಂದ್ರಪ್ಪ



ಹನುಮಕ್ಕ



ರಮೇಶ್

ಊಟ ಮತ್ತು ಕಾಟಗರಿಗೆ ಬಾಡೂಟದ ಸಂತೆ… ಸದ್ದು ಮಾಡಿದ್ದಾಳೆ. ಈ ವಾರ ತಾಳ್ಯದಲ್ಲಿ… ಮತ್ತು ಹೋಳಿಗೆ ಊಟದ ಜಾತ್ರೆ ನಡೆಯಲಿ… ಸೆಡ್ಡು ಹೊಡೆಯುವಂತೆ ಚಂದ್ರಪ್ಪನೂ ಹೋಳಿಗೆ… ಟೆಂಟ್ ಹಾಕಿಕೂತು ಆಕೆಯ ಮೇಲೆ… ತೀರಿಸಿಕೊಳ್ಳುತ್ತಿದ್ದಾನೆ.

ಹೊಳಲ್ಕೆರೆಯ ರಾಜಕಾರಣ ಈಗಲೂ ಲಿಂ… ಸಿರಿಗೆರೆ ಮಠದ ಫರ್ಮಾನಿನ ಮೇಲೆ ನಿಂತಿದೆ. … ಯಾರ ಪರ ತೀರ್ಪು ಬರುತ್ತೋ ಅವರೇ … ಶತಃಸಿದ್ಧ. ಯಡ್ಡಿಯ ಆಪ್ತನಾಗಿರೋದ್ರಿಂದ … ಗಿಟ್ಟಿಸುವ ಭರವಸೆ ಚಂದ್ರಪ್ಪನಿಗೆ ಇದೆಯಾದರು… ಲಿಂಗಾಯತ ಸಮುದಾಯದ ಲೀಡರ್‌ಗಳ ಆಹ್ವಾ… ಕೇಳಿಸಿಕೊಂಡಿರುವ ಸಿರಿಗೆರೆ ಮಠ ಹನುಮಕ್ಕ… ಒಲವು ಹೊಂದಿದೆ ಎಂಬ ವದಂತಿಯೂ ಇದೆ… ಯಡ್ಡಿಯ ದುಶ್ಮನ್ ಈಶ್ವರಿಯನ್ನು ಎದುಹಾಕಿರುವ … ಬಿ-ಟೀಮು, ಚಂದ್ರಪ್ಪನ ಯಡ್ಡಿ-ನಿಷ್ಠೆಗೆ ಉಪ… ಹುಳಿ ಹಿಂಡಿ ಬಂದಿದೆಯಂತೆ. ಹಾಗಾಗಿ ಈ… ಹನುಮಕ್ಕನ ಪರವಾಗೇ ಬ್ಯಾಟ್ ಬೀಸುವ… ಉಂಟಂತೆ. ಬಿ-ಟೀಮು ಹಬ್ಬಿಸಿರುವ … ಅಂತೆ-ಕಂತೆಗಳನ್ನೇ ನಂಬಿರುವ ಹನುಮಕ್ಕ, … ಊಟ, ಬಾಡೂಟ ಅಂತ ಭರ್ಜರಿ ಪ್ರಚಾ… ಚಂದ್ರಪ್ಪನ ಜೇಬನ್ನೂ ಚುನಾವಣೆಗು ಮೊದಲೇ… ಮಾಡಿಸುತ್ತಿದ್ದಾಳೆ. ಇವರಿಬ್ಬರ ತಿಕ್ಕಾಟದಲ್ಲಿ … ಜನಕ್ಕೆ ಭರ್ಜರಿ ಭೋಜನ ಕೂಟಗಳ 'ಭಾಗ್ಯ'ದ… ಮುಕ್ತಿ ಮನರಂಜನೆಯೂ ಲಭಿಸುತ್ತಿರೋದು…

ತಿರಗ ಬರಗಾಲ ಬತ್ತಾಯಿರೊ ಯೋಚನೆ ಯಾರಿಗೂ ಇಲವಲ್ಲಾ?



• ಬಿ.ಚಂದ್ರೇಗೌಡ

ಕಟ್ಟೆಪುರಾಣ

ಡೆಲ್ಲಾಗಿ ಕುಳಿತಿದ್ದ ಕಾಳಮಾವನ ಎದುರು ಪ್ರತ್ಯಕ್ಷವಾದ ವಾಟಿಸ್ಸೆ,

"ದೊಡಪ್ಪ ದ್ವಡಪ್ಪಾ, ಈ ವರ್ಸಲೂ ಬರಗಾಲವಂತೆ" ಎಂದ.

"ನಾನು ಹುಟ್ಟಿದ್ಮ್ಯಾ ನಾಕೊರ್ಸ ಬರಗಾಲ ಬಂದಿದ್ವಾ ನೋಡೈಯಿಲ್ಲ ಕಂಡ್ಯ."

"ಇಂದ್ರಾಗಾಂಧಿ ಹಲ್ಲು ಜ್ವಾಳ ಹಂಚಿದ್ದ ಬರಗಾಲ ಜ್ಞಾಪ್ಸಿತ್ತು?"

"ಏ ಒಂದೇ ವರ್ಸ ಕಂಡ್ಯ. ಅಷ್ಟಕೆ ಜನ್ವಲ್ಲ ಬಂಬಾಯಿ, ಸಾವತಿ, ಊಟಕಡಿಕೋದ್ರು."

"ಬೆಂಗಳೂರಿಗ್ಯಾರು ಹೋಗಲಿಲ್ವೆ?"

"ಬೆಂಗಳೂರಲ್ಲೇನಿತ್ತ ಆಗ? ಅಲ್ಲಿಗೋದ್ರು ಹೋಟ್ಲು ಕ್ಯಾಸ ಮಾಡಬೇಕಾಗಿತ್ತು. ಅವರು ಕೊಡೊ ಸಂಬಳನೂ ಕಮ್ಮಿ ಇತ್ತು. ಅದ್ಕೆ ನಮ್ಮೊರ್ವಲ್ಲ ಬಂಬಾಯಿಗೋಗಿ ಹೋಟ್ಲು ಸೇರಿಕಂಡ್ರು."

"ಬಂಬಾಯಿಗ್ಯಾಕೋದ್ರು ಗೊತ್ತೇನೊ ವಾಟಿಸ್ಸೆ" ಎಂದ ಉಗ್ರಿ.

"ಮಡಿಯಕ್ಕಲವೇನೊ?"

"ಅದು ಸರಿ. ಆದ್ರೆ ಆಗಿನ ಕಾಲ್ದಲ್ಲಿ ಹೋಟ್ಲು ಕ್ಯಲಸ ಅಂದ್ರೆ ಎಂಜಲು ತಟ್ಟೆ ಲೋಟ ತಗಿಯೋ ಕೀಳು ಕ್ಯಲಸ ಅಂತ ತಿಳಕಂಡಿದ್ರು ನಮ್ಮ ಜನ. ಅಂತ ಕ್ಯಲಸವ ಬೆಂಗಳೂರು ಮೈಸೂರಲ್ಲಿ ಮಾಡದೆ ಕಾಣದ ಕಣ್ಣು ತಲಿರೊ ಬಂಬಾಯಿಗೋಗಿ ಮಾಡೋರು. ಆದ್ರಿವತ್ತು ಬೆಂಗಳೂರಿಗೆ ಹೋಗಿ ಆ ಕ್ಯಲಸ ಮಾಡ್ತರೆ" ಎಂದ ಉಗ್ರಿ.

"ದುಡುದು ತಿನ್ನೋರಿಗೆ ಗೌರವ ಕೊಡೊ ದೇಶ ಅಲ್ಲ ಕಣೊ ನಮ್ದು. ಗಂಟೆ ಅಳ್ಳಾಡಸೊ ಪೂಜಾರಿಗಿರೊ ಗೌರವ ತಿಣಿ ಹಿಡಿಯೋನಿಗಿದ್ದತೆ?"

"ಅದ್ಕೆ ಯವಸಾಯದ ಕಸುಬೆ ಹೋಯ್ತಾ ಅದೆ."

"ಇದನ್ನೆಲ್ಲ ನೋಡದಕ್ಕಿಂತ ಹೋಗಿಬುಡಬೇಕು ಕಂಡ್ಯ" ಎಂದ ಕಾಳಮಾವ.



"ಅಂಗ್ಯಾಕಂದಿ ಸುಮ್ಮನಿರೊ ಮಾವ" ಎಂದಳು ಜುಮ್ಮಿ.

"ಕಾಳಮಾವ ಸುಮ್ನನಂಗಂತನೆ ಕಣೆ. ಅವುನು ಕುಮಾರಣ್ಣ ಮುಖ್ಯಮಂತ್ರಿಯಾಗದ ಕಣ್ಣುತುಂಬ ನೋಡೆ ಹೋಗದು" ಎಂದ ಉಗ್ರಿ.

"ಯಾರು ಮುಖ್ಯಮಂತ್ರಿಯಾದ್ರೆ ನನಗೇನ್ಲ. ಕುಮಾರಸ್ವಾಮಿ ನನಿಗೇನು ಹಿಟ್ಟು ಬಟ್ಟೆ ಕೊಟ್ಟನೆ."

"ಕೊಡಬವುದು. ಈಗ ಸಿದರಾಮಯ್ಯ ತಲಾ ಏಳು ಕೆಜಿ ಅಕ್ಕಿ ಕೊಟ್ಟಂಗೆ ಅವುನು ಬಂದು ತಲಾ ಒಂದಂಗಿ, ಒಂದು ಟವಲ್ ಕೊಟ್ರೆ ಯಂತ ಬರಗಾಲ ಬಂದ್ರೂ ತಲೆ ಕೆಡಿಸಿಗಳಂಗೆಯಿಲ್ಲ" ಎಂದ ಉಗ್ರಿ ನಕ್ಕ.

"ಅವುಂದ್ಯಾವುದೊ ಸೂಟುಕೇಸು ಗಲಾಟೆ ನ್ಯಡಿತಾ ಅದಲ್ಲ ಅದೇನ್ಲ?" ಎಂದಳು ಜುಮ್ಮಿ.

"ಅದೇನು ಗೊತ್ತೇನಕ್ಕ. ಅವುನು ಎಲ್ಲೇ ಹೋದ್ರು ಸೂಟ್‌ಕೇಸ್ ಮರತು ಬತ್ತನಂತೆ. ಆದ್ರಿಂದ ಬರೋರು ಅದ ತಂದುಕೊಡ್ತರಂತೆ. ಅದನ್ನೆ ತಪ್ಪು ತಿಳಕೊಂಡೊರು ಅವುನತ್ರ ಹೋಗಬೇಕಾದ್ರೆ ಸೂಟ್‌ಕೇಸ್ ತಗಂಡೆ ಹೋಗಬೇಕು ಅಂದವುರೆ. ಈ ಮಾತಂದಿರೋನು ಯಾರು ಗೊತ್ತೇ? ರೇವಣ್ಣನ ಮಗ ಪ್ರಜ್ವಲ" ಎಂದ ವಾಟಿಸ್ಸೆ.

"ಈ ನನ ಮಗೇಳದು ನಿಜವೇನ್ಲ ಉಗ್ರಿ" ಎಂದಳು ಜುಮ್ಮಿ.

"ಅವುನ್ಯಾವತ್ತು ನ್ಯಾರವಾಗಿ ಮಾತಾಡ್ಯವುನೆ" ಎಂದ ಉಗ್ರಿ.

"ಅದೇನು ಗೊತ್ತೇನಕ್ಕ, ದೊಡಪ್ಪ ನೀನೂ ಕೇಳಿಸಿಕೊ. ನಿಮ್ಮ ಕುಮಾರಣ್ಣ ರಾಜಕಾರಣ ಸುರುಮಾಡಿದ್ದೇ ಸೂಟುಕೇಸಿಂದ. ಸೂಟುಕೇಸು ಅಂದ್ರೆ ಸ್ಕೂಟು ತುಂಬೊ ಚರುಮದ ಪೆಟಿಗೆ. ಆದ್ರೆ ಅದರೊಳಗಡೆ ಕ್ಯಾಶ್ ತುಂಬಿರತರೆ. ಆತರ ತುಂಬಿರೊ ಸೂಟುಕೇಸು ಆಗ ಬಿಜೆಪಿ ಕಡಿಂದ ಕುಮಾರಣ್ಣನ ಆಫೀಸಿಗೆ ಬಂದಾಗ್ಲೆ ಅಣ್ಣಾರು ಜೆಡಿಎಸ್ ಎಮ್ಮೆಲ್ಲೆಗಳನ್ನಲ್ಲ ಓಲವೊ ಬಸ್ಸಿಗಾಯ್ಕಂಡು, ಜಮೀರನ್ನ ಡ್ರೈವರ್ ಮಾಡಿಕಂಡು, ರೆಸಾರ್ಟಿಗೋಗಿ ಉಳಕಂಡು, ಮಜ ಮಾಡಿಕಂಡು, ಸ್ಟ್ರೈಟಾಗಿ ವಿಧಾನಸೌಧ ಮುಂದಕೆ ಬಂದು, ಮುಖ್ಯಮಂತ್ರಿಯಾಗಿ ಪ್ರಮಾಣವಚನ ತಗಂಡಿದ್ದು, ಇದು ಸೂಟಕೇಸು ಕತೆ."

"ಅದಳೆ ಕತೆ, ಈಗಲದೇಳೊ."

"ಈಗಲ್ದೇನಪ್ಪ ಅಂದ್ರೆ, ಯಾವ ಗಳಿಗೆಲಿ ಕುಮಾರಣ್ಣ ಸೂಟ್‌ಕೇಸ್ ರಾಜಕಾರಣ ಸುರುಮಾಡಿದ್ನೊ ಅವತ್ತಿಂದ ಅದೇ ರಾಜಕಾರಣ ಮಾಡಬೇಕಾಗ್ಯದೆ. ಯಾಕೇಳು?"

"ನೀನೆ ಹೇಳು."

"ಯಾಕಂದ್ರೆ, ಕುಮಾರಣ್ಣನತ್ರ ಸಿದ್ಧಾಂತ ಇಲ್ಲ, ಯಾವ ತತ್ವ ಸಿದ್ಧಾಂತನೂ ಇಲ್ಲ, ಆದ್ರಿಂದ ಕ್ಯಾಸಂಡ್ ಕ್ಯಾರಿ ರಾಜಕಾರಣ ಮಾಡಬೇಕಾಗ್ಯದೆ. ಎಮ್ಮೆಲ್ಸಿ ಯಾಗಕ್ಕೆ ಕ್ಯಾಸು, ಎಮ್ಮೆಲ್ಲೆಯಾಗಕ್ಕೆ ಕ್ಯಾಸು.... ಹಿಂಗೆ. 'ರಾಜಕಾರಣಕ್ಕೆ ಬರಬೇಕಾದ್ರೆ ಸೂಟ್‌ಕೇಸ್ ಕ್ಯಲಸ ಮಾಡೋದ್ರಿಂದ, ಮಾಜಿ ಪ್ರಧಾನಿ ಮೊಮ್ಮಗ ಆಗಿದ್ರೂ ನಾನು ರಾಜಕಾರಣ ಮಾಡಕ್ಕೆ, ಎಮ್ಮೆಲ್ಲೆಯಾಗಕ್ಕೆ ಆಗ್ತಾಯಿಲ್ಲ' ಅಂತ ದ್ಯಾವೇಗೌಡ್ರ ಮೊಮ್ಮಗ ದೂರಿಬುಟ್ಟವುನೆ ದೊಡಪ್ಪ" ಎಂದ ವಾಟಿಸ್ಸೆ.

"ದ್ಯಾವೇಗೌಡ್ನ ಮೊಮ್ಮಗ ಆಗ್ಲೆ ರಾಜಕೀಯಕ್ಕೆ ಬಂದಿದ್ದನೆ?" ಎಂದ ಕಾಳಮಾವ.

"ಆಹ, ನಮ್ಮ ದೊಡಪ್ಪನ ಮಕದ ಕಳೆ ನೋಡೊ ಉಗ್ರಿ. ಈ ಊರು ಈ ಕೆರೆ ತ್ವಾಟ ಗದ್ದೆ ಯಲ್ಲ ನಮ್ಮದು. ಆನಂತರ ನಮ್ಮ ಮಕ್ಕಳದು, ಮರಿಮಕ್ಕಳದು ಅಂತ ತಿಳಕಂಡಿರೋರ ಮಕದಲ್ಲಿ ಮಾತ್ರ ಇಂತ ಕಳೆ ಮೂಡಕ್ಕೆ ಸಾಧ್ಯ ಕಣೊ ಉಗ್ರಿ."

"ದ್ಯಾವೇಗೌಡನ ಮೊಮ್ಮಗನೂ ರಾಜಕೀಯಕ್ಕೆ ಬಂದನೆ ಅಂದ್ರೆ ಅದ್ಕೆ ಏನೇನೊ ಅಂತಿಯಲ್ಲಾ" ಎಂದ ಕಾಳಮಾವ.

"ಹಾಕ್ಯಾಸುಕ್ಯಂದೆ ದೊಡಪ್ಪ ನಿನಿಗೊಂದು ಗುಡ್‌ನ್ಯೂಸ್ ಏನಂದ್ರೆ, ಹಾಸನಕ್ಕೆ ದ್ಯಾವೇಗೌಡನ ಬದ್ಲಿಗೆ ಅವುರ ಮೊಮ್ಮಗ ಪ್ರಜ್ವಲ ಅಂತ ಬಂದವುನೆ. ಪ್ರಜ್ವಲ ಅಂದ್ರೆ ಪ್ರಜ್ವಲನೆ. ಸದ್ಯ ಭಯಾನಕನಂಗೆ ಹುಟ್ಟವುನೆ. ಏನಾರ ರೇವಣ್ಣನಂಗೆ ಹುಟ್ಟಿದ್ರೆ ದ್ಯಾವೇಗೌಡ್ರಿಗೆ ಭಾಳ ಸಮಸ್ಯೆಯಾಗದು."

"ಅದ್ಯಾಕ್ಲ ಅಂಗಂತೀ?"

"ತಮಾಸೆಗಂದೆ. ದೊಡಪ್ಪ, ಆ ಹುಡುಗ ಬರತಿದ್ದಂಗೆ ಜೆಡಿಎಸ್ ಮ್ಯಾಲೆ ಬಾಂಬ್ ಯಸು ಬುಟ್ಟವುನೆ. ಅದೂ ಸೂಟ್‌ಕೇಸ್ ಬಾಂಬ."

"ಕುಮಾರಣ್ಣ ಸರಿಯಾದುತ್ರನೆ ಕೊಟ್ಟವುನೆ ಬುಡು" ಎಂದ ಉಗ್ರಿ.

"ಅದೇನುತ್ರನ್ಲ" ಎಂದಳು ಜುಮ್ಮಿ.

"ಸೂಟಕೇಸ್ ಅಲ್ಲಗಳದಿಲ್ಲ, ಈಸಗತಿದ್ದೊರು ಈಗಿಲ್ಲ, ಪಾರ್ಟಿ ಬುಟ್ಟು ಹೋಗ್ಯವುರೆ ಅಂದವುನೆ."

"ಕುಮಾರಣ್ಣ ಒಂದೊಂದು ಸತಿ ನಿಜ ಹೇಳತನೆ ಕಣೊ ಉಗ್ರಿ. ನಾವೇ ನೋಡಿದಂಗೆ ಅವುನ ಜೊತೆ ಇದ್ದ ಚಲುವ, ಜಮೀರ, ಬಾಲಕಿಸ್ನ ಇವುರ್ಯಲ್ಲ ಯಂಗಿದ್ರು. ಅದರಲ್ಲೂ ಚಲುವರಾಯಸ್ವಾಮಿ ಮಾತ್ರ ಭಾಳ ಬಡತನದಲ್ಲಿದ್ದ, ಇವತ್ತು ಎಷ್ಟು ಕೋಟಿಗವುನೆ ಅಂತ ಗೊತ್ತ ನಿನಗೆ? ಅದ್ಕೆ ದ್ಯಾವೇಗೌಡ್ರು ಅವುರ್ನ ದೂರ ಓಡಿಸಿದ್ದು, ಇನ್ನು ಮುಂದೆ ಸೂಟಕೇಸಿಗೆ ಮೀಡಿಯೇಟರ್ ಅಗತ್ಯಯಿಲ್ಲ, ಸೀದಾ ನೇರ ವ್ಯವಹಾರ ಮಾಡಬವುದು."

"ಅಲ್ಲ ಕಂಡ್ರಿಲಾ, ಈ ವರ್ಸಲೂ ಮಳಿಯಾಗಲಿಲ್ಲ ಅಂದ್ರೆ ಏನು ಮಾಡಬೇಕು ಅನ್ನದ ಯೇಚನೆ ಬುಟ್ಟು ಇವುರ್ಯಲ್ಲ ಏನು ಮಾಡ್ತ ಅವುರೆ" ಎಂದ ಕಾಳಮಾವ.

"ಏನುವಿಲ್ಲ ದೊಡಪ್ಪ, ಮುಂದಿನ ಚುನಾವಣೆಗೆ ಜೆಡಿಎಸ್‌ಗೆ ಸೂಟಕೇಸ್ ಬೇಕು, ಕಾಂಗ್ರೆಸ್‌ಗೆ ಇನ್ನೆಂದೆರಡು ಭಾಗ್ಯ ಬೇಕು, ಬಿಜೆಪಿಗೆ ಪ್ರತಿ ಕ್ಷೇತ್ರದಲ್ಲೂ ಒಂದು ಹ್ಯಣಬೇಕು. ಅದು ಸಾಬರು ಮಾಡಿದ ಹ್ಯಣ ಆದರಂತೂ ಅವರ ವಿಜಯೋತ್ಸವ ನೋಡಂಗಿಲ್ಲ."

"ನಿಜ ಕಣೊ ವಾಟಿಸ್ಸೆ. ಆ ಮಂಗಳೂರ ಕಾಶ್ಮೀರ ಮಾಡ್ಯಾಕ್ಯವುರೆ ಅತ್ವಾಗೆ. ಏನಾರ ಮಾಡಿ ಇಡೀ ರಾಜ್ಯಕ್ಕೆ ಗಲಭೆ ಹಚ್ಚನ ಅಂತ ಪ್ಲ್ಯಾನ್ ಮಾಡ್ತ ಅವುರೆ. ಸರ್ಕಾರೇನಾರ ನೆಗ್ಲೆಟ್ಟಾಗಿದ್ರೆ ಈ ಬಿಜೆಪಿ ಜನ ಬೆಂಕಿ ಹಚ್ಚಬುಡ್ತರೆ."

"ಅವುನಾರ್ಲ ಕಲ್ಲಡ್ಕದ ಬಟ್ಟ ಏನವ್ವುನು" ಎಂದ ಸೀರ.

"ಅವುನು ಒಂದು ಕಾಲ್ದಲಿ ನೀನಿದ್ದಲ್ಲ ಅಂಗೆ ಇದ್ದ ಚಿಗಪ್ಪ. ಆದ್ರೆ ನೀನು ಕಮ್ಯುನಲ್ ಅಲ್ಲ, ಬರೀ ವಡದಾಟದ ಪ್ರಿಯ ಆಗಿದ್ದೆ. ಈ ಕಲ್ಲಡಕ ಪ್ರಭಾಕರ ಬಟ್ಟ ಏನವ್ವುನಲ್ಲಾ ಇವುನಿಗೆ ಸಾಬರ ಕಂಡ್ರಾಗದಿಲ್ಲ, ಅವುರ ಕಡಿಕೆ ಕಲ್ಲುಬೀರನ ಅನ್ನುಸ್ತದೆ. ಅಂಗೆ ಬೀರೀ ಬೀರಿ ಕಲ್ಲಡಕ ಅನ್ನೊ ಹೆಸರ ಸಂಪಾದಿಸಿಬುಟ್ಟವುನೆ."

"ಓ ಅಂಗರೆ ಜೋರಾಗಿದ್ದನೆ?"

"ಜೋರಾಗೇನು ಇಲ್ಲ, ಆಗ್ಲೆ ಮುದಿಯ. ತಲಿ ಬೆಳ್ಳಗಾಗಿ ಹಲ್ಲು ಅಲ್ಲಾಡತವೆ. ಈ ವಯಸಲ್ಲಿ ನ್ಯಟ್ಟಗಿರದು ಬುಟ್ಟು ಜಾತಿ ಜಗಳ ಹಚ್ಚಗಂಡು ಕುಂತವುನೆ."

"ಸಾಬರು ಆರೆಸೆಸ್ಸ ಹುಡುಗನ್ನ ಕೊಂದಾಕಿದ್ದರಂತಲ್ಲೊ?"

"ಊ ಕಣೊ ಉಗ್ರಿ. ಅದ್ಕೂ ಮದ್ಲು ಭಜರಂಗದೋರು ಒಬ್ಬ ಸಾಬರೋನ್ನ ಕೊಚ್ಚಾಕಿದ್ರು. ಅದ ನೋಡಿಕಂಡು ಸಾಬರು ಸುಮ್ಮನಿದ್ದರೆ? ಅವುರು ಒಬ್ಬನ್ನ ಇರದವುರೆ."

"ಸಾಬರ ಬುಡು, ಸಾಯಕ್ಕೂ ತಯಾರು, ಸಾಯಸಕ್ಕೂ ತಯಾರು. ಅವುರ ಸಗತಿ ಏನು ಅನ್ನದು ಪ್ರಪಂಚಕೆ ಗೊತ್ತದೆ."

"ಅಂತ ಸಗತಿವಂತ್ರ ದೇಸಕಟ್ಟಕ್ಕೆ ಬಳಸಿಕೊಬೇಕು ಕಣೊ ಉಗ್ರಿ. ಆದ್ರೆ ಬಿಜೆಪಿಗಳು ಯಾವತ್ತು ಸುಮ್ಮನಿರದಿಲ್ಲ, ಆ ಶಿವಮೊಗ್ಗದಲ್ಲಿ ಈಶ್ವರಪ್ಪ ಎಮ್ಮೆಲ್ಲೆ ಆಗಗಂಟ, ಸಾಬರ ಕೆದಕದು ಒಂದು ಕೊಲೆ ಮಾಡಿಸಿಗಳದು. ಆ ಮ್ಯಾಲೆ ಸತ್ತೋನ ಮ್ಯರವಣಿಗೆ ಮಾಡ್ತ ಯಲ್ಲ ಸಾಬರ ಬೈಯಂಗೆ ಮಾಡಿಮಾಡಿ ಅಮ್ಯಾಲವುನು ಎಮ್ಮೆಲ್ಲೆ ಆದದ್ದು. ಬಿಜೆಪಿ ಬ್ಯಳಿಬೇಕಾದ್ರೆ ಸಾಬರ ಮ್ಯಾಲೆ ಜಗಳ ಮಾಡಬೇಕು ಅನ್ನದೇ ಅವುರು ಪಾರ್ಟಿ ಕಟ್ಟೊ ಸಿದ್ಧಾಂತ. ಅವುರೊಂತರ ಹೀನಸುಳಿ ಜನ."

"ಒಂದು ಕಾಲ್ದಲ್ಲಿ ಇಡೀ ಆ ಏರಿಯಾ ಪೂಜಾರಿ ಹೇಳಿದಂಗೆ ನ್ಯಡಿತಿತ್ತು, ಈಗ ಆ ಪೂಜಾರಿ ಏನಾದ?"

"ಮನೆವಳಗವುನೆ. ಬಹುಶಃ ಗಲಭೆಯಿಂದ ಈ ಸರ್ಕಾರಕ್ಕೆ ಕ್ಯಟ್ಟೆಸರು ಬರ್ಲಿ ಅಂತ ಕಾಯ್ತಾಯಿರಬವುದು."

"ಅಂಗಂತಿಯಾ?"

"ಎಸ್!!!" ■

04 ◀◀

ಎದಿತ್ತು. ಹಾಗಾಗಿ ತಿಪ್ಪಾರೆಡ್ಡಿ ಪಕ್ಷೇತರ ಅಭ್ಯರ್ಥಿಯಾಗಿ ಕಾರಿನ ಚಿಹ್ನೆಯಡಿ ಅಖಾಡಕ್ಕಿಳಿದಿದ್ದ. ಇತ್ತ ಜನತಾದಳದಿಂದ ಮಾಜಿ ಮಂತ್ರಿ ಏಕಾಂತಯ್ಯ ಸ್ಪರ್ಧಿಸಿದ್ದರು. ಇನ್ನು ಬಿಜೆಪಿಯಿಂದ ಟಿಕೆಟ್ ಸಿಕ್ಕಿದ್ದು ಮುರುಘರಾಜೇಂದ್ರ ಒಡೆಯರ್‌ಗೆ. ಅಸಲಿಗೆ ಒಡೆಯರ್‌ಗೆ ಟಿಕೆಟ್ ಕೊಡುವುದು ಬಿಜೆಪಿಯ ಅನೇಕ ಸ್ಥಳೀಯ ನಾಯಕರಿಗೆ ಇಷ್ಟವಿರಲಿಲ್ಲ. ಆದರೆ ಹೆಗಡೆಜೀ ಅಣತಿಯಂತೆ ಆಗತಾನೇ ಜನತಾದಳ ಬಿಟ್ಟು ಬಿಜೆಪಿ ಸೇರಿದ್ದ ಜೀವರಾಜ್ ಆಳ್ವ ಅವರ ಒತ್ತಾಸೆಯಿಂದಾಗಿ ವಡೆಯರ್‌ಗೆ ಟಿಕೆಟ್ ದಕ್ಕಿತ್ತು. ಸಹಜವಾಗಿಯೇ ಇದು ಟಿಕೆಟ್ ಆಕಾಂಕ್ಷಿಗಳಾಗಿದ್ದ ಜಿ.ಎಸ್. ಬಸವರಾಜ್‌ರಂತಹ ಲೋಕಲ್ ಲೀಡರ್‌ಗಳಿಗೆ ಸಿಟ್ಟು ತರಿಸಿತ್ತು. ಅವರ ಬಂಡಾಯವನ್ನು ಬಂಡವಾಳ ಮಾಡಿಕೊಂಡ ತಿಪ್ಪಾರೆಡ್ಡಿ ತನ್ನತ್ತ ಸೆಳೆದುಕೊಂಡಿದ್ದ. ಇತ್ತ ಜಿಲ್ಲಾ ಷರೀಫ್‌ಗೆ ಟಿಕೆಟ್ ಕೊಟ್ಟದ್ದರಿಂದ ಕಾಂಗ್ರೆಸ್ಸಿನೊಳಗೂ ಒಂದಷ್ಟು ಬಂಡಾಯಗಾರರು ಹುಟ್ಟಿಕೊಂಡಿದ್ದರು. ಅವರನ್ನೂ ತನ್ನ ಬಳಗಕ್ಕೆ ಸೆಳೆದುಕೊಂಡ ತಿಪ್ಪಾರೆಡ್ಡಿ ಏಕಾಂತಯ್ಯನ ವಿರುದ್ಧ ಜಯಭೇರಿ ಬಾರಿಸಿದ್ದ.

ಅವನ ಅದೃಷ್ಟವೋ ಏನೋ, ಆ ಸಲ ಯಾವ ಪಕ್ಷಕ್ಕೂ ಮೆಜಾರಿಟಿ ದಕ್ಕದೆ ಬಿಜೆಪಿ ಮತ್ತು ತಿಪ್ಪಾರೆಡ್ಡಿಯಂತಹ ಪಕ್ಷೇತರರ ಬೆಂಬಲದಿಂದ ಜನತಾದಳ ಸರ್ಕಾರ ರಚಿಸಿ, ದೇವೇಗೌಡ್ರು ಮುಖ್ಯಮಂತ್ರಿಯಾದರು. ನಂತರದ ದಿನಗಳಲ್ಲಿ ದೇವೇಗೌಡರಿಗೆ ದಿಲ್ಲಿ ಅದೃಷ್ಟದ ಬಾಗಿಲು ತೆರೆದು ಅವರು ಪ್ರಧಾನಿಯಾಗಲು ಅತ್ತ ಹೋಗುತ್ತಿದ್ದಂತೆಯೇ ಸಿಎಂ ಕುರ್ಚಿಗೆ ಬಂದು ಕೂತದ್ದು ಜೆ.ಎಚ್. ಪಟೇಲರು. ಆಗಲೇ ನೋಡಿ ತಿಪ್ಪಾರೆಡ್ಡಿಯ ಲಕ್ಕು ಕುದುರಿಕೊಂಡದ್ದು. ಪಟೇಲರಿಗೂ ಮತ್ತು ತಿಪ್ಪಾರೆಡ್ಡಿಯ ಅಣ್ಣ ಅಶ್ವತ್ಥರೆಡ್ಡಿಗೂ ಬಲು ಆತ್ಮೀಯತೆ ಇತ್ತು. ಅದನ್ನೇ ನೆಪ ಮಾಡಿಕೊಂಡ ತಿಪ್ಪಾರೆಡ್ಡಿ ತನ್ನ ಪಕ್ಷೇತರ ಇಮೇಜನ್ನು ಬಳಸಿಕೊಂಡು ಅತಂತ್ರ ಸರ್ಕಾರದಲ್ಲಿ ಹೌಸಿಂಗ್ ಬೋರ್ಡ್ ಅಧ್ಯಕ್ಷಗಿರಿ ದಕ್ಕಿಸಿಕೊಂಡ. ಅಲ್ಲಿಂದಾಚೆಗೆ ಆತ ಇಡೀ ಚಿತ್ರದುರ್ಗದ ರಾಜಕಾರಣವನ್ನೇ ಕುಲಗೆಡಿಸಿದ. ಮಾನವಂತರು ಮಾಡುತ್ತಿದ್ದ ರಾಜಕಾರಣದ ಜಾಗಕ್ಕೆ ಶ್ರೀರಾಮ, ಗೊಪ್ಪೆ ಮಂಜ, ಕಾಂತರಾಜ, ಜೆ.ಹೆಚ್. ಕೃಷ್ಣಮೂರ್ತಿಯಂತಹ ರೌಡಿಸಂ ಪ್ರೊಡಕ್ಟುಗಳನ್ನು ತಂದು ಕೂರಿಸಿದ. ಚಿತ್ರದುರ್ಗ ನಗರಸಭೆಯನ್ನೇ ಅವರ ಕೈಗಿಟ್ಟ. ಅವತ್ತು ಜೂಜು, ರೌಡಿಗಳ ಅಡ್ಡೆಯಾಗಿ ಬದಲಾದ ನಗರಸಭೆ ಇವತ್ತಿಗೂ ಆ ಛಾಯೆಯಿಂದ ಹೊರಬರಲು ಸಾಧ್ಯವಾಗಿಲ್ಲ.

ಆಪರೇಷನ್ ಡಬಲ್‌ಗೇಮ್

ಅಂತಹ ತಿಪ್ಪಾರೆಡ್ಡಿ ಈ ಸಲವೂ ಒಂದಷ್ಟು ಅತೃಪ್ತ ಆತ್ಮಗಳನ್ನು ಹುಟ್ಟುಹಾಕುವ ಹುನ್ನಾರಕ್ಕೆ ಅದಾಗಲೆ ಕೈಹಾಕಿದ್ದಾನೆ. ಕೈ ಪಾಳಯದಲ್ಲಿ ಗುರುತಿಸಿಕೊಂಡಿರೋ ಹನುಮಲಿ ಷಣ್ಮುಖಪ್ಪ ಮತ್ತು ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಮಂಜುನಾಥ್ ಎಂಬ ಎರಡು ಅಸ್ತ್ರಗಳ ಮೇಲೆ ಅದಾಗಲೇ ತನ್ನ ಸಮ್ಮೋಹನ ತಂತ್ರ ಪ್ರಯೋಗಿಸಲು ಮುಂದಾಗಿದ್ದಾನೆ. ಹನುಮಲಿ ಷಣ್ಮುಖಪ್ಪ ಚಿತ್ರದುರ್ಗ ಜಿಲ್ಲಾ ರಾಜಕಾರಣದ ಪ್ರಭಾವಿ ಕುಳ. ಲಿಂಗಾಯತ ಸಮುದಾಯಕ್ಕೆ ಸೇರಿರೋದರಿಂದ ಸಿರಿಗೆರೆ ಮಠದ ಕೃಪೆಯೂ ಈತನ ಮೇಲಿದೆ. ಆದರೆ ಈತನ ಸ್ವಂತ ಕ್ಷೇತ್ರವಾದ ಹೊಳಲ್ಕೆರೆಯು ಎಸ್‌ಸಿ ಮೀಸಲು ಕ್ಷೇತ್ರವಾಗಿರೋದ್ರಿಂದ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಆದರೂ ಜಿಲ್ಲೆಯ ಲಿಂಗಾಯತ ಮತಗಳ ಮೇಲೆ ಭಾರೀ ಹಿಡಿತವಿದೆ, ಜೊತೆಗೆ ಶಾಸಕನಾಗಬೇಕೆನ್ನುವ ಅಧಿಕಾರದ ತುಡಿತವೂ ಇದೆ. ಹಾಗಾಗಿ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಮೇಲೆ ಷಣ್ಮುಖಪ್ಪ ಸಣ್ಣ ಕಣ್ಣಿಟ್ಟಿದ್ದಾನೆ.

ಆದರೆ ಈಗಾಗಲೇ ಚಿತ್ರದುರ್ಗದ ಟಿಕೆಟ್‌ಗೆ ಜಿ.ಪಂ ಹಾಲಿ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್ ಕರ್ಚೀಫು ಹಾಕಿ ಕನ್‌ಫರ್ಮ್ ಮಾಡಿಕೊಂಡಿದ್ದಾಳೆ. ಜಿಲ್ಲಾ ಉಸ್ತುವಾರಿ ಮಂತ್ರಿ ಆಂಜನೇಯರಿಗೂ ಸೌಭಾಗ್ಯಳಿಗೇ ಟಿಕೆಟ್ ಕೊಡಲು ಒಲವು ಇರುವಂತೆ ಕಾಣುತ್ತೆ. ಈ ನಡುವೆ ಎಂಎಲ್‌ಸಿ ಕಂ ರಿಯಲ್ ಎಸ್ಟೇಟ್ ರೊಕ್ಕಸ್ಥ ರಘು ಆಚಾರಿಯೂ ಕಾಂಗ್ರೆಸ್ ಟಿಕೆಟ್‌ಗೆ ಟ್ರೈ ಮಾಡುತ್ತಿರುವ ವರ್ತಮಾನ ಕೇಳಿಬರುತ್ತಿದೆ. ಇವರಿಬ್ಬರ ಪೈಪೋಟಿಯ ನಡುವೆ ಷಣ್ಮುಖಪ್ಪನಿಗೆ ಟಿಕೆಟ್ ಸಿಗೋದು ಬಹುಪಾಲು ಡೌಟು. ಹಾಗಾಗಿ ಷಣ್ಮುಖಪ್ಪನಿಗೆ ಗಾಳಹಾಕಿ ತನ್ನೊಟ್ಟಿಗೆ ಜೆಡಿಎಸ್‌ಗೆ ಕರೆತಂದು ಚಿತ್ರದುರ್ಗದ ಜೆಡಿಎಸ್ ಅಭ್ಯರ್ಥಿಯಾಗಿಸುವ ಆಲೋಚನೆ ತಿಪ್ಪಾರೆಡ್ಡಿಯದ್ದು.

ಅದೇರೀತಿ, ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಮಾದಿಗ ಸಮುದಾಯದ ಮಂಜುನಾಥ್‌ಗೂ ಹೊಳಲ್ಕೆರೆಯಿಂದ ಸ್ಪರ್ಧಿಸುವ ಆಸೆಯಿದೆ. ಆದರೆ ಅಲ್ಲಿ ಮಂತ್ರಿ ಆಂಜನೇಯರು ಇರೋದ್ರಿಂದ ಆತನಿಗೆ ಕಾಂಗ್ರೆಸ್‌ನ ಟಿಕೆಟ್ ಸಿಗೋದಿಲ್ಲ, ಆತನಿಗೂ ಗಾಳ ಹಾಕಿ ಜೆಡಿಎಸ್‌ಗೆ ಕರೆತಂದು ಆಂಜನೇಯ ವಿರುದ್ಧ ಅಖಾಡಕ್ಕಿಳಿಸಬೇಕು ಎಂಬ ತಂತ್ರ ತಿಪ್ಪಾರೆಡ್ಡಿಯದ್ದಂತೆ. ಒನ್ಸ್ ಎಗೇನ್, ಇಲ್ಲಿ ತಿಪ್ಪಾರೆಡ್ಡಿಯ ಡಬಲ್‌ಗೇಮ್ ರಾಜಕಾರಣವೇ ಕೆಲಸ ಮಾಡಲಿದೆ ಅನ್ನೋದ್ರಲ್ಲಿ ಎರಡು ಮಾತಿಲ್ಲ, ಷಣ್ಮುಖಪ್ಪನನ್ನು ಜೆಡಿಎಸ್‌ಗೆ ಕರೆತಂದರೆ ಆತನ ಮುಖ ತೋರಿಸಿ ಹಿರಿಯೂರಿನ ಲಿಂಗಾಯತ ಮತಗಳನ್ನು ಹಾಗೂ ಮಂಜುನಾಥ್‌ನ ಮುಖ ತೋರಿಸಿ ಮಾದಿಗ ಸಮುದಾಯದ ಮತಗಳನ್ನು ಬುಟ್ಟಿಗೆ ಹಾಕಿಕೊಂಡು ಗೆಲ್ಲೋದಷ್ಟೇ ತಿಪ್ಪಾರೆಡ್ಡಿಯ ಹುನ್ನಾರ. ಅದಕ್ಕಾಗಿ ಅವರಿಬ್ಬರನ್ನು ಹರಕೆಯ ಕುರಿಗಳಾಗಿಸಲು ಹಾತೊರೆಯುತ್ತಿದ್ದಾನೆ. ಇದು ತಿಪ್ಪಾರೆಡ್ಡಿಯ ಆಪರೇಷನ್ ಡಬಲ್‌ಗೇಮ್‌ನ ಅಸಲಿಯತ್ತು. ಮಂಜುನಾಥ್ ವಿಚಾರದಲ್ಲಿ ಅದು ಹೇಗೋ ಗೊತ್ತಿಲ್ಲ, ಆದ್ರೆ ಷಣ್ಮುಖಪ್ಪನ ವಿಚಾರದಲ್ಲಿ ಅದು ತುಸು ಕಷ್ಟ. ಯಾಕಂದ್ರೆ ಆತ ಅಷ್ಟು ಸುಲಭಕ್ಕೆ ಯಾಮಾರುವ ಆಸಾಮಿಯಲ್ಲ, ಹೆಗಡೆ ಕಾಲದ ರಾಜಕಾರಣದ ಅನುಭವದಿಂದ ಪೊಲಿಟಿಕ್ಸ್ ಕಟ್ಟಿಕೊಂಡವರು. 2008ರಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಜಾತಿಯ ಕಾರಣಕ್ಕೆ ಯಡ್ಡಿಯ ಹಿಂದೆಹೋಗಿ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಅಧ್ಯಕ್ಷನಾಗಿ ರುಚಿ ಉಂಡದ್ದು ಬಿಟ್ಟರೆ ಅಂತಹ ಯಡವಟ್ಟು ನಿರ್ಧಾರಗಳನ್ನು ಆತ ತೆಗೆದುಕೊಂಡಿದ್ದಿಲ್ಲ. ಅಂತಹ ಆಸಾಮಿ ತಿಪ್ಪಾರೆಡ್ಡಿಯ ಡಬಲ್‌ಗೇಮ್‌ಗೆ ಬಲಿಯಾಗೋದು ಡೌಟು.

ಅದೇನೇ ಇರಲಿ, ಚಿತ್ರದುರ್ಗದ ರಾಜಕಾರಣವನ್ನೇ ಹೋಲ್‌ಸೇಲಾಗಿ ಕುಲಗೆಡಿಸಿದ ತಿಪ್ಪಾರೆಡ್ಡಿ ಮುಂದಿನ ಸಲವೂ ಮತ್ತೊಂದು ಕುಲಾಂತರಿ ಗೆಲುವಿಗಾಗಿ ತಂತ್ರ ಹೆಣೆದು ಕೂತಿರೋದು ಮಾತ್ರ ಸುಳ್ಳಲ್ಲ. ತಿಪ್ಪಾರೆಡ್ಡಿಯಂತಹ ರಾಜಕಾರಣಿಗಳಿಗೆ ಗೆಲುವು ಅಂದರೆ ಅದೇ ತಾನೆ!

■ ಟಿ.ಎನ್. ಷಣ್ಮುಖ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಒಂದು ಸೂಪರ್‌ಹಿಟ್ ಮತ್ತದರ ನಂತರದ ಲೆಕ್ಕಾಚಾರಗಳ ಬಗ್ಗೆ ಸಾಮಾನ್ಯವಾಗಿ ಗಾಂಧಿನಗರದ ಮಂದಿ ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ 'ರಾಜಕುಮಾರ' ಹಿಟ್ಟಾಯಿತಲ್ಲ, ಅದೂ ಸೂಪರ್‌ಡೂಪರ್ ಹಿಟ್. ಪುನೀತ್ ಹೊರತಾಗಿ ಬೇರೆ ಯಾರೇ ನಟಿಸಿದ್ದರೂ ಈ ಮಟ್ಟಿಗದು ಹಿಟ್ಟಾಗುತ್ತಿತ್ತೇ ಎಂಬುದು ಕೆಲವರ ಪ್ರಶ್ನೆಯಾದರೆ ಸಂತೋಷ್ ಆನಂದರಾವ್ ಎಂಬ ತಲೆಗಾರ ನಿರ್ದೇಶಕನಿಲ್ಲದೇ ಹೋಗಿದ್ದರೆ ಅದು ಸಾಧ್ಯವಾಗುತ್ತಿತ್ತೆ? ಎಂಬುದು ಹಲವರ ಪ್ರಶ್ನೆ. ಅಲ್ಲೀ ಹೊಂಬಾಳೆ ಸಂಸ್ಥೆಯ ಕಾರ್ತಿಕ್‌ಗೌಡರು 20 ಕೋಟಿ ದುಡ್ಡು ತಂದು ಸುರಿದ್ರಲ್ಲಾ ಅವರೇ ತಾನೇ ಇದಕ್ಕೆ ತಂದೆತಾಯಿ? ಎನ್ನುವವರಿಂದ ಹಿಡಿದು ಜಯಣ್ಣ ಭೋಗೇಂದ್ರ ಸೇರಿಕೊಂಡು ಆ ಮಟ್ಟಕ್ಕಿದನ್ನು ಹಂಚಿದ್ದೇ ಯಶಸ್ಸಿನ ಮೂಲವೆಂದೂ ಫ್ಯಾಮಿಲಿ ಸೆಂಟಿಮೆಂಟ್ಸ್‌ನಿಂದಾಗಿಯೇ ಗೆದ್ದಿತೆಂದೂ ಅಣ್ಣಾವ್ರ 'ಕಸ್ತೂರಿ ನಿವಾಸ'ದ ಗೊಂಬೆ ಹಾಡಿಲ್ಲದೇ ಹೋಗಿದ್ದರೆ ಪಡ್ಡೆ ಹುಡುಗರ ಹೊರತಾಗಿ ಬೇರೆ ಯಾರಾದರೂ ನೋಡುತ್ತಿದ್ದರೇ? ಎಂದೂ ಚಿತ್ರವಿಚಿತ್ರ ಜಿಜ್ಞಾಸೆಗಳ ತಾಕಲಾಟ ಸದ್ಯ ಗಾಂಧಿನಗರದಲ್ಲೇಕೆ ಹೊಗೆಯಾಡುತ್ತಿದೆಯೋ ಗೊತ್ತಾಗುತ್ತಿಲ್ಲ.


ಏಕೆಂದರೆ 'ರಾಜಕುಮಾರ' ಗಳಿಕೆಯಲ್ಲಿ ಮಾಡಿದ ವಿನೂತನ ವಿಕ್ರಮವಿದೆಯಲ್ಲ ಅದು ಇಂಥ ತರಹೇವಾರಿ ಪ್ರಶ್ನೆಗಳನ್ನಲ್ಲದೆ ಬೇರೇನೂ ಹುಟ್ಟುಹಾಕಲು ಸಾಧ್ಯವಿರಲಿಲ್ಲ!

ಈ ವಾರಕ್ಕೆ ಲೆಕ್ಕ ಹಾಕಿದರೆ ರಾಜಕುಮಾರದ ಗಳಿಕೆ ಇನ್ನೇನು ನೂರು ಕೋಟಿಯನ್ನು ಸಮೀಪಿಸುತ್ತಿದೆ!

ಹಿಂದಿಯಲ್ಲಿ 'ಹಂಡ್ರೆಡ್ ಕ್ರೋರ್ಸ್ ಕ್ಲಬ್' ಹೇಗೆ ಚಾಲ್ತಿಯಲ್ಲಿದೆಯೋ, ಅಮೀರ್, ಸಲ್ಮಾನ್, ಶಾರುಖ್ ಚಿತ್ರಗಳು ತೆರೆಕಂಡ ವಾರದೊಳಗೆ ಹೇಗೆ ನೂರು ಕೋಟಿ ದುಡಿದು ಇಂಥದೊಂದು ಕ್ಲಬ್‌ಗೆ ಸೇರ್ಪಡೆಯಾಗುತ್ತವೋ ಅಂಥದ್ದು ಕನ್ನಡದಲ್ಲಾದರೆ ಅದಿನ್ನೆಂಥಾ ಅಚ್ಚರಿಯಲ್ಲವೆ? ಆದರೆ ಕನ್ನಡ ಚಿತ್ರವೊಂದು ಬಿಡುಗಡೆಯಾದ ನೂರು ದಿನಕ್ಕೆ ಹೆಚ್ಚೂಕಮ್ಮಿ ನೂರು ಕೋಟಿಯ ಗಳಿಕೆಗೆ ಕಾರಣವಾದರೆ ಅದೂ ಕೂಡ ವಿನೂತನ ವಿಕ್ರಮವೇ ತಾನೆ?

ಒಂದೆರಡು ಪತ್ರಿಕೆಗಳಲ್ಲಿ ಬಂದ ವರದಿಯ ಪ್ರಕಾರವೇ ರಾಜಕುಮಾರ ಕನ್ನಡದ ಮೊದಲ ನೂರು ಕೋಟಿಯ ಚಿತ್ರ? ಈ ಹಿಂದಿನ ಗಳಿಕೆಯ ದಾಖಲೆಯಲ್ಲಿದ್ದ ಚಿತ್ರಗಳಾದರೂ ಎಂಥವು? 2006ರಲ್ಲಿ ಯೋಗರಾಜ ಭಟ್ಟರ 'ಮುಂಗಾರು ಮಳೆ' ಮೊದಲ ಬಾರಿಗೆ 50 ಕೋಟಿ ಬಾಚಿದಾಗ ಅದು ಕನ್ನಡ ಚಿತ್ರರಂಗದ ಯಾವಜ್ಜೀವ ದಾಖಲೆ ಎಂದೇ ಸಿನಿಮಾ ಪಂಡಿತರ ಲೆಕ್ಕಾಚಾರವಾಗಿತ್ತು. ಅದನ್ನು ಮುರಿದದ್ದು ಇದೇ ಸಂತೋಷ್ ಆನಂದರಾಮ್ ನಿರ್ದೇಶನದ 'ಮಿ. ಅಂಡ್ ಮಿಸೆಸ್ ರಾಮಾಚಾರಿ.' 2014ರಲ್ಲಿ ತೆರೆಕಂಡ ಮಿ. ಅಂಡ್.... ರಾಮಾಚಾರಿ ಮುಂಗಾರು ಮಳೆಯ ದಾಖಲೆಯನ್ನು ಸರಿಗಟ್ಟಿದಾಗ ಗಾಂಧಿನಗರದ ಲೆಕ್ಕಾಚಾರಗಳೇ ತಲೆಕೆಳಗಾದವು. ಅದೇ ಹೊತ್ತಿಗೆ ಸುದೀಪ್‌ನ 'ಮಾಣಿಕ್ಯ' ತೆರೆಕಂಡಿತು. ರಾಮಾಚಾರಿಯಷ್ಟೇ ಬಂಡವಾಳದಲ್ಲಿ ನಿರ್ಮಾಣಗೊಂಡಿದ್ದ ಮಾಣಿಕ್ಯ ಹೆಚ್ಚೂಕಮ್ಮಿ 43.5 ಕೋಟಿಯ ಗಳಿಕೆ ಕಂಡಾಗ ಒಂದು ಸಂಗತಿ ಸಾಬೀತಾಗಿತ್ತು, ಅದು ಹಂಚಿಕೆ. ಕತೆ, ನಿರ್ದೇಶನ, ಅದ್ದೂರಿತನ ಮತ್ತು ತಾರಾಗಣದಷ್ಟೇ ಅಥವಾ ಅದಕ್ಕಿಂತಲೂ ಮುಖ್ಯವಾದದ್ದು ಹಂಚಿಕೆ ಎಂದರೆ ಕರ್ನಾಟಕದ ಪ್ರಮುಖ ಜಿಲ್ಲಾ ಕೇಂದ್ರಗಳ ರೂಢಿಗತ ಥೇಟರುಗಳಷ್ಟೇ ಅಲ್ಲದೆ ನಿರ್ಲಕ್ಷಿತ ತಾಲ್ಲೂಕು ಕೇಂದ್ರಗಳಲ್ಲೂ ಚಿತ್ರವೊಂದು ಸಾಕಷ್ಟು ಆದಾಯ ಗಳಿಸಬಹುದು. ಎಲ್ಲಕ್ಕೂ ಮಿಗಿಲಾಗಿ ಹೊರರಾಜ್ಯಗಳಲ್ಲೂ ಕನ್ನಡದ ಮಾರುಕಟ್ಟೆ ವಿಸ್ತರಿಸಬಹುದು, ಜೊತೆಗೆ ಹೊರದೇಶಗಳಿಂದಲೂ ಚಿತ್ರವೊಂದರ ಮೂಲಕ ಡಾಲರ್‌ಗಳನ್ನು ಸೆಳೆಯಬಹುದು!


ಇದನ್ನು ಮತ್ತೊಮ್ಮೆ ಸಾಬೀತು ಮಾಡಿದ್ದು 'ಕಿರಿಕ್ ಪಾರ್ಟಿ'. ರಕ್ಷಿತ್ ಶೆಟ್ಟಿಯಂಥ ಆ್ಯವರೇಜ್ ನಟನನ್ನು ಹಾಕಿಕೊಂಡು ವಿನೂತನ ಕಥನ ಶೈಲಿಯಿಂದಾಗಿಯೇ 50 ಕೋಟಿಯ ಗಳಿಕೆ ಕಂಡಿದ್ದು ಮತ್ತೊಮ್ಮೆ ಹಂಚಿಕೆಯ ಸಾಧ್ಯತೆಯನ್ನು ಖಾತರಿಪಡಿಸಿತ್ತು. ಹಾಗೆ ನೋಡಿದರೆ 50 ಕೋಟಿಯ ಗಳಿಕೆಯ ಮುಂಗಾರು ಮಳೆ, ಕಿರಿಕ್ ಪಾರ್ಟಿ ಮತ್ತು ರಾಮಾಚಾರಿಯ ಕಲೆಕ್ಷನ್ ದಾಖಲೆಯೇ ಕನ್ನಡ ಚಿತ್ರವೊಂದರ ಸಾರ್ವಜನಿಕ ವಿಕ್ರಮವೆನಿಸಿತ್ತು. ಇಂಥಾದ್ದರಲ್ಲಿ 2017ರ ಮಾರ್ಚ್ 24ರಂದು 'ರಾಜಕುಮಾರ' ತೆರೆಕಂಡಾಗ ಅದು ಬೇರೆಲ್ಲ ಪುನೀತ್ ಚಿತ್ರಗಳ ಹಾಗೆ ಒಂದು ಮಟ್ಟದ ಹಿಟ್ ಎನಿಸಬಹುದೆಂಬ ನಿರೀಕ್ಷೆ ಅನೇಕರಿಗಿತ್ತಾದರೂ ಮುಂಗಾರು ಮಳೆ ಮತ್ತು ರಾಮಾಚಾರಿಯ ದಾಖಲೆಯನ್ನದು ಬ್ರೇಕ್ ಮಾಡಬಹುದೆಂದು ಯಾರೊಬ್ಬರೂ ಊಹಿಸಿರಲಿಲ್ಲ,




ರೆಕಾರ್ಡ್ ಬ್ರೇಕ್ ರಾಜಕುಮಾರ


ಯಾವುದೇ ಚಿತ್ರವೊಂದು ಮಾಡದ ದಾಖಲೆಯಿದು. ...
ವಿಶೇಷವೆಂದರೆ ಹೆಚ್ಚೂಕಮ್ಮಿ ನೂರು ಚಿತ್ರಮಂದಿರ...
50 ದಿನಗಳ ಸಂಭ್ರಮಕ್ಕೆ ಮುನ್ನಡೆಯುವ ಹೊತ್ತಿಗಾ...
ಗಳಿಕೆಯ ಸಾರ್ವಜನಿಕ ದಾಖಲೆಯ ಹೊಣೆಪಟ್ಟಿಗೆ ಈಡಾ...
ಈಗ ನೂರನೇ ದಿನದ ಲೆಕ್ಕ. ಇತ್ತೀಚೆಗೆ ಕನ್ನ...
ಯಾವೊಂದು ಚಿತ್ರವೂ 45 ಥೇಟರುಗಳಲ್ಲಿ ನ...
ದಿನ ಓಡಿದ ದಾಖಲೆಯಿಲ್ಲ, ನಿರ್ಮಾಪಕ ಕಾರ್ತಿಕ್‌ಗೌ...
ಗಳಿಕೆಯ ಪಕ್ಕಾ ಲೆಕ್ಕವನ್ನು ಯಾರಿಗೂ ಬಿಟ್ಟುಕೊಡು...
ಹಾಗೆ ಗಳಿಕೆಯ ಲೆಕ್ಕವನ್ನು ಬೇರೆ ಯಾರೇ ನಿರ್ಮಾಪ...
ಬಹಿರಂಗಪಡಿಸುವುದೂ ಇಲ್ಲ.

ಹಾಗಂತ ಗಾಂಧಿನಗರವೇನೂ ತೆಪ್ಪಗೆ ಕೂತಿಲ್ಲ...
ಪ್ರಕಾರ ರಾಜಕುಮಾರ ಏನಿಲ್ಲವೆಂದರೂ 100 ಕೋ...
ಬಾಚಿದೆ. ನೂರನೇ ದಿನದ ಹೊತ್ತಿಗೆ ಕಮ್ಮಿಯೆಂದ...
ಅದು 80 ಕೋಟಿ ಗಳಿಸಿದ ಬಗ್ಗೆ ಸ್ಪಷ್ಟ ದಾಖಲೆಗ...
ಬೆಂಗಳೂರು ಸೇರಿದಂತೆ ಮೈಸೂರು, ಹುಬ್ಬಳ್ಳಿ, ಮಂಗಳ...
ಇತ್ಯಾದಿ ಊರುಗಳ ಮಲ್ಟಿಪ್ಲೆಕ್ಸ್‌ಗಳಿಂದ ತಲಾ ಏ...
ಕೋಟಿಯಂತೆ ಪೇರು ಬಂದಿದೆಯಂತೆ. ಇಂಥ ಹತ್ತು...
ಅಧಿಕ ಮಲ್ಟಿಪ್ಲೆಕ್ಸ್‌ಗಳ ಆದಾಯವೇ ಇಪ್ಪ...
ಕೋಟಿಯಾಯಿತು. ಬಹುಶಃ ಯಾರೂ ಗಮನಿ...
ಮತ್ತೊಂದು ಅಂಶವೆಂದರೆ ರಾಜಕುಮಾರದ ಹೊರರಾಜ...
ಆದಾಯ. ಚೆನ್ನೈ, ಹೈದರಾಬಾದ್, ಮುಂಬಯಿ, ...
ಮತ್ತು ದೆಹಲಿ ಸೇರಿದಂತೆ ರಾಜಸ್ತಾನದ ಬಿಕಾನೆ...
ಮಹಾರಾಷ್ಟ್ರದ ಸೊಲ್ಲಾಪುರ, ಕೊಲ್ಲಾಪುರ, ತಮಿಳುನಾ...
ಹೊಸೂರು ಇತ್ಯಾದಿ ವಿಧಗಳಿಂದ ಬಂದ ಲಾಭಾಂಶ...
ಪ್ರತ್ಯೇಕ ಪಟ್ಟಿಯಿದೆ. ಅದೇ ಹೆಚ್ಚೂಕಮ್ಮಿ 10 ಕೋಟಿ...
ಪೇರಂತೆ!









ಹೆಚ್ಚೆಂದರೆ ಒಂದೋ ಎರಡೋ ಚಿತ್ರಮಂದಿರಗಳಲ್ಲಿ ನೂರು ದಿನ ಓಡಿದರೇ ಹೆಚ್ಚೆಂದು ಗಾಂಧಿನಗರ ಲೆಕ್ಕ ಹಾಕಿತ್ತು.

ಏಕೆಂದರೆ ಕನ್ನಡ ಚಿತ್ರಗಳ ಪಾಲಿಗದು ಬರಗೆಟ್ಟ ಕಾಲ. ಹೆಚ್ಚೂಕಮ್ಮಿ ಅದೇ ಹೊತ್ತಿಗೆ ಕೊಬ್ರಿ ಮಂಜು ನಿರ್ಮಾಣದ ಯಶ್‌ನ 'ಸಂತು ಸ್ಟ್ರೈಟ್ ಫಾರ್ವರ್ಡ್' ಮುಗ್ಗರಿಸಿ ಬಿದ್ದಿತ್ತು. ದರ್ಶನ್‌ನ ಮಹತ್ವಾಕಾಂಕ್ಷೆಯ 'ಚಕ್ರವರ್ತಿ', ಸುದೀಪ್‌ನ 'ಹೆಬ್ಬುಲಿ'ಯಂಥವುಗಳೇ ಒಂದು ವಾರಕ್ಕೆ ಸುಸ್ತು ಹೊಡೆದಂಥ ಕಾಲವದು. ಇಂಥಾ ದುರ್ಭಿಕ್ಷದ ನಡುವೆಯೇ ರಾಜಕುಮಾರ ಹೆಣಗಬೇಕಿತ್ತು. ಅದು ಪುನೀತ್ ಪಾಲಿಗೂ ಹತಾಶ ಪರಿಸ್ಥಿತಿಯೇ. ಸಾಲುಸಾಲಾಗಿ ಸಾಧಾರಣವಾಗಿ ಮುಗಿದುಹೋದ ಪುನೀತ್ ಚಿತ್ರಗಳ ಪಟ್ಟಿಗೆ ರಾಜಕುಮಾರ ಕೂಡ ಮತ್ತೊಂದು ಸೇರ್ಪಡೆಯೆಂದೇ ಗಾಂಧಿನಗರದ ಕುಹಕಿಗಳು ಆಡಿಕೊಂಡರು. ಆದರೆ ರಾಜಕುಮಾರದ ನಿರೀಕ್ಷೆಯೇ ಬೇರೆಯಿತ್ತು. ಅದಕ್ಕೆ ಮುಖ್ಯ ಕಾರಣ ನಿರ್ದೇಶಕ ಸಂತೋಷ್ ಆನಂದರಾಮ್ ಮತ್ತು ರಾಜಕುಮಾರಕ್ಕೆ ಬಳಕೆಯಾಗಿದ್ದ 'ಕಸ್ತೂರಿ ನಿವಾಸ'ದ ಸಂಕೇತ.

ಯಾವುದೋ ಕಾಲಕ್ಕೆ ಕನ್ನಡಿಗರನ್ನು ಕಾಡಿದ್ದ 'ಕಸ್ತೂರಿ ನಿವಾಸ' ಮತ್ತು ಅದರಲ್ಲಿನ ರಾಜ್‌ಕುಮಾರ್ ನಟನೆಗೆ ಲೆಜೆಂಡರಿ ಪರಂಪರೆಯ ಸ್ಪರ್ಶವಿದೆ. ಈ ಹಿಂದೆ 'ರಾಮಾಚಾರಿ' ಚಿತ್ರಕ್ಕೆ ಹೇಗೆ ವಿಷ್ಣುವರ್ಧನ್‌ನ 'ನಾಗರಹಾವು' ಚಿತ್ರವನ್ನು ಆನಂದರಾಮ್ ಸಂಕೇತವಾಗಿ ಬಳಸಿ ಯಶಸ್ಸು ಕಂಡಿದ್ದರೋ ಅದೇ ಸೂತ್ರವನ್ನು 'ರಾಜಕುಮಾರ'ಕ್ಕೂ ಬಳಸಿದ್ದರು. ಚಿತ್ರದ ಹೆಸರೇ 'ರಾಜಕುಮಾರ'. ಅಂದರೆ ಅಣ್ಣಾವ್ರ ಹೆಸರು. ಜೊತೆಗೆ ಸಂಕೇತವಾಗಿದ್ದದ್ದು ಅದೇ 'ಕಸ್ತೂರಿ ನಿವಾಸ'ದ ಗೊಂಬೆ ಮತ್ತು ಆಡಿಸಿ ನೋಡು ಹಾಡು. ಇದು ಪುನೀತ್ ಇಮೇಜನ್ನೇ ಬದಲಿಸುವ ಅಂಶಗಳಾಗಿದ್ದುದಷ್ಟೇ ಅಲ್ಲ ರಾಜಕುಮಾರದ ಬಗ್ಗೆ ಬೇರೆಯದೇ ನಿರೀಕ್ಷೆಯನ್ನು ಹುಟ್ಟು ಹಾಕಿತು. ಇದೆಲ್ಲವನ್ನೂ ಲೆಕ್ಕ ಹಾಕಿಯೇ ಹೊಂಬಾಳೆ ಸಂಸ್ಥೆಯ ಕಾರ್ತಿಕ್ ಗೌಡರು ನಿರ್ಮಾಣದ ಪ್ರತಿ ಹಂತದಲ್ಲೂ ಯಾವುದಕ್ಕೂ ಕೊರತೆಯಾಗದ ಹಾಗೆ ದುಡ್ಡು ಸುರಿಯುತ್ತಲೇ ಬಂದರು. ಮೊದಮೊದಲು ಹದಿನೈದು ಕೋಟಿಯಷ್ಟಿದ್ದ ಒಟ್ಟು ಬಜೆಟ್ ಬಿಡುಗಡೆಯ ಹೊಸ್ತಿಲಲ್ಲಿ 20 ಕೋಟಿಗೇರಿತು. ವಿಶೇಷವಾಗಿ ಸಾಮಾಜಿಕ ಜಾಲತಾಣದ ಮೂಲಕ ಪ್ರಚಾರ ಮಾಡುವ ವಿನೂತನ ತಂತ್ರವೊಂದನ್ನು ನಿರ್ದೇಶಕ ಆನಂದರಾಮ್ ಮತ್ತು ನಿರ್ಮಾಪಕ ಕಾರ್ತಿಕ್‌ಗೌಡರು ರೂಪಿಸಿದ್ದ ಫಲವೆಂಬಂತೆ ಹಂಚಿಕೆದಾರ ಜಯಣ್ಣ ವಿಶ್ವವ್ಯಾಪಿ ರಿಲೀಜ್‌ನ ತಯಾರಿ ನಡೆಸಿದ್ದರು.

ಅದು ಹೆಚ್ಚೂಕಮ್ಮಿ 300 ಕೇಂದ್ರಗಳಲ್ಲಿ ಏಕಕಾಲದ ಬಿಡುಗಡೆ. ಕರ್ನಾಟಕವೊಂದರಲ್ಲೇ ಮುನ್ನೂರು ಥೇಟರುಗಳೆಂದರೆ ಇನ್ನು ಹೊರರಾಜ್ಯದ, ವಿದೇಶಗಳ ಬಿಡುಗಡೆಯ ಲೆಕ್ಕವೇ ಬೇರೆಯಿತ್ತು. ಅದ್ದೂರಿಯಾಗೇ ಅಪಾರ ನಿರೀಕ್ಷೆಯಿಂದ ತೆರೆಕಂಡ ರಾಜಕುಮಾರ ಅದೆಂಥಾ ಅಬ್ಬರದ ಕಲೆಕ್ಷನ್ ಕಂಡಿತೆಂದರೆ ರಾಮಾಚಾರಿ ಮತ್ತು ಮುಂಗಾರು ಮಳೆಯ 50 ಕೋಟಿಯ ದಾಖಲೆಯನ್ನದು ನಾಲ್ಕೇ ವಾರದಲ್ಲಿ ಮುರಿದುಹಾಕಿತು, ಕನ್ನಡದ ಬೇರೆ

ಇನ್ನೂ ವಿದೇಶಗಳ ಪೇರ್‌ಗೆ ಹೋಲಿಸಿದರೆ ...
ಹಿಂದಿನ ಯಾವೊಂದು ಕನ್ನಡ ಚಿತ್ರವೂ ಮಾ...
ದಾಖಲೆಯ ಗಳಿಕೆಯನ್ನು ರಾಜಕುಮಾರ ಗಳಿಸಿತ್ತು. ಭಾ...
ಇತರೇ ರಾಜ್ಯಗಳ 45 ಥೇಟರುಗಳಷ್ಟೇ ಅ...
ಅಮೆರಿಕವೊಂದರಲ್ಲೇ 75 ಕೇಂದ್ರಗಳಲ್ಲಿ ರಾಜಕುಮಾ...
ತೆರೆಕಂಡಿತ್ತು. ಬ್ರಿಟನ್‌ನ 15ಕ್ಕೂ ಅಧಿಕ, ಆಸ್ಟ್ರೇಲಿಯಾ...
7, ದುಬೈ ಸೇರಿದಂತೆ ಮಧ್ಯಪ್ರಾಚ್ಯದ 8 ಕೇಂದ್ರಗ...
ರಾಜಕುಮಾರನ ಅಬ್ಬರವಿತ್ತು. ನೈಜೀರಿಯಾ ಮತ್ತು ದ...
ಆಫ್ರಿಕಾದಂಥ ಕನ್ನಡಿಗರ ಜಾಡಿಲ್ಲದ ಆಫ್ರಿಕಾದ ದೇಶಗ...
ರಾಜಕುಮಾರ ತೆರೆಕಂಡು ಅಷ್ಟಿಷ್ಟಾದರೂ ಡಾಲರ್‌ಗ...
ಗಳಿಸಿಕೊಡುತ್ತದೆಯೆಂದರೆ ಅದು ಸಣ್ಣ ಮಾತೆ?

ಈ ಪ್ರಕಾರವೇ ಲೆಕ್ಕ ಹಾಕುವುದಾದರೂ ನೂ...
ದಿನದ ಹೊತ್ತಿಗೆ ರಾಜಕುಮಾರ ಕಮ್ಮಿಯೆಂದರೂ ...
ಕೋಟಿಯಂತೂ ಖಂಡಿತ ಬಾಚಿದೆ. ಈ ಬಗ್ಗೆ ಹೊಂ...
ಸಂಸ್ಥೆಯಾಗಲಿ ಹಂಚಿಕೆದಾರ ಜಯಣ್ಣನಾಗಲಿ ಬ...
ಬಿಡದೇ ಹೋದರೂ ಗಾಂಧಿನಗರದ ಪಂಡಿತರಿ...
ಲೆಕ್ಕ ಸಿಗದೆಂದೇನಲ್ಲ. ಹೆಚ್ಚೆಂದರೆ ಇನ್ನೊಂದು ವಾರ ...
ಅರ್ಧ ಥೇಟರುಗಳಲ್ಲಿದ್ದರೂ ಈ ಮೊತ್ತ ನೂರು ಕೋ...
ಮುಟ್ಟುತ್ತದೆ. ಇದು ಥೇಟರುಗಳ ಗಳಿಕೆಯ ಲೆಕ್ಕ ಮಾ...
ಇನ್ನು ಸ್ಯಾಟಲೈಟ್ ಹಕ್ಕು, ಆಡಿಯೋ ಗಳಿಕೆ ಇತ್ಯಾ...
ಲೆಕ್ಕಕ್ಕೆ ಇಳಿದರೆ ಈಗಾಗಲೇ ಲಾಭದ ಪ್ರಮಾಣ ನೂ...
ಕೋಟಿ ದಾಟಿಯಾಗಿದೆ. ಬಹುಶಃ ಕನ್ನಡದ ಇನ್ನಾ...
ಚಿತ್ರ ಈ ದಾಖಲೆಯನ್ನು ಮುರಿಯುತ್ತೋ ಸರಿಗಟ್ಟು...
ಗೊತ್ತಿಲ್ಲ. ಸದ್ಯಕ್ಕಂತೂ ಕನ್ನಡ ಚಿತ್ರವೊಂದು ನೂರು ಕೋ...
ಬಾಚಿದ ವಿಕ್ರಮ ಮತ್ತು ಸಂತಸವಷ್ಟೇ ಕನ್ನಡಿಗ...
ಇಂಥಾದ್ದೊಂದು ಸಾಧ್ಯತೆಯನ್ನು ಸಾಬೀತುಪಡಿ...
ಹೊಂಬಾಳೆ ಸಂಸ್ಥೆಯ ವಿಜಯ್ ಕಿರಗಂದೂರು ...
ಕಾರ್ತಿಕ್‌ಗೌಡರನ್ನು ಕನ್ನಡಿಗರು ಅಭಿನಂದಿಸಲೇಬ...
ಏಕೆಂದರೆ ಇಂಥ ಪ್ರತಿ ಪ್ರಯತ್ನವೂ ಕನ್ನ...
ಮಾರುಕಟ್ಟೆಯನ್ನು ವಿಸ್ತರಿಸುತ್ತದೆ ಮತ್ತು ಇಂಥ ಹು...
ಸಾಹಸಗಳಿಗೆ ದಾರಿ ಕಲ್ಪಿಸುತ್ತದೆ.

ರಾಜಕುಮಾರ ಈ ಎಲ್ಲಾ ಆಸೆ, ನಿರೀಕ್ಷೆ, ಭರವಸೆಗ...
ಹೊತ್ತ ಗಾಂಧಿನಗರದ ನಿಜ ರಾಜಕುಮಾರ!


● ರಾ. ಸೋಮನಾ...


















ಮೈಸೂರು: ಪ್ರಜ್ವಲ್ ಎಸೆದ ಸೂಟ್‌ಕೇಸ್ ಬಾಂಬ್‌ನ ಒಳಗುಟ್ಟೇನು?

ದೇವೇಗೌಡರು ಫೀನಿಕ್ಸ್‌ನಂತೆ ಎದ್ದು ನಿಲ್ಲಲು ...ವಯಸ್ಸಿನಲ್ಲೂ ಹುಮ್ಮಸ್ಸಿನಿಂದ ಓಡಾಡುತ್ತಿದ್ದರೆ, ಅತ್ತ ...ರ ಖಾಸಾ ಮೊಮ್ಮಗ ಪ್ರಜ್ವಲ್ ರೇವಣ್ಣ ಜೆಡಿಎಸ್ ...ವನ್ನೇ ಅಲ್ಲಾಡಿಸುವಂಥ ಬಾಂಬೊಂದನ್ನು ಹುಣಸೂರು ...ಯಲ್ಲಿ ಎಸೆದಿದ್ದಾರೆ. "ಜೆಡಿಎಸ್ ಪಕ್ಷದಲ್ಲಿ ನಿಷ್ಠಾವಂತ ...ರ್ಯಕರ್ತರಿಗೆ ಕೊನೆ ಬೆಂಚ್. ಸೂಟ್‌ಕೇಸ್ ಜತೆ ...ವ ನಾಯಕರಿಗೆ ಮುಂದಿನ ಬೆಂಚ್ ಎನ್ನುವಂತಾಗಿದೆ. ... ಸಂಸ್ಕೃತಿ ಹೋಗಬೇಕಾಗಿದೆ" ಎಂಬ ಪ್ರಜ್ವಲ್‌ನ ...ಳುಗಳು ಕುಮಾರಸ್ವಾಮಿ ಆದಿಯಾಗಿ ದೊಡ್ಡಗೌಡರನ್ನೂ ...ಜುಗರಕ್ಕೆ ಈಡು ಮಾಡಿರೋದು ಸುಳ್ಳಲ್ಲ. ಗೌಡರ ...ುಂಬದಲ್ಲಿ ಎಲ್ಲವೂ ನೆಟ್ಟಗಿಲ್ಲ ಅನ್ನೋ ಗಾಸಿಪ್‌ಗೆ ...ಶ್ ಪ್ರಕರಣ ಪುಷ್ಟಿ ನೀಡಿದೆ. ಚಾಣಾಕ್ಷ ತಂತ್ರಗಾರಿಕೆಯ ...ರು ಈ ಸಿಕ್ಕನ್ನು ಬಿಡಿಸಲು ನಾಜೂಕಾಗೇ ...ತ್ನಿಸುತ್ತಿದ್ದಾರೆ. ಸೂಟ್‌ಕೇಸ್ ಬಾಂಬನ್ನು ಬಂಡಾಯ ...ಕರತ್ತ ತಿರುಗಿಸಿ, ಪ್ರಜ್ವಲ್ ಮೂಗಿಗೆ ಎಂಪಿ ಎಲೆಕ್ಷನ್ ...ಟ್ ತುಪ್ಪ ಸವರುವ ಕೆಲಸಕ್ಕೆ ದೇವೇಗೌಡರು ...ಂದಾಗಿದ್ದಾರೆ.





ಜೆ.ಟಿ. ದೇವೇಗೌಡ



...ಪ್ರಜ್ವಲ್‌ನ ಪೊಲಿಟಿಕಲ್ ಕಾತರಿಕೆಯ ಹಿಂದೆ ಆತನ ...ು ಭವಾನಿ ರೇವಣ್ಣ ಇದ್ದಾರೆ ಅನ್ನೋದ್ರಲ್ಲಿ ಎರಡು ...ತಿಲ್ಲ. ಭವಾನಮ್ಮನಿಗೆ ಖುದ್ದಾಗಿ ರಾಜಕೀಯಕ್ಕೆ ...ಬೇಕು ಅಂತ ವಿಪರೀತ ಆಸಕ್ತಿಯಿತ್ತು. ಅನಿತಾ ...ಮಾರಸ್ವಾಮಿ ಮಧುಗಿರಿಯಿಂದ ಎಂಎಲ್‌ಎ ...ದ ಮೇಲಂತೂ ಭವಾನಮ್ಮನ ಆಸೆ ಮತ್ತಷ್ಟೂ ಗರಿಗೆದರಿತ್ತು. ...ರೆ ಅದ್ಯಾಕೋ ದೇವೇಗೌಡರು ಅವರ ಆಸೆಗೆ ...ರುಚಿದರು. ಆಗಿನಿಂದ ತನ್ನ ಮಗನ ಮೂಲಕವಾದರೂ ...ಸೆ ಈಡೇರಿಸಿಕೊಳ್ಳಬೇಕು ಅಂತ ಹೆಣಗಾಡುತ್ತಿದ್ದಾರೆ. ...ಮೊದಲು ಬೇಲೂರು ಕ್ಷೇತ್ರದಲ್ಲಿ ಪ್ರಜ್ವಲ್‌ನನ್ನು ...ಅಖಾಡ ಅಣಿಗೊಳಿಸಿದ್ದರು. ಆದರೆ ಅಲ್ಲಿ ಟಿಕೆಟ್ ...ುವ ಬಗ್ಗೆ ದೇವೇಗೌಡರು ಯಾವ ಖಾತರಿಯನ್ನೂ ...ಡದಿದ್ದರಿಂದ ಹುಣಸೂರು ಕ್ಷೇತ್ರವನ್ನು ಆಯ್ಕೆ ...ಕೊಂಡು ಕಳೆದ ಒಂದು ವರ್ಷದಿಂದ ಭಾರೀ ತಯಾರಿ ...ದ್ದರು. ಅಮ್ಮನಂತೆಯೇ ರಾಜಕೀಯ ಮಹತ್ವಾಕಾಂಕ್ಷೆ ...ದಿರುವ ಪ್ರಜ್ವಲ್ ಕೂಡಾ ಬೂತ್ ಮಟ್ಟದಲ್ಲಿ ...ರ್ಯಕರ್ತರ ಸಂಪರ್ಕ ಇಟ್ಟುಕೊಂಡು ಅಣಿಯಾಗಿದ್ದರು. ...ದೆ ಅದೇ ಕ್ಷೇತ್ರದಲ್ಲಿ ಮಾಜಿ ಮಂತ್ರಿ ಜಿ.ಟಿ. ...ದೇವೇಗೌಡರು ತಮ್ಮ ಮಗ ಹರೀಶ್‌ನನ್ನು ...ರ್ಥಿಯಾಗಿಸಲು ಪ್ರಯತ್ನಿಸುತ್ತಿದ್ದುದು ಪ್ರಜ್ವಲ್‌ಗೆ ...ನೋಡೆಯಂತಾಗಿತ್ತು. ಯಾವಾಗ ಎಚ್.ವಿಶ್ವನಾಥ್ ...ೆಸ್ ತೊರೆದು ಜೆಡಿಎಸ್ ಸೇರಿ, ಹುಣಸೂರು ಟಿಕೆಟ್ ...ೆ ಕಣ್ಣಿಟ್ಟರೋ ಆಗ ಪ್ರಜ್ವಲ್‌ಗೆ ಬೇಲೂರಿನಂತೆ ...ಲ್ಲಿ ನಿರಾಸೆಯೇ ಗತಿಯಾಯ್ತು. ಅದೇ ಸಿಟ್ಟಿನಲ್ಲಿ ...ಇದೊಂದು ಬಾಂಬ್ ಎಸೆದಿದ್ದಾರೆ. ಆ ಬಾಂಬ್‌ಗೆ ...ಂತ ನೆಲವೇ ಅದುರಿ ಬೀಳಲಿದೆ ಎಂಬುದೂ ...ಗೆ ಅರ್ಥವಾಗದೆ ಇರೋದು ಪ್ರಜ್ವಲ್‌ನ ...ಬುದ್ಧತೆಯನ್ನು ಎತ್ತಿ ತೋರಿಸುತ್ತದೆ.

"ಪ್ರಜ್ವಲ್ ರೇವಣ್ಣ ಅವರು ನನ್ನ ಕ್ಷೇತ್ರದಲ್ಲೇ ...ಸಭಾ) ಚುನಾವಣೆಗೆ ಸ್ಪರ್ಧಿಸಿದರೆ ನಾನು ಕ್ಷೇತ್ರ ಬಿಟ್ಟುಕೊಡಲು ಸಿದ್ಧ ಅಥವಾ ಮೈಸೂರು ಭಾಗದ ಯಾವ ಕ್ಷೇತ್ರದಲ್ಲಾದರೂ ಸ್ಪರ್ಧೆ ಮಾಡಿದರೆ ಅವರ ಗೆಲುವಿಗೆ ಶ್ರಮಿಸುತ್ತೇನೆ" ಅಂತ ಶಾಸಕ ಸಾರಾ ಮಹೇಶ್ ಈಗ್ಗೆ ಎರಡು ತಿಂಗಳ ಹಿಂದೆ ಹೇಳಿದ್ದೇ ಪ್ರಜ್ವಲ್‌ನಲ್ಲಿ ಇನ್ನಿಲ್ಲದಂತೆ ಆಸೆ ಹುಟ್ಟಿಸಿತ್ತು. ಅಸಲಿಗೆ ಅಷ್ಟೊತ್ತಿಗಾಗಲೇ ಪ್ರಜ್ವಲ್ ಹುಣಸೂರಿನಲ್ಲಿ ಆ್ಯಕ್ಟೀವ್ ಆಗಿದ್ದ. ಹಾಗಾಗಿ ತನ್ನ ಕ್ಷೇತ್ರಕ್ಕಂತೂ ಬರೋದಿಲ್ಲ ಎಂಬ ಖಾತರಿಯಲ್ಲೇ ಸಾರಾ ಮಹೇಶ್ ಅಂತಹದ್ದೊಂದು ಹೇಳಿಕೆ ನೀಡಿದ್ದರು. ಆತನ ನಿಜವಾದ ಉದ್ದೇಶ ಇದ್ದದ್ದು ಜಿ.ಟಿ.ದೇವೇಗೌಡ ಮತ್ತು ಚಿಕ್ಕಮಾದು ಮೇಲೆ ಪ್ರಜ್ವಲ್‌ನನ್ನು ಎತ್ತಿಕಟ್ಟುವುದೇ ಆಗಿತ್ತು. ಯಾಕೆಂದರೆ ಪ್ರಜ್ವಲ್ ಈ ಭಾಗದ ರಾಜಕಾರಣಕ್ಕೆ ಬರುವುದಾದರೆ ಅದು ಜಿ.ಟಿ.ದೇವೇಗೌಡರ ಪುತ್ರವಾತ್ಸಲ್ಯಕ್ಕೆ ದುಬಾರಿಯಾಗಲಿದೆ ಎಂಬುದನ್ನು ಸಾರಾ ಅಂದಾಜಿಸಿದ್ದರು. ಸಾ.ರಾ. ಮಾತಿನಿಂದ ಹುಮ್ಮಸ್ಸುಗೊಂಡೇ ಪ್ರಜ್ವಲ್ ಇಷ್ಟು ಆಳಕ್ಕೆ ಇಳಿದದ್ದು. ಇದೇ ಕಾರಣಕ್ಕೆ ಜಿ.ಟಿ.ದೇವೇಗೌಡರು ಮತ್ತು ಸಾ.ರಾ. ನಡುವಿನ ಸಂಬಂಧ ಹಳಸಲು ಶುರುವಾದದ್ದು. ಹೋದಬಂದ ಕಡೆ ಸಾ.ರಾ.ಮಹೇಶ್, ಜಿ.ಟಿ.ದೇವೇಗೌಡ ಒಬ್ಬರನ್ನೊಬ್ಬರು ಮುಖನೋಡಿಕೊಳ್ಳದ ಮಟ್ಟಕ್ಕೆ ದ್ವೇಷ ಬೆಳೆಯುತ್ತಾ ಹೋಯಿತು.

ಇತ್ತ ಪ್ರಜ್ವಲ್‌ಗೂ ಜಿ.ಟಿ.ದೇವೇಗೌಡರ ಮೇಲೆ ಮುನಿಸು ಶುರುವಾಯ್ತು. ಅದೇವೇಳೆಗೆ ಎಚ್.ವಿಶ್ವನಾಥ್ ಎಂಟ್ರಿಯಿಂದ ಪ್ರಜ್ವಲ್‌ನ ಆಶಾಗೋಪುರವೇ ಕಳಚಿ ಬಿತ್ತು. ಹಲವು ಮೂಲಗಳ ಪ್ರಕಾರ ಪ್ರಜ್ವಲ್ ರಾಜಕಾರಣಕ್ಕೆ ಬರೋದು ಸ್ವತಃ ಕುಮಾರಸ್ವಾಮಿಗೇ ಇಷ್ಟವಿಲ್ಲವಂತೆ. ಹಾಗಾಗಿಯೇ ಮುಂದಿನ ಎಲೆಕ್ಷನ್‌ನಲ್ಲಿ ತಮ್ಮ ಕುಟುಂಬದಿಂದ ತಾನು ಮತ್ತು ರೇವಣ್ಣ ಇಬ್ಬರು ಬಿಟ್ಟರೆ ಮತ್ತೊಬ್ಬರು ಸ್ಪರ್ಧಿಸುವುದಿಲ್ಲ ಎಂಬ ಫರ್ಮಾನು ಹೊರಡಿಸಿದ್ದು ಎನ್ನಲಾಗುತ್ತಿದೆ.

ಬಂಡಾಯ ಶೂರರತ್ತ ಬಾಂಬು


ಪ್ರಜ್ವಲ್ ಎಸೆದ ಸೂಟ್‌ಕೇಸ್ ಬಾಂಬ್‌ನ್ನು ಎಚ್.ಡಿ.ಕುಮಾರಸ್ವಾಮಿ ಜೆಡಿಎಸ್ ಬಂಡಾಯ ಶಾಸಕರ ಮೇಲೆ ಎಸೆದಿದ್ದಾರೆ. "ಜೆಡಿಎಸ್‌ನಲ್ಲಿ ಸೂಟ್‌ಕೇಸ್ ಸಂಸ್ಕೃತಿ ಇದ್ದದ್ದು ನಿಜ, ಸೂಟ್‌ಕೇಸ್ ತಂದವರಿಗೆ ಮೊದಲ ಸಾಲಿನಲ್ಲಿ ಕೂರಿಸುತ್ತಿದ್ದುದೂ ನಿಜ. ಆದರೆ ಸೂಟ್‌ಕೇಸ್ ಪಡೆಯುತ್ತಿದ್ದವರೆಲ್ಲಾ ಪಕ್ಷ ಬಿಟ್ಟು ಹೋಗಿದ್ದಾರೆ. ಬಹುಶಃ ಪ್ರಜ್ವಲ್ ರೇವಣ್ಣ ಅವರ ಕುರಿತು ಹೇಳಿಕೆ ನೀಡಿರಬಹುದು" ಎಂದು ಜೆಡಿಎಸ್‌ನಿಂದ ಅಮಾನತುಗೊಂಡ ಶಾಸಕರತ್ತ ತಿರುಗಿಸಿದ್ದಾರೆ. ಇದಕ್ಕೆ ಕೆಂಡಮಂಡಲವಾಗಿರುವ ಬಂಡಾಯ ಶಾಸಕ ಜಮೀರ್ ಅಹಮದ್ "ಸೂಟ್‌ಕೇಸ್ ರಾಜಕೀಯ ಮಾಡುವುದರಲ್ಲಿ ಕುಮಾರಸ್ವಾಮಿ ಎತ್ತಿದ ಕೈ" ಎಂದಿದ್ದಾರೆ. "ಎಚ್.ಡಿ.ದೇವೇಗೌಡ ಅವರು ಸೂಟ್‌ಕೇಸ್ ರಾಜಕಾರಣ ಮಾಡುವುದಿಲ್ಲ ಎಂದರೆ, ಸೂಟ್‌ಕೇಸ್ ಪಡೆಯುತ್ತಿದ್ದವರು ಈಗ ಪಕ್ಷದಿಂದ ಹೊರಹೋಗಿದ್ದಾರೆ ಎಂದಿರುವ ಎಚ್.ಡಿ.ಕುಮಾರಸ್ವಾಮಿ ನೇರಾನೇರ ಚರ್ಚೆಗೆ ಬರಲಿ" ಎಂದು ಸವಾಲು ಹಾಕಿರುವ ಮತ್ತೊಬ್ಬ ಶಾಸಕ ಬಾಲಕೃಷ್ಣ "ಸೂಟ್‌ಕೇಸ್ ಮತ್ತು ಬಿ ಫಾರಂ ಅವರ ಪಕ್ಷದ ಸ್ವತ್ತು. ನಾವು ಸೂಟ್‌ಕೇಸ್ ತೆಗೆದುಕೊಂಡಿದ್ದೆವೋ ಇಲ್ಲವೋ ಅನ್ನುವುದನ್ನು ಪ್ರಜ್ವಲ್ ಬಳಿಯೇ ಅವರು ಕೇಳಿ ತಿಳಿದುಕೊಳ್ಳಲಿ. ಪಕ್ಷಕ್ಕೆ ಧಕ್ಕೆಯಾಗುವುದನ್ನು ತಪ್ಪಿಸಲು ನಮ್ಮ ಮೇಲೆ ಗೂಬೆ ಕೂರಿಸಿದ್ದಾರೆ" ಎಂದು ತಿರುಗೇಟು ನೀಡಿದ್ದಾರೆ.

ಇನ್ನು ಎಚ್.ಡಿ.ರೇವಣ್ಣನವರು "ಪಕ್ಷದ ಆಂತರಿಕ ವಿಚಾರಕ್ಕೆ ಸಂಬಂಧಿಸಿದಂತೆ ನನ್ನ ಪುತ್ರ ಪ್ರಜ್ವಲ್ ರೇವಣ್ಣ ನೀಡಿರುವ ಹೇಳಿಕೆಗೆ ಮಹತ್ವ ಕೊಡುವ ಅಗತ್ಯವಿಲ್ಲ. ಪಕ್ಷದಲ್ಲಿ ಎಚ್.ಡಿ.ದೇವೇಗೌಡರ ಮಾತೇ ಅಂತಿಮ. ನಮ್ಮಲ್ಲಿ ಯಾವುದೇ ಅಸಮಾಧಾನ ಇಲ್ಲ. ಎಲ್ಲರೂ ಒಗ್ಗಟ್ಟಿನಿಂದ ಇದ್ದೇವೆ" ಎಂದು ತೇಪೆ ಹಾಕಲು ಯತ್ನಿಸಿದ್ದಾರೆ. ಈ ನಿಟ್ಟಿನಲ್ಲಿ ಖಡಕ್ಕಾಗಿ ಪ್ರತಿಕ್ರಿಯಿಸಿರೋದು ದೇವೇಗೌಡರು ಮಾತ್ರ. "ಪ್ರಜ್ವಲ್ ನೀಡಿರುವ ಹೇಳಿಕೆ ವಿವಾದ ಉಂಟುಮಾಡಿದೆ. ಶಿಸ್ತು ಇಲ್ಲ ಅಂದ್ರೆ ಮಗ ಆದ್ರೆ ಏನು, ಮೊಮ್ಮಗ ಆದ್ರೆ ಏನು, ಹಿಂದೆಮುಂದೆ ನೋಡದೆ ಕ್ರಮ ಕೈಗೊಳ್ಳುತ್ತೇನೆ. ಟಿಕೆಟ್ ನೀಡುವ ವಿಚಾರವಾಗಿ ಅಂತಿಮ ತೀರ್ಮಾನ ನನ್ನದೆ. ಪ್ರಜ್ವಲ್‌ಗೆ ರಾಜಕೀಯದಲ್ಲಿ ಬೆಳೆಯುವ ಆಸೆ ಇದೆ. ಆದರೆ ಹೀಗೆ ಮಾತನಾಡಿದರೆ ಭವಿಷ್ಯದಲ್ಲಿ ಆತನಿಗೆ ತೊಂದರೆಯಾಗುತ್ತೆ. ಪ್ರಜ್ವಲ್‌ಗೆ ತಪ್ಪು ತಿದ್ದಿಕೊಳ್ಳಲು ಅವಕಾಶ ನೀಡುತ್ತೇನೆ. ಪ್ರಜ್ವಲ್‌ಗೆ ಮೊದಲು ಬೇಲೂರಿನಿಂದ ಸ್ಪರ್ಧೆ ಮಾಡುವ ಆಸೆ ಇತ್ತು. ಆಗಲ್ಲ ಎಂದಮೇಲೆ ಹುಣಸೂರಿಗೆ ಹೋಗಿದ್ದಾನೆ ಅಷ್ಟೇ. ಪ್ರಜ್ವಲ್ ಹಿಂದೆ ಇರುವ ಮೂರ್ನಾಲ್ಕು ಜನ ಅವನನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಏನೋ ಕೆಟ್ಟಗಳಿಗೆ. ರಾಜಕೀಯ ಮಕ್ಕಳ ಆಟ ಅಲ್ಲ. ಒಂದು ಕ್ಷೇತ್ರ ಆಯ್ಕೆ ಮಾಡೋದು ಎಷ್ಟು ಕಷ್ಟ ಅಂತ ಗೊತ್ತಿದೆ. ಹೇಳಿದೋರಿಗೆಲ್ಲ, ಕೇಳಿದ್ ಕಡೆ ಟಿಕೆಟ್ ಕೊಡಕ್ಕೆ ಆಗುತ್ತಾ? ಮತ್ತೆ ಲೋಕಸಭಾ ಚುನಾವಣೆಗೆ ನಿಲ್ಲೋಕೆ ನನಗೆ ಶಕ್ತಿ ಇಲ್ಲ. ಹೀಗಾಗಿ ಅಲ್ಲಿ ಯಾರು ನಿಲ್ತಾರೆ ಅನ್ನೋ ಪ್ರಶ್ನೆ ಕಾಡುತ್ತಿದೆ" ಎಂದು ಹೇಳುವ ಮೂಲಕ ಪರೋಕ್ಷವಾಗಿ ಪ್ರಜ್ವಲ್‌ಗೆ ಹಾಸನ ಲೋಕಸಭಾ ಕ್ಷೇತ್ರದಲ್ಲಿ ಟಿಕೆಟ್ ನೀಡುವ ಇಂಗಿತ ವ್ಯಕ್ತಪಡಿಸಿದ್ದಾರೆ.


ಹುಣಸೂರಿನಲ್ಲಿ ತ್ಯಾಗ, ಮೈಸೂರಿನಲ್ಲಿ ಬಂಡಾಯ

ಪ್ರಜ್ವಲ್ ಬಾಂಬಿನ ಗದ್ದಲದಲ್ಲಿ ಹುಣಸೂರು ಟಿಕೆಟ್‌ಗೆ ಜೆಡಿಎಸ್‌ನಲ್ಲಿ ಕುದುರಿದ ವ್ಯವಹಾರವೇ ಹೆಚ್ಚಾಗಿ ಪ್ರಚಾರಕ್ಕೆ ಬರಲಿಲ್ಲ. ಕಾಂಗ್ರೆಸ್‌ನಿಂದ ಹಾರಿ ಬಂದ ವಿಶ್ವನಾಥ್‌ಗೆ ಟಿಕೆಟ್ ನಿಕ್ಕಿ ಅಂತ ಆಗಿತ್ತಾದರೂ ತಮ್ಮ ಮಗ ಹರೀಶ್‌ನನ್ನು ಕಪಿ ಮಾಡಲು ತಯಾರಾಗಿದ್ದ ಜಿಟಿಡಿ ತೊಡರುಗಾಲು ಹಾಕಲು ಮುಂದಾಗಿದ್ದರು. ಆದರೆ ದೊಡ್ಡಗೌಡರೇ ಕೂರಿಸಿಕೊಂಡು ಬುದ್ಧಿ ಹೇಳಿದ ಮೇಲೆ ಜಿಟಿಡಿ ತ್ಯಾಗಕ್ಕೆ ಸಜ್ಜಾಗಿದ್ದಾರಂತೆ. ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಪ್ರೊ.ಕೆ.ಎಸ್.ರಂಗಪ್ಪ ಮತ್ತು ಪ್ರೊ.ಎಚ್.ಗೋವಿಂದಯ್ಯ ಅವರ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ಜಿ.ಟಿ.ದೇವೇಗೌಡ 'ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷಕ್ಕಾಗಿ ತಮ್ಮ ಕುಟುಂಬ ತ್ಯಾಗಕ್ಕೆ ಸಿದ್ಧವಾಗಿದ್ದು ಹುಣಸೂರಿನಲ್ಲಿ ನಾನು, ನನ್ನ ಪತ್ನಿ ಲಲಿತ, ನನ್ನ ಪುತ್ರ ಜಿ.ಡಿ.ಹರೀಶ್ ಗೌಡ ಮಾಡಿರುವ ಪಕ್ಷ ಸಂಘಟನೆಯನ್ನು ವಿಶ್ವನಾಥ್ ಅವರ ಗೆಲುವಿಗೆ ಸಮರ್ಪಿಸುವುದಾಗಿ' ಹೇಳಿದರು. ಇದರಿಂದ ಖುಷಿಗೊಂಡ ಎಚ್.ಡಿ.ಕುಮಾರಸ್ವಾಮಿ ಜಿ.ಟಿ.ದೇವೇಗೌಡರ ತ್ಯಾಗಕ್ಕೆ ಅಭಿನಂದನೆ ಸಲ್ಲಿಸಿ ಅವರ ಪತ್ನಿ ಲಲಿತಕ್ಕ ಅವರಿಗೆ ಉತ್ತಮವಾದ ಅಧಿಕಾರ ಸ್ಥಾನ ಕಲ್ಪಿಸುವ ಜತೆಗೆ ನನ್ನ ಸಹೋದರ ಜಿ.ಡಿ.ಹರೀಶ್‌ಗೌಡ ಅವರನ್ನು ರಾಜಕೀಯವಾಗಿ ಬೆಳೆಸುತ್ತೇನೆ ಎಂಬ ಶಪಥಗೈದರು!


ಇನ್ನು ನೆಂಟಸ್ತಿಕೆಯಲ್ಲಿ ದೇವೇಗೌಡರ ಬೀಗ ಆಗಬೇಕಾದ ಮೈಸೂರು ವಿವಿ ನಿವೃತ್ತ ಕುಲಪತಿ ಕೆ.ಎಸ್. ರಂಗಪ್ಪ ಜೆಡಿಎಸ್ ಸೇರಿಕೊಂಡಿರೋದು ಸಣ್ಣದಾಗಿ ಬಂಡಾಯವನ್ನು ಹುಟ್ಟುಹಾಕಿದೆ. ಈ ಕಾರ್ಯಕ್ರಮಕ್ಕೆ ಜೆಡಿಎಸ್ ನಗರ ಅಧ್ಯಕ್ಷ ಕೆ.ಹರೀಶ್‌ಗೌಡ ಗೈರು ಹಾಜರಾದದ್ದು ಅದನ್ನು ಸಾಬೀತುಮಾಡಿತ್ತು. ಈ ಹರೀಶ್ ಗೌಡ ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್‌ನ ಪ್ರಬಲ ಆಕಾಂಕ್ಷಿ. ಆದರೆ ಈಗ ಪಕ್ಷ ಸೇರಿಕೊಂಡಿರುವ ರಂಗಪ್ಪ ಗೌಡರ ಜೊತೆಗಿನ ತನ್ನ ನೆಂಟಸ್ತಿಕೆ ಬಳಸಿಕೊಂಡು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಇದೇ ಕ್ಷೇತ್ರದಿಂದ ಸ್ಪರ್ಧೆಗೆ ಇಳಿಯುತ್ತಾರೆ ಎಂಬ ಸುದ್ದಿ ಕಿವಿಗೆ ಅಪ್ಪಳಿಸುತ್ತಿದ್ದಂತೆಯೇ ಬಂಡಾಯವೆದ್ದಿದ್ದ. ಕೆಲವೇ ತಿಂಗಳ ಹಿಂದೆ ಮೈಸೂರಿನ ಬಂಬೂಬಜಾರ್‌ನಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಸಮಾರಂಭದಲ್ಲಿ ಹರೀಶ್‌ಗೌಡ ತನ್ನ ಬೆಂಬಲಿಗರನ್ನು ಛೂಬಿಟ್ಟು ಆತನನ್ನೇ ಚಾಮರಾಜ ಕ್ಷೇತ್ರದ ಅಭ್ಯರ್ಥಿ ಎಂದು ಘೋಷಿಸುವಂತೆ ಒತ್ತಡ ಹೇರಿಸಿದ್ದ. ಈ ಸಂದರ್ಭದಲ್ಲಿ ಎಚ್.ಡಿ.ಕುಮಾರಸ್ವಾಮಿ ಕೋಪಗೊಂಡು ಹರೀಶನ ಬೆಂಬಲಿಗರ ಬೆವರಿಳಿಸಿದ್ದರು. ಅದೇ ಕಾರಣಕ್ಕೆ ಹರೀಶ್ ಗೌಡ ರಂಗಪ್ಪನ ಪಕ್ಷ ಸೇರ್ಪಡೆ ಸಮಾರಂಭದಿಂದ ದೂರ ಉಳಿದಿದ್ದ. ಮುಂದೆ ಈತ ಅದೇನೇನು ಬಂಡಾಯದ ಬಾವುಟ ಹಾರಿಸುತ್ತಾನೋ ಕಾದು ನೋಡಬೇಕಿದೆ.



ಸಾ.ರಾ. ಮಹೇಶ್



ಹರೀಶ್ ಗೌಡ



ಜಿಟಿಡಿ ಮಗ ಹರೀಶ್

● ತರ



ಚಾಂಡಾಲ ಭಟ್ಟನಿಗೆ ಮತ್ತೆಷ್ಟು ನರಬಲಿ ಬೇಕು?!


ಕಲ್ಲಡ್ಕ ಪ್ರಭಾಕರ ಭಟ್ಟ

ಬಂಟ್ವಾಳ ಭಯದಿಂದ ತತ್ತರಿಸುತ್ತಿದೆ!

ಬರೋಬ್ಬರಿ ಒಂದೂವರೆ ತಿಂಗಳಿಂದ ಬಂಟ್ವಾಳದ ಕಲ್ಲಡ್ಕ ಮತ್ತದರ ಆಚೀಚೆಯ ಊರು-ಕೇರಿಗಳಲ್ಲಿ ಒಂದಲ್ಲ ಒಂದು ಕೋಮು ಕ್ರೌರ್ಯ ಸಂಭವಿಸುತ್ತಲೇ ಇದೆ. ಸಾಬಿಗಳು ಹೆಚ್ಚಿರುವ ಕೈಕಂಬದಿಂದ ಕಲ್ಲಡ್ಕ ತನಕದ ಹದಿನೈದು ಕಿಲೋಮೀಟರ್ ಪ್ರದೇಶವಂತೂ ನಿತ್ಯನರಕದಂತಾಗಿದೆ. ಮತಾಂಧ ಮಸಲತ್ತಿಗೆ ಎಲ್ಲಿ ಯಾವಾಗ ಯಾರ ಹೆಣ ಬೀಳುತ್ತದೋ ಹೇಳಲಾಗದಂಥ ಕಂಗಾಲು ಪರಿಸ್ಥಿತಿ ನೆಲೆಯಾಗಿದೆ. ಮೇಲಿಂದ ಮೇಲೆ ತಲವಾರು-ಚೂರಿ ವರಸೆ; ಆಗಾಗ ಕಲ್ಲು ತೂರಾಟ. ಮನೆಯೊಳಗೆ ಬಚ್ಚಿಟ್ಟುಕೊಂಡವರು ಕಿಟಕಿಯಿಂದ ಹೊರಗೆ ಪಿಳಿಪಿಳಿ ಕಣ್ಣು ಬಿಡುವ ಗಾಬರಿಯ ದೃಶ್ಯ! ಬಿಕೋ ಎನ್ನುವ ರಸ್ತೆಗಳು. ಮುಚ್ಚಿರುವ ಅಂಗಡಿ ಮುಂಗಟ್ಟು. ಸಂಜೆಯಾಗುತ್ತಲೇ ತಂತಾನೆ ಕರ್ಫ್ಯೂಗೆ ಒಳಗಾಗುವ ಪಟ್ಟಣ-ಹಳ್ಳಿಗಳು. ಖಾಲಿ ರಸ್ತೆಗಳಲ್ಲಿ ಪೊಲೀಸರ ಬೂಟು-ಲಾಠಿಯ ಸದ್ದು. ಬದುಕಿಗೆ ಯಾವ ಭದ್ರತೆಯೂ ಇಲ್ಲ.

ಹದಿನೈದೇ ದಿನದ ಅಂತರದಲ್ಲಿ ಒಬ್ಬ ಎಸ್‌ಡಿಪಿಐ ಸಾಬಿ, ಮತ್ತೊಬ್ಬ ಆರ್‌ಎಸ್‌ಎಸ್‌ನ ಹಿಂದೂ ಹುಡುಗ ತಲವಾರು-ಚೂರಿಗೆ ಆಹುತಿಯಾಗಿದ್ದಾರೆ. ಹರಾಮಿ ಹಿಂದೂತ್ವ ಅಜೆಂಡಾದ ಆರ್‌ಎಸ್‌ಎಸ್, ಭಜರಂಗದಳ, ಬಿಜೆಪಿ ಹಾಗು ಮುಸ್ಲಿಮರ ಪಿಎಫ್‌ಐ, ಎಸ್‌ಡಿಪಿಐ ನೇಪಥ್ಯದಲ್ಲಿ ನಿಂತು ನೆತ್ತರೋಕುಳಿ ಆಡಿವೆ. ಸಂಘಪರಿವಾರಕ್ಕೆ ಕಲ್ಲಡ್ಕ ಪ್ರಭಾಕರ ಭಟ್ಟನೆಂಬ ಕುಖ್ಯಾತ ಕೋಮು ಕಿತಾಪತಿಗಾರನೇ ಯಜಮಾನ. ಎಸ್‌ಡಿಪಿಐ, ಪಿಎಫ್‌ಐಗೆ ಇಂಥವೇ ಕಲ್ಲಡ್ಕ ಭಟ್ಟನ ಲೆವೆಲ್ ನಾಯಕಾಗ್ರೇಸನೆಂದು ಹೇಳಲಾಗದು. ಕಲ್ಲಡ್ಕ ಭಟ್ಟನ ಹಿಂಸಾತ್ಮಕ ಹಿಂದೂತ್ವದ ದಾಳಿಯಿಂದ ತಮ್ಮವರ ಸಂರಕ್ಷಿಸಲೆಂದು ಹುಟ್ಟಿಕೊಂಡ ಸಾಬರ ಸಂಘಟನೆಗಳವು. "ಬ್ಯಾರಿಗಳಿಗೆ ಹೊಡೆಯಿರಿ, ಬಡಿಯಿರಿ, ಕಡಿಯಿರಿ, ಓಡಿಸಿರಿ" ಬ್ರ್ಯಾಂಡಿನ ಕಲ್ಲಡ್ಕ ಭಟ್ಟನ ಭಾಷಣ ಪಾಷಾಣದಿಂದ ಕೆರಳಿದವರೇ ಈ ಸಂಘಟನೆಯಲ್ಲಿ ಹೆಚ್ಚಿದ್ದಾರೆ. ತಮ್ಮವರನ್ನು ಕಲ್ಲಡ್ಕ ಭಟ್ಟನ ಕಮ್ಯುನಲ್ ಗೂಂಡಾಗಳಿಂದ ಬಚಾಯಿಸಲೆಂದು ಹುಟ್ಟಿಕೊಂಡ ಸಾಬರ ಮಕ್ಕಳ ಪಡೆಗಳೀಗ ಬಡಿದಾಡುವ ಅನಿವಾರ್ಯತೆಗೆ ಬಿದ್ದಿವೆ.

ಕಲ್ಲಡ್ಕದ ಕೋಮು ಸಂಘರ್ಷಕ್ಕೆ ನಾಲ್ಕೂವರೆ ದಶಕದ ಕರಾಳ ಇತಿಹಾಸವಿದೆ. 1971ರಲ್ಲಿ ಜನಾನುರಾಗಿ ಮುಸ್ಲಿಮ್ ಮುಖಂಡನಾಗಿದ್ದ ಇಸ್ಮಾಯಿಲ್ ಎಂಬಾತನನ್ನು ರಾತ್ರಿ ಪೊಲೀಸ್ ವೇಷಧಾರಿಗಳು ಜೀಪಲ್ಲಿ ಎತ್ತಾಕಿಕೊಂಡು ಹೋಗಿದ್ದರು. ಆ ನಂತರ ಆತ ಹೆಣವಾಗಿ ಸಿಕ್ಕಿದ್ದ. ಚೆಡ್ಡಿ ಚಾಂಡಾಲರೇ ಇಸ್ಮಾಯಿಲ್‌ನನ್ನು ಕೊಂದು ಹಾಕಿದ್ದರೆಂಬ ಪ್ರತೀತಿ ಈಗಲೂ ಇದೆ; ಆಗಲೇ ಕಲ್ಲಡ್ಕ ಪ್ರಭಾಕರ ಭಟ್ಟ ಸಂಘ ಪರಿವಾರದ ಸರದಾರನಾಗಿ ಆವತರಿಸಿದ್ದು. ಇಸ್ಮಾಯಿಲ್ ಹತ್ಯೆಯ ಅನುಮಾನ ಭಟ್ಟನ ಬೆನ್ನ ಹಿಂದೇ ಇದೆ. 1992ರಲ್ಲಿ ಬಾಬ್ರಿ ಮಸೀದಿ ಸಂಘಿ ಸಂತಾನ ಧ್ವಂಸ ಮಾಡಿದಾಗಲೂ ಕಲ್ಲಡ್ಕದಲ್ಲಿ ಕೋಮು ದಳ್ಳುರಿ ಭುಗಿಲೆದ್ದಿತ್ತು; ಸುರತ್ಕಲ್‌ನಲ್ಲಿ 1998ರಲ್ಲಿ ಕೋಮು ಗಲಭೆ ಎದ್ದಾಗ ಅದರ ಅಡ್ಡ ಪರಿಣಾಮ ದೊಡ್ಡ ಪ್ರಮಾಣದಲ್ಲಿ ಕಲ್ಲಡ್ಕ ಕಂಡಿತ್ತು, ಹಿಂಸಾಕಾಂಡವೇ ನಡೆದುಹೋಗಿತ್ತು.

ಈಗ ಕಲ್ಲಡ್ಕ-ಬಂಟ್ವಾಳದಲ್ಲಿ ನಡೆಯುತ್ತಿರುವ ಮತಾಂಧ


ಹರಿಶೇಖರನ್ ಐಜಿಪಿ


ಅಶ್ರಫ್ ಕಲಾಯಿ


ಶರತ್ ಮಡಿವಾಳ

ಅನಾಹುತ, ಆಹುತಿ, ರಕ್ತಪಾತ, ದೊಂಬಿ, ಕಾದಾಟವಿದೆಯಲ್ಲ ಅದು ಮುಂಬರುವ ಅಸೆಂಬ್ಲಿ ಚುನಾವಣೆಗಾಗಿ ಸಂಘಿ ಸೈತಾನ ಕಲ್ಲಡ್ಕ ಭಟ್ಟ ಮಾಡುತ್ತಿರುವ ರಂಗ ತಾಲೀಮು! ತುಳುನಾಡಿನ ಜನಜೀವನ ಕೋಮು ಆಧಾರದಲ್ಲಿ ಧ್ರುವೀಕರಣ ಆಗಿದ್ದರೂ ಪ್ರತಿ ಚುನಾವಣೆ ಬಂದಾಗ ಕಲ್ಲಡ್ಕ ಭಟ್ಟನಿಗೆ ಸೋಲುವ ದುಃಸ್ವಪ್ನ ಬಿದ್ದು ನಿದ್ದೆಯಲ್ಲೂ ಎದ್ದು ಕುಳಿತು ಬಿಡುತ್ತಾನೆ. ಆಗಾತ ಕೋಮು ಕಲಹಕ್ಕೆ ವ್ಯವಸ್ಥಿತ ಸ್ಕೆಚ್ ಹಾಕುತ್ತಾನೆ. ಈಗಾಗಿರುವುದೂ ಅದೇ. ಕಳೆದ ಚುನಾವಣೆಯಲ್ಲಿ ಭರ್ಜರಿ ಮುಖಭಂಗ ಮಾಡಿಕೊಂಡಿರುವ ಕಲ್ಲಡ್ಕ ಭಟ್ಟ ಆ ಸೇಡು ತೀರಿಸಿಕೊಳ್ಳಲು ಹವಣಿಸಿದ್ದಾನೆ. ಕಳೆದ ಚುನಾವಣೆಯಲ್ಲಿ 8ರಲ್ಲಿ ಭಟ್ಟನ ಬಿಜೆಪಿ ಸುಳ್ಯದಲ್ಲಷ್ಟೇ ಅಸ್ತಿತ್ವ ಉಳಿಸಿಕೊಂಡಿತ್ತು. ಹಾಗಾಗಿ ಈ ಬಾರಿ ಒಂದು ವರ್ಷ ಮೊದಲೇ ಹಿಂದೂತ್ವದ ಮನೆಮುರುಕ ಗುದುಮುರಿಗೆ ಶುರುವಿಟ್ಟುಕೊಂಡಿದ್ದಾನೆ.



ಅಮಾಯಕ ಹಿಂದೂ ಹುಡುಗರ ಮಂಡೆ ಕೆಡಿ... ಭಂಡ ಭಾಷಣ ಮಾಡಿ ಬಿಲ ಸೇರಿಕೊಳ್ಳುತ್ತಿದ್ದ ಭಟ್ಟ... ಸಲ ಕುಂಡೆಗೆ ಬೆಂಕಿ ಬಿದ್ದಂತೆ ಕುಣಿಯುತ್ತ ಬೀ... ಬರುವ ದೈನೇಸಿ ಸ್ಥಿತಿ ತಲುಪಿದ್ದಾನೆ. ಕೂಗು ಮ... ಶೋಭಾ ಕರಂದ್ಲಾಜೆ, ಸುನಿಲ್‌ಕುಮಾರ್, ನಳಿನ್‌ಕುಮ... ಕಟೀಲುನಂಥ ಮೂರನೇ ದರ್ಜೆ ಚೆಡ್ಡಿಗಳ ಜತೆ ನಿ... ಪ್ರತಿಭಟನಾ ಭಾಷಣ-ಮೆರವಣಿಗೆ ಮಾಡಬೇಕಾಗಿ ಬಂದಿ... ಭಟ್ಟನ ಎಲೆಕ್ಷನ್ ರಿಹರ್ಸಲ್‌ಗೆ ಮುಹೂರ್ತ ಕೂಡಿಬಂ... ಕಳೆದ ಮೇ 26ರಂದು. ಅಂದು ಒಂದಿಷ್ಟು ಹಿಂದ... ಮುಸ್ಲಿಮ್ ಹುಡುಗರ ನಡುವೆ ಜಗಳ, ಗುರಾಯಿಸು... ಮತಾಂಧ ಮಾತುಗಾರಿಕೆ ನಡೆದಿತ್ತು. ಆ ನಂತರ ಒ... ಹಿಂದೊಂದರಂತೆ ಕಲ್ಲು ತೂರಾಟ, ಚೂರಿ ಇ... ಪೊಲೀಸರ ಹಿಂದೂತ್ವದ ಬಂಧನ ಪತ್ರಗಳು ನಡ... ತೊಡಗಿತು. ಭಟ್ಟನ ಅಶರೀರವಾಣಿ ಈ ಕೋಮು ಬೆ... ಹವಿಸ್ಸಾಗುತ್ತಲೇ ಇತ್ತು. ಹಾಗಂತ ಭಟ್ಟ ಎಲ್ಲೂ ಖ... ಮುಂದೆ ನಿಂತು 'ಹಿಂದೂತ್ವದ ಹೋರಾಟ' ಮಾಡ... ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಹಿಂದೂತ್ವ... ಅಗಲ ಅಂದಾಜಿಸುತ್ತಲೇ ಇದ್ದ.

ಸಿದ್ದು ಸರ್ಕಾರದ ಕಾಡು ಮಂತ್ರಿ ರಮಾನಾಥ... ದಕ್ಷಿಣ ಕನ್ನಡದ ಉಸ್ತುವಾರಿ ಮಂತ್ರಿಯಷ್ಟೇ "... ಬಂಟ್ವಾಳದ ಶಾಸಕ ಸಾಹೇಬನೂ ಹೌದು. ಮಜಾ ಎ... ಹಿಂದೂತ್ವ ದೀಕ್ಷೆ ತಮ್ಮ ಯೂನಿಫಾರ್ಮ್‌ಗೆ ಕೊಟ್ಟಿ... ಸ್ಥಳೀಯ ಕರ್ಮಗೇಡಿ ಪೊಲೀಸರಿಗೆ ಕಲ್ಲಡ್ಕ ಭಟ... ಗೃಹಮಂತ್ರಿ-ಡಿಜಿಪಿ!! ಹೀಗಾಗಿ ಅನ್ಯಾಯ ದಬ್ಬಾ... ತುತ್ತಾದ ಸಾಬರಿಗೆ ನ್ಯಾಯ ಸಿಗಲೇ ಇಲ್ಲ. ಕಲ್ಲು ತೂರಾ... ನೆಪದಲ್ಲಿ ಪೊಲೀಸರು ಹೊತ್ತಲ್ಲದ ಹೊತ್ತಲ್ಲೆಲ್ಲ ಸಾ... ಮನೆ-ಮನೆಗೆ ನುಗ್ಗಿ ಮುದುಕರು-ಮಹಿಳೆಯರ... ದೂಕಾಡಿ, ಮತಾಂಧ ಬೈಗಳು ಸುರಿಸಿ ತರು... ಎತ್ತಾಕಿಕೊಂಡು ಬಂದು ಕೇಸು ಜಡಿಯತೊಡಗಿದ... ಪೊಲೀಸರ ಈ ಅನಾಹುತಕಾರಿ ದಾಳಿಗೆ ಆಘಾತಗೊ... ಹೆಂಗಸರು-ಮುದುಕರು ಆಸ್ಪತ್ರೆ ಸೇರಬೇಕಾಗಿ ಬ... ನಿರಪರಾಧಿ ಸಾಬರ ಹುಡುಗರು ಜೈಲು ಪಾಲಾದರ...

ಆಗ ಎಸ್‌ಡಿಪಿಐ, ಪಿಎಫ್‌ಐ ಮಂತ್ರಿ ರಮಾ... ರೈಗೆ ತಿರುಗಿ ನಿಂತರು. "ನಮಗೆ ರಕ್ಷಣೆ ಕೊಡಲಾ... ನೀನೆಂಥ ಮಂತ್ರಿ.... ಕಲ್ಲಡ್ಕ ಭಟ್ಟನಿಗೆ ಹೆದರುವ ನಿ... ನಮಗೆ ಉಳಿಗಾಲವಿಲ್ಲ..." ಎಂದು ಮಂಗಳಾರತಿ ಎತ್ತಿ... ಕಳೆದ ಚುನಾವಣೆ ಹೊತ್ತಲ್ಲಿ ತಾನೀಗ ಸ್ಪರ್ಧಿಸುತ್ತಿರು... ಕಲ್ಲಡ್ಕ ಭಟ್ಟನ ವಿರುದ್ಧ ಗೆದ್ದರೆ ಆತನ ಜೈಲಿಗಟ್ಟುವೆನೆ... ರೈ ರಾಯರು ಹೇಳಿದ್ದನ್ನೂ ನೆನಪಿಸಿದರು. ಆಗ ಪೀಕಲಾ... ಬಿದ್ದ ಮಂತ್ರಿ ರೈ ಅಂದಿನ ಎಸ್‌ಪಿ ಭೂಷಣ ಬೋ... ಬಂಟ್ವಾಳ ಐಬಿಗೆ ಕರೆಸಿ ಸಂಘಿ ಸೈತಾನ ಮಟ್ಟ ಹಾ... ಹೇಳಿದ್ದಾರೆ. ಕಲ್ಲಡ್ಕ ಭಟ್ಟನ ಬಂಧಿಸುವಂತೆ ಉಪದೇ... ಮಾಡಿದ್ದಾರೆ. ಇದನ್ನು ಮಂತ್ರಿ ರೈ ಕಂಡರಾಗದ ... ಹಿಂಬಾಲಕರೇ ವೀಡಿಯೋ ಮಾಡಿ ಸಾಮಾಜಿಕ ಜಾಲ... ದಲ್ಲಿ ಹರಿಬಿಟ್ಟಿದ್ದಾರೆ.

ಆ ವಿಡಿಯೋದಲ್ಲಿ ಮಂತ್ರಿ ರೈ ತನ್ನ ಜನ್ಮ-ಜಾ... ಜಾಲಾಡಿದ್ದು ಕೇಳಿ ಒಳಗೊಳಗೇ ಕಲ್ಲಡ್ಕ ಭಟ್ಟ ಬೆವೆತಿದ... ತನ್ನನ್ನು ರೈ ಅರೆಸ್ಟ್ ಮಾಡಿಸುತ್ತಾನೆಂದು ಕನಲಿಹೋಗಿದ... ಆರಂಭದಲ್ಲಿ ಭಟ್ಟ ಹೆದರಿ ಕಂಗಾಲಾಗಿ ಹೋಗಿದ್ದ. "ರೈ... ದೊಡ್ಡ ಮನೆತನದವರು.... ಹಾಗೆಲ್ಲ ನನ್ನ ಬಗ್ಗೆ ಏಕವಚ...


ಸುಧೀರ್‌ಕುಮಾರ್

ಶೋಭಾ ಸಂಚು!!


ಶೋಭಾ ಕರಂದ್ಲಾಜೆ

ಕೂಗುಮಾರಿ ಬ್ರ್ಯಾಂಡ್‌ನ ಸಂಸದೆ ಶೋಭಾ ಕರಂದ್ಲಾಜೆ ತಾನು ಬಿಜೆಪಿಯ ರಾಜ್ಯಮಟ್ಟದ ನಾಯಕಿ ಎಂಬ ಭ್ರಮೆಯಲ್ಲಿ ಬೊಬ್ಬಿಡುತ್ತಿರುವುದರ ಗುಟ್ಟು ಗೊತ್ತಾ? ಬಿಜೆಪಿಯಲ್ಲಿ ಯಡ್ಡಿ ಒಬ್ಬರ ಬಿಟ್ಟು ಬೇರೆಲ್ಲರ ತಾತ್ಸಾರ-ತಿರಸ್ಕಾರಕ್ಕೆ ತುತ್ತಾಗಿರುವ ಸೋಭಕ್ಕನ ಅಭದ್ರತೆ ಅರಚಾಡುವಂತೆ ಮಾಡುತ್ತಿದೆ. ಆಕೆಯ ಕೂಗಾಟದಲ್ಲಿ ಸಾಕ್ಷಾತ್ ಯಡ್ಡಿಯೇ ಕಳೆದುಹೋಗಿದ್ದಾರೆ, ಪಾಪ.

ಸೋಭನ ಮೂಲ ದಕ್ಷಿಣಕನ್ನಡ ಸುಳ್ಯ. ಅರೆಭಾಷೆ ಗೌಡತಿಯಾದ ಈಕೆಗೆ ಮೀಸಲು ಕ್ಷೇತ್ರವಾದ ಸುಳ್ಯದಲ್ಲಿ ಸ್ಪರ್ಧಿಸುವ ಯೋಗವಿಲ್ಲ. ಆರ್‌ಎಸ್‌ಎಸ್ ರಿಂಗ್ ಮಾಸ್ಟರ್ ಕಲ್ಲಡ್ಕ ಭಟ್ಟನೂ ಈಕೆಯನ್ನು ನಂಬುವುದಿಲ್ಲ. ಹೀಗಾಗಿ ದಕ್ಷಿಣ ಕನ್ನಡದ ಬಿಜೆಪಿಯ ಎಂಪಿಗಿರಿ ಸೀಟು ಆಕೆಗೆ ಮಿಸ್ ಆಯ್ತು. ದಕ್ಷಿಣ ಕನ್ನಡದಲ್ಲಿ ನೆಲೆ-ಬೆಲೆಯಿಲ್ಲದ ಶೋಭಾಗೆ ಪುತ್ತೂರಲ್ಲೂ ನಿಲ್ಲದಂತೆ ಸದಾಗೌಡ ಅಡ್ಡಗಾಲು ಹಾಕಿ ಕುಂತಿದ್ದಾರೆ. ಯಡ್ಡಿ ಕೃಪೆಯಿಂದ ಎಮ್ಮೆಲ್ಸಿಯಾದ ಈಕೆ ಬೆಂಗಳೂರಿನ ಯಶವಂತಪುರದಲ್ಲಿ ಒಮ್ಮೆ ಆಚಾನಕ್ ಗೆದ್ದೂಬಿಟ್ಟಿದ್ದರು. ಆ ನಂತರ ಈ ವಲಸಿಗಳ ದೂರ ಮಾಡಿಬಿಟ್ಟರು ಯಶವಂತಪುರದವರು.

ಮುದಿಕಾಲದ ಸಹಜ ದೌರ್ಬಲ್ಯ, ಮರೆವು, ಸಿಡಿಮಿಡಿಯಲ್ಲಿ ಒಂಥರಾ ವಿಕ್ಷಿಪ್ತವಾಗಿ ಹಾರಾಡುವ ಯಡ್ಡಿಗೆ ಊರುಗೋಲಾಗಿದ್ದಾರೆ ಶೋಭಾ. ಆಕೆಗೆ ಉಡುಪಿ-ಚಿಕ್ಕಮಗಳೂರಿನ ಎಂಪಿಗಿರಿ ಬೇಡದ ಭಾಗ್ಯದಂತಾಗಿದೆ. ಮತ್ತೆ ಎಮ್ಮೆಲ್ಲೆಯಾಗಿ ಪ್ರೀತಿಯ ಯಡ್ಡಿ ಸಂಪುಟದಲ್ಲಿ ಪವರ್‌ಫುಲ್ ಮಂತ್ರಿಣಿಯಾಗುವ ಕನಸು ಆಕೆಯ ನಿದ್ದೆಗೆಡಿಸುತ್ತಿದೆ. ಆದರೆ ಕ್ಷೇತ್ರ ಯಾವುದು?

ತೀರ್ಥಹಳ್ಳಿಯ ನಂದಿತಾ ಆತ್ಮಹತ್ಯೆ ಮಾಡಿಕೊಂಡಾಗ ಕೋಮು ದಂಗೆ ಎಬ್ಬಿಸಿದ ಎಲ್ಲ ಕೀರ್ತಿ ಸೋಭಕ್ಕನಿಗೇ ಸಲ್ಲಬೇಕು. ಅಲ್ಲಿರುವ ಬಹುಸಂಖ್ಯಾತ ಒಕ್ಕಲಿಗರು ತನ್ನನ್ನು ಜಾತಿ ಕಾರಣಕ್ಕೆ ಮೆಚ್ಚಿ ಬರಮಾಡಿಕೊಳ್ಳುತ್ತಾರೆಂಬ ಲೆಕ್ಕಾಚಾರ ಆಕೆ ಹಾಕಿದ್ದರು. ತೀರ್ಥಹಳ್ಳಿಯ ಶಾಸಕಿ ಆಗುವ ತೆವಲಿಂದ ಆಕೆ ನಂದಿತಾ ಕೇಸ್ ಕೈಗೆತ್ತಿಕೊಂಡು ತಿಪ್ಪರಲಾಗ ಹಾಕಿದ್ದರು. ಸ್ಥಳೀಯ ಶಾಸಕನೂ ಸಜ್ಜನ ರಾಜಕಾರಣಿಯೂ ಆದ ಕಿಮ್ಮನೆ ರತ್ನಾಕರ್ ಕಿತಾಪತಿಯಿಂದಾಗಿ ನಂದಿತಾ ಕೇಸ್ ಮುಚ್ಚಿಹೋಗುತ್ತಿದೆ. ಆಕೆಯ ಸಾವಿಗೆ ಕಾರಣರಾದ ಸಾಬರಿಗೆ ಕಿಮ್ಮನೆ ಕುಮ್ಮಕ್ಕು ಕೊಡುತ್ತಾರೆಂದ ಸುಳ್ಳು ಹೇಳಿ ಓಟ್‌ಬ್ಯಾಂಕ್ ರಾಜಕಾರಣ ಮಾಡಲು ಹವಣಿಸಿದ್ದರು. ಯಾವಾಗ ಕಿಮ್ಮನೆ ತೀರ್ಥಹಳ್ಳಿಯ ಮಾರಿಗುಡಿಯಲ್ಲಿ ತನ್ನ ಮೇಲೆ ಸುಳ್ಳು ಆಪಾದನೆ ಮಾಡೋರ ನೋಡಿಕೊ ತಾಯೆ ಎಂದು ಹುಯಿಲು ಹಾಕಿದರೋ ಆಗ ಶೋಭಾ ಬಾಲ ಮುದುರಿಕೊಂಡು ಬೆಂಗಳೂರು ಸೇರಿಕೊಂಡರು.

ಈಗಾಕೆಯ ಕಣ್ಣು ಬಂಟ್ವಾಳದ ಮೇಲೆ ಬಿದ್ದಿದೆ. ಹೀಗಾಗಿ ಮಂತ್ರಿ ರೈ, ಯು.ಟಿ. ಖಾದರ್ ಮೇಲೆ ಮತಾಂಧ ಆರೋಪ ಹಾಕುತ್ತ ಕಲ್ಲಡ್ಕ ಭಟ್ಟನ ತಲೆ ಮೇಲೆ ಹೊತ್ತುಕೊಂಡು ಮೆರವಣಿಗೆ ಹೊರಟಿದ್ದಾರೆ. ಕಲ್ಲಡ್ಕ ಭಟ್ಟ ಈಗಾಗಲೇ ಕಳೆದ ಬಾರಿ ಸೋತ ರಾಜೇಶ್ ನಾಯಕ್ ಎಂಬ ಪರಿವಾರ ಬಂಟನ ಅಖಾಡಕ್ಕೆ ಇಳಿಸಿಯಾಗಿದೆ. ಡಾನ್ ಮನ ಗೆಲ್ಲಲು ನೀತಿ, ನಾಚಿಕೆ, ಮನುಷ್ಯತ್ವ ಬಿಟ್ಟು ಸೋಭಕ್ಕ ಅಬ್ಬರಿಸಿ ಬೊಬ್ಬಿರಿಯುತ್ತಿದ್ದಾರೆ. ಈಕೆ ಕಲ್ಲಡ್ಕ ಭಟ್ಟರ ಹಾಡಿ ಹೊಗಳುವ ಪರಿಗೆ ಬಂಟ್ವಾಳದ ಜನರಿಗೆ ನಾನಾ ನಮೂನೆಯ ಸಂಶಯ ಶುರುವಾಗಿದೆ.


ಬಂಟ್ವಾಳದಲ್ಲಿ ಹಿಂದೂತ್ವದ ಬಲಿ ರಾಜಕಾರಣ ದಾಳ ಹಾಕುತ್ತಿರುವ ಸೋಭಕ್ಕನ ಆಸೆ ಈಡೇರಿಸುವಷ್ಟು ಮೂರ್ಖ ಭಟ್ಟ ಅಲ್ಲ ಅಂತಾರೆ ಸದಾಗೌಡರ ಪಟಾಲಮ್ಮು! ಸೋಬಕ್ಕನದು ವ್ಯರ್ಥ ಕಸರತ್ತು, ಪಾಪ!


...ಮಾನಾಥ ರೈ

...ಡಬಾರದಿತ್ತು... ಅವ್ರು ಕರೆದು ಮಾತಾಡಬಹುದಿತ್ತು... ...ಥವನೆಂದು ಮನದಟ್ಟು ಮಾಡುತ್ತಿದ್ದೆ..." ಎಂದು ...ಗತಿಯ ಧಾಟಿಯಲ್ಲಿ ಹೇಳಿಕೆ ಬಿತ್ತರಿಸಿದ್ದ ಸರ್ವಶಕ್ತ ಡಾನ್ ಕಲ್ಲಡ್ಕ ಭಟ್ಟ. ಇದರ ಬೆನ್ನಿಗೇ ಯಡ್ಡಿ, ...ಕ್ಷ, ನಳಿನ್, ಸದಾಗೌಡ, ಪ್ರಹ್ಲಾದ್ ದೋಷಿಯಂಥ ...ಬಿಡಾರದ ಭೂಪರು ತಮ್ಮ ಸಂಘ ಸರದಾರ ಕಲ್ಲಡ್ಕ ...ರ ಬಗ್ಗೆ ಮಂತ್ರಿ ರೈ ಹಗುರಾಗಿ, ಏಕವಚನದಲ್ಲಿ ...ಿ ಬಂಧಿಸುವ ಹವಣಿಕೆಯಲ್ಲಿದ್ದಾರೆಂದು ಗೋಗರೆದಿದ್ದೇ ...ಗರೆದದ್ದು.

...ಬಿಜೆಪಿಯ ಮುಂದಿನ ಸಾಲಿನ ಕುಂಕುಮಧಾರಿ ...ಗಳು ತನ್ನ ಬೆಂಬಲಕ್ಕೆ ನಿಂತಿದ್ದು ಕಂಡು ಕಲ್ಲಡ್ಕನಿಗೆ ...ದ ಜೀವ ಬಂದಂತಾಯ್ತು. ಅದೇ ಹೊತ್ತಿಗೆ ಮಂತ್ರಿ ...ಪೌರುಷವೂ ಅಡಗಿತ್ತು. ಎಸ್‌ಪಿ ಬೋರಸೆಯನ್ನು ...ಯಿಸಲಾಯ್ತೇ ಹೊರತು ಬಂಟ್ವಾಳ-ಕಲ್ಲಡ್ಕದ ...ದಿಗೆ ಕಂಟಕನಾದ ಭಟ್ಟನ ಬಂಧಿಸುವ ಗೋಜಿಗೆ ...ಗಲಿಲ್ಲ ಮಂತ್ರಿ ರೈ!! ಮಂತ್ರಿ ರೈನ ಅಸಹಾಯಕತೆ, ...ರ್ಯ ಭಟ್ಟನ ದಮ್ ಜೋರಾಗಿಸಿತು. ಬಂಟ್ವಾಳ ...ನ ಹಿಂದೂಗಳನ್ನು ಧರ್ಮಾಂಧವಾಗಿ ಕೆರಳಿಸಲು ...ನು ಸಾಧ್ಯವೋ ಅದೆಲ್ಲ ಆತ ಚಡ್ಡಿ ಅಡ್ಡೆಯಲ್ಲಿ ...ೇ ಮಾಡಿಬಿಟ್ಟ; ಕೋಮು ಸಂಘರ್ಷ ಬಿರುಸಾಗುವಂಥ ...ರ್ಣಕ್ಕೆ ಸ್ಕೆಚ್ ಹಾಕಿದ. ಹಿಂದೂಗಳು ತನ್ನ ಬೆನ್ನ ...ೆ ನಿಲ್ಲುವಂತೆ ಷಡ್ಯಂತ್ರ ಹೆಣೆದು ಹಾಕಿದ. ಪತ್ರಿಕಾ ...ಷ್ಠಿ ಕರೆದು ಹಿಂದೂತ್ವದ ಅಮಲೇರಿಸಿದ. ಮಂತ್ರಿ ...ನಾಲಾಯಕ್; ಆತ ಸಾಬರ ಪಕ್ಷಪಾತಿ ಎಂಬಂತೆ ...ಸಿದ.

...ಹೇಗಾದರೂ ಮಾಡಿ ಒಂದು ಸಾಬಿ ಹೆಣ ...ಳಿಸಿದರೆ ಅದು ದೊಡ್ಡ ಗಲಭೆಗೆ ಹೇತುವಾಗಿ ತಾನು ...ಮಾಗಿರಬಹುದೆಂಬ ಲೆಕ್ಕಾಚಾರ ಕಲ್ಲಡ್ಕ ಭಟ್ಟ ...ಕೊಂಡಿದ್ದ. ಉಳ್ಳಾಲದ ಬೋಳಿಯಾರ್ ಎಂಬಲ್ಲಿ ... ಲೀಡರನ ಮನೆಯಲ್ಲಿ ಹತ್ಯೆಯ ಸ್ಕೆಚ್ ಖುದ್ದು ...ನೆ ಕುಂತು ಹಾಕಿದ್ದಾನೆಂಬ ಸಂಶಯ ಈಗ






ಪೊಲೀಸರಿಗಷ್ಟೇ ಅಲ್ಲ ಹಿಂದೂತ್ವದಿಂದ ಮಂಡೆ ತೊಳೆದುಕೊಂಡವರಿಗೂ ಬಂದಿದೆ. ಈ ಅನುಮಾನ ಖಾತ್ರಿ ಪಡಿಸುವಂತಿದೆ ಜೂನ್ 21ರ ಹಾಡುಹಗಲೇ ಬಂಟ್ವಾಳದ ಬೆಂಜನಪದವು ಎಂಬಲ್ಲಿ ಪಾಪದ ರಿಕ್ಷಾಚಾಲಕ ಅಶ್ರಫ್ ಕಲಾಯಿಯನ್ನು ಬರ್ಬರವಾಗಿ ಕೊಚ್ಚಿಕೊಂದ ಆರೋಪಿಗಳಲ್ಲಿ ಹಲವರು ಭಟ್ಟನ ಶಿಷ್ಯರೆಂಬುದು! ಭಟ್ಟ ಮಂಗಳೂರಲ್ಲಿ ಕಲ್ಲಡ್ಕ ಗಲಭೆ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿದಾಗ ಆತನ ಜತೆಯಲ್ಲಿ ಕಳ್ಳ ಕಟ್ಟಿಗೆ ದಂಧೆದಾರನೂ, ಗೂಂಡಾ ಗುರುವೂ ಆದ ಭರತ್ ಕುಮ್ಡೇಲು ಕೂಡ ಇದ್ದ. ಈತನೇ ಅಸಹಾಯಕರ ನೆರವಿಗೆ ಧಾವಿಸುವ ಗುಣ ಸಮಾಜಮುಖಿ ಅಶ್ರಫ್ ಕಲಾಯಿಯ ಕೊಲೆ ರೂವಾರಿ ಎಂಬುದನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಮತ್ಯಾವ ಸಾಕ್ಷ್ಯ ಬೇಕು ಕಲ್ಲಡ್ಕ ಭಟ್ಟ ರಕ್ತ ಪಿಪಾಸು ಸಂಘಿ ತೋಳ ಎಂಬುದಕ್ಕೆ?!


ಭಟ್ಟ ಕಲ್ಲಡ್ಕದಲ್ಲಿ ಕುಂತು ಮಾತಾಡಿದರೆ ಆತ ಕಣ್ಣಿಟ್ಟಲ್ಲೇ ಅದು ಬೆಂಕಿ ಹಾಕುತ್ತದೆ; ಮಂಗಳೂರಲ್ಲಿ ಪತ್ರಿಕಾಗೋಷ್ಠಿ ನಡೆಸಿದರೆ ಆತನಿಗೆ ಬೇಕಾದಲ್ಲೇ ಸಾಬರ ಅಥವಾ ಹಿಂದೂನ ತಲೆ ಉರುಳಿಸುತ್ತದೆ. ತನ್ನ ಹಿಂದೂತ್ವದ ಸಾಮ್ರಾಜ್ಯದ ಸಿಂಹಾಸನ ಭದ್ರವಾಗುವುದಕ್ಕೆ ಭಟ್ಟ ಸಾಬರರಲ್ಲ, ಹಿಂದೂಗಳ ಹೆಣವೂ ಉರುಳಿಸಬಲ್ಲ. ಒಟ್ಟಿನಲ್ಲಿ ಕೋಮು ಕಲಹ ನಿರಂತರವಾಗಿ ನಡೆಯಬೇಕು; ಅದರ ಫಾಯ್ದೆ ಸತತವಾಗಿ ತನಗೆ ದಕ್ಕುತ್ತಲೇ ಇರಬೇಕೆಂಬ ತಂತ್ರ ಆತನದು. ಇಂಥ ಖತರ್‌ನಾಕ್ ಹಿಂದೂತ್ವದಿಂದ ಭಟ್ಟ ಈಗ ಕೋಟಿಗೆ ತೂಗುತ್ತಾನೆ. ಆತನ ಶಾಲೆ, ಸಂಘ ಚಟುವಟಿಕೆಗೆಲ್ಲಾ ಲಕ್ಷ-ಲಕ್ಷ ಹರಿದುಬರುತ್ತಿದೆ. ಒಂದು ಕಾಲದಲ್ಲಿ ಕೆಮ್ಮು-ಥಂಡಿಗೆ ಮದ್ದು ಕೊಡುವ ಡಾಕ್ಟರನಾಗಿದ್ದ ಕಲ್ಲಡ್ಕ ಭಟ್ಟನ ಶ್ರೀರಾಮ ಕಾಂಪ್ಲೆಕ್ಸ್ ಹಲವು ಕೋಟಿ ಬೆಲೆಯದು. ಭಟ್ಟನೂ ಕೋಟಿಗಳ ಲೆಕ್ಕದ ದಂಧೆದಾರನೇ. ಇದೇ ಭಟ್ಟನ ಅಸಲೀ ಹಿಂದೂತ್ವ!!


ಇಂತಿಪ್ಪ ಭಟ್ಟ ಇಟ್ಟ ಗುರಿ ತಪ್ಪಿಲ್ಲ; ಆತನ


▶▶| 10



ಕಲ್ಲಡ್ಕದಲ್ಲಿ ಕರ್ಫ್ಯೂ

ಯಲಬುರ್ಗ: ಜೆಡಿಎಸ್ ಟಿಕೆಟ್ ಯಾರಿಗೆ


ಶ್ರೀಪಾದಪ್ಪ


ಶಿವಶಂಕರ್ ದೇಸಾಯಿ


ಬಸವರಾಜ ರಾಯರೆಡ್ಡಿ



ಹಾಲ


ಯಲಬುರ್ಗಾದ ರಾಜಕಾರಣ ಹೆಚ್ಚೂಕಮ್ಮಿ 2018ರ ಕದನಕ್ಕೆ ತಯಾರಾಗಿ ನಿಂತಿದೆ. ಕಾಂಗ್ರೆಸ್‌ನಿಂದ ಹಾಲಿ ಶಾಸಕ ಕಂ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಮತ್ತು ಬಿಜೆಪಿಯಿಂದ ಮಾಜಿ ಎಂಎಲ್‌ಸಿ ಹಾಲಪ್ಪ ಆಚಾರ್ ಕಣಕ್ಕಿಳಿಯೋದು ನಿಶ್ಚಿಯಾಗಿದೆ. ಮೊನ್ನೆಯಷ್ಟೇ ನಡೆದ ಬಿಜೆಪಿ ಸಮಾರಂಭವಲ್ಲಿ ಸ್ವತಃ ಬಿಜೆಪಿ ರಾಜ್ಯಾಧ್ಯಕ್ಷ ಯಡಿಯೂರಪ್ಪನೇ ಹಾಲಪ್ಪ ಆಚಾರ್‌ಗೆ ಟಿಕೆಟನ್ನು ಬಹಿರಂಗವಾಗಿ ಕನ್‌ಫರ್ಮ್ ಮಾಡಿದ ತರುವಾಯ ಚುನಾವಣೆಯ ತಯಾರಿ ಮತ್ತಷ್ಟು ಬಿರುಸುಗೊಂಡಿದೆ. ಕಾಂಗ್ರೆಸ್‌ನ ರಾಯರೆಡ್ಡಿ ವಿರುದ್ಧ ಸ್ವಪಕ್ಷೀಯರಲ್ಲೇ ಕೊಂಚ ಅಸಮಾಧಾನ ಇರೋದೆ ಬಿಜೆಪಿಯ ಹುಮ್ಮಸ್ಸು ಹೆಚ್ಚಿಸಿದೆ. ಈ ಎರಡೂ ರಾಷ್ಟ್ರೀಯ ಪಕ್ಷಗಳು ಎಲೆಕ್ಷನ್‌ಗೆ ಈ ಪರಿ ತಯಾರಿ ನಡೆಸಿದ್ದರೂ ಕಿಂಗ್‌ಮೇಕರ್‌ನಂತಹ ತೃತೀಯ ಶಕ್ತಿಯಾಗುವ ಕನಸು ಹೊತ್ತ ಜೆಡಿಎಸ್‌ನಲ್ಲಿ ಟಿಕೆಟ್ ಯಾರಿಗೆ ಅನ್ನೋದೆ ಇನ್ನೂ ಸ್ಪಷ್ಟವಾಗಿಲ್ಲ. ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಶ್ರೀಪಾದಪ್ಪ ಅಧಿಕಾರಿ ಇಷ್ಟುದಿನ ಟಿಕೆಟ್ ತನಗೇ ಗ್ಯಾರಂಟಿ ಎಂಬ ತೀರ್ಮಾನದಲ್ಲಿದ್ದರು. ಆದರೆ ತಾಲ್ಲೂಕು ಜೆಡಿಎಸ್ ಉಪಾಧ್ಯಕ್ಷ ಶಿವಶಂಕರ್ ದೇಸಾಯಿ ಟಿಕೆಟ್‌ಗೆ ಸರಿದಾಡಲು ಶುರು ಮಾಡಿರೋದು ಶ್ರೀಪಾದಪ್ಪನ ಹಾದಿಗೆ ಕಂಟಕವಾಗುತ್ತಿದೆ.

ಯಲಬುರ್ಗಾದ ಮಟ್ಟಿಗೆ ಪ್ರಭಾವಿ ರಾಜಕೀಯ ಮನೆತನವಾದ ಚಿಕ್ಕಮ್ಯಾಗೇರಿ ದೇಸಾಯಿ ಕುಟುಂಬದ ಶಿವಶಂಕರ್ ದೇಸಾಯಿ ಈ ಹಿಂದೆ ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷನಾಗಿದ್ದವ. ಅವರ ತಂದೆ ಲಿಂಗರಾಜ ದೇಸಾಯಿ 1978 ಮತ್ತು 1982ರ ಚುನಾವಣೆಗಳಲ್ಲಿ ಗೆದ್ದು ಎರಡು ಬಾರಿ ಶಾಸಕರಾಗಿದ್ದಂತವರು. ಅವರಿಗೂ ಮುನ್ನ ಇಡೀ ಯಲಬುರ್ಗದ ರಾಜಕಾರಣದಲ್ಲಿ ಮೆರೆಯುತ್ತಿದ್ದುದು ಲಿಂಗಾಯತ ರೆಡ್ಡಿ ನಾಯಕರುಗಳು. ಕಾಂಗ್ರೆಸ್‌ನಿಂದ ಆರಿಸಿ ಬರುತ್ತಿದ್ದ ಎಸ್.ಎ.ಪಾಟೀಲ, ಸುಭಾಸ ಪಾಟೀಲ, ಸಂಗನಾಳ ಚನ್ನಬಸನಗೌಡ ಹಾಳಕೇರಿ ಹಾಗೂ ಕರ್ನಾಟಕ ಲೋಕಸೇವಾ ಪಕ್ಷದಿಂದ ಎರಡು ಬಾರಿ ಗೆದ್ದಿದ್ದ ಶಿರೂರು ವೀರಭದ್ರಪ್ಪ ಇವರೆಲ್ಲರೂ ಲಿಂಗಾಯತ ರೆಡ್ಡಿ ಜನಾಂಗಕ್ಕೆ ಸೇರಿದವರಾಗಿದ್ದರು. ಅಂತಹ ಪರಂಪರೆಗೆ ಬ್ರೇಕ್ ಹಾಕಿದ್ದು ಗಾಣಿಗ ಸಮುದಾಯದ ಲಿಂಗರಾಜ್ ದೇಸಾಯಿಯವರು.


ದುರದೃಷ್ಟವಶಾತ್ 1982ರಲ್ಲಿ ಎರಡನೇ ಬಾರಿ ಆಯ್ಕೆಯಾದ ಆರೇ ತಿಂಗಳಲ್ಲಿ ಅವರು ಹೃದಯಾಘಾತದಿಂದ ನಿಧನರಾದಾಗ ಕಾಂಗ್ರೆಸ್ ಪಾರ್ಟಿ ಉಪಚುನಾವಣೆಯಲ್ಲಿ ಅವರ ಕುಟುಂಬಕ್ಕೇ ಟಿಕೆಟ್ ನೀಡಲು ಮುಂದಾಗಿತ್ತು. ಆದರೆ ದೇಸಾಯಿ ಕುಟುಂಬ ನಿರಾಕರಿಸಿ ರಾಜಕಾರಣದಿಂದ ದೂರವೇ ಉಳಿದಿತ್ತು. 1998ರ ಹೊತ್ತಿಗೆ ರಾಜಕೀಯ ಪ್ರವರ್ಧಮಾನಕ್ಕೆ ಬಂದ ಅವರ ಮಗ ಶಿವಶಂಕರ ದೇಸಾಯಿ ಅಪ್ಪನ ಹಾದಿಯನ್ನೇ ಅನುಸರಿಸಿ ಕಾಂಗ್ರೆಸ್ ಮೂಲಕ ಎಂಟ್ರಿ ಕೊಟ್ಟರು. 1999ರ ಚುನಾವಣೆ ಬಂದಾಗ ಕಾಂಗ್ರೆಸ್ ಟಿಕೆಟ್‌ಗೆ ಪ್ರಯತ್ನ ಪಟ್ಟರಾದರೂ ಅದೃಷ್ಟ ಒಲಿಯಲಿಲ್ಲ. ಆದರೆ 2000ರಲ್ಲಿ ಜಿಲ್ಲಾ ಪಂಚಾಯತ್ ಎಲೆಕ್ಷನ್‌ನಲ್ಲಿ ಗೆದ್ದು ಜೆಡ್‌ಪಿ ಮೆಂಬರಾದರು. 2004ರ ಎಂಎಲ್‌ಎ ಎಲೆಕ್ಷನ್ ವೇಳೆಗೆ ಶಾಸಕನಾಗಿದ್ದ ಶಿವಶರಣಪ್ಪ ಗೌಡ ಪಾಟೀಲ್ ವಿರುದ್ಧ ಆಡಳಿತ-ವಿರೋಧಿ ಅಲೆ ಎದ್ದಿದ್ದರಿಂದ ಶಿವಶಂಕರ್ ದೇಸಾಯಿಗೆ ಟಿಕೆಟ್ ಸಿಗೋದು ಬಹುತೇಕ ನಿಶ್ಚಯವಾಗಿತ್ತು. ಆದರೆ ಜೆಡಿಯುನಿಂದ ವಲಸೆ ಬಂದ ಬಸವರಾಜ ರಾಯರೆಡ್ಡಿ ಕೈ ಟಿಕೆಟ್ ಕಬ್ಜಾ ಮಾಡಿಕೊಂಡಿದ್ದರಿಂದ ಶಿವಶಂಕರ್‌ಗೆ ಮತ್ತೊಮ್ಮೆ ನಿರಾಸೆಯಾಗಿತ್ತು. ಹಾಗಾಗಿ ಕಾಂಗ್ರೆಸ್‌ನಿಂದ ಹೊರಬರುವ ತೀರ್ಮಾನಕ್ಕೆ ಅವರು ಬಂದಿದ್ದರು. 2006ರಲ್ಲಿ ಖುದ್ದು ಯಡಿಯೂರಪ್ಪನೇ ಬಿಜೆಪಿಗೆ ಬರುವಂತೆ ದೇಸಾಯಿಗೆ ಆಹ್ವಾನವಿತ್ತಿದ್ದರು. ಆದರೆ ಶಿವಶಂಕರ್ ದೇಸಾಯಿ, ಬಂಗಾರಪ್ಪ ನೇತೃತ್ವದ ಸಮಾಜವಾದಿ ಪಾರ್ಟಿ ಸೇರಿಕೊಂಡರು. ಯಾವಾಗ ಬಂಗಾರಪ್ಪನೇ, ದೇವೇಗೌಡರ ಜೆಡಿಎಸ್ ತೂರಿಕೊಂಡರೋ ಆಗ ಅವರನ್ನೇ ಅನುಸರಿಸಿದ ಶಿವಶಂಕರ್ ಕೂಡಾ ಜೆಡಿಎಸ್‌ನ ತೆನೆಹೊತ್ತು ನಿಂತರು.

2003ರಲ್ಲಿ ಬಳ್ಳಾರಿಯ ಗಣಿಕುಳ ಜಿ.ಟಿ. ಪಂಪಾಪತಿ ಯಲಬುರ್ಗ ಜೆಡಿಎಸ್ ಹೊಕ್ಕ ನಂತರ ಪಕ್ಷದಲ್ಲಿ ಕ... ಏರುಪೇರಾಗಿತ್ತು. ಪಂಪಾಪತಿಯ ರೊಕ್ಕಕ್ಕೆ ಜೆಡಿಎಸ್ ಟ... ಬಿಕರಿಯಾಗಲಿದೆ ಎಂಬ ಸುಳಿವುಹಿಡಿದ ಅಂದಿನ ತಾಲ... ಅಧ್ಯಕ್ಷನಾಗಿದ್ದ ಸಿ.ಎಚ್. ಪಾಟೀಲ ಕೆಜೆಪಿಯತ್ತ ... ಹೋದರೂ ಶಿವಶಂಕರ್ ದೇಸಾಯಿ ಪಕ್ಷ ತೊರೆಯ... ಟಿಕೆಟ್‌ಗೆ ಇನ್ನಿಲ್ಲದಂತೆ ಪ್ರಯತ್ನ ಪಟ್ಟರೂ ಪಂಪಾಪ... ಹಣದ ಮುಂದೆ ಶಿವಶಂಕರ್‌ಗೆ ಗೆಲ್ಲಲಾಗಲಿಲ್ಲ. 20... ಚುನಾವಣೆಗಾದರು ಟಿಕೆಟ್ ಪಡೆಯುವ ಆಸೆ ದೇಸಾಯಿ... ಆದರೆ ಯಾವಾಗ ಶ್ರೀಪಾದಪ್ಪ ಅಧ್ಯಕ್ಷರಾದರೋ ... ಟಿಕೆಟ್ ಸಂಕಟ ಎದುರಾಗಿತ್ತು. ಯಾಕೆಂದರೆ ಅಧ... ಟಿಕೆಟ್‌ಗೆ ಭಾರೀ ಕಸರತ್ತು ನಡೆಸುತ್ತಿದ್ದಾರೆ. ಹಾ... ದೇಸಾಯಿ ಕೈಚೆಲ್ಲಿ ಕೂತಿಲ್ಲ. ತಾನು ಪ್ರತಿನಿಧಿಸುವ ಗಾ... ಸಮಾಜದ ಅಜಮಾಸು 25,000ಕ್ಕೂ ಮಿಗಿ... ಮತಗಳು ಮತ್ತು ತಮ್ಮ ಕೌಟುಂಬಿಕ ರಾಜಕೀ... ವರ್ಚಸ್ಸನ್ನು ಮುಂದಿಟ್ಟುಕೊಂಡು ಜೆಡಿಎಸ್ ದಿ... ಮನ ಗೆಲ್ಲುವ ಸಾಹಸದಲ್ಲಿದ್ದಾರೆ. ಈ ಇಬ್ಬರಲ್ಲಿ ಗ... ಒಲವನ್ನು ಶಿವಶಂಕರ ದೇಸಾಯಿ ಗಿಟ್ಟಿಸುತ್ತಾರೋ ಅ... ಪಂಪಾಪತಿಯಂತಹ ಮತ್ತೊಬ್ಬ ರೊಕ್ಕಸ್ಥನ ಪಾಲಾಗು... ಕಾದು ನೋಡಬೇಕು.


ಶಿವಶಂಕರಪ್ಪ


ಸಿ.ಎಚ್. ಪಾಟೀಲ್


ಲಿಂಗರಾಜು


ಬಸವಲಿಂಗಪ್ಪ

■ ಶರಣಪ್ಪ ಪಾಟೀ...

ಚಾಂಡಾಲ ಭಟ್ಟನಿಗೆ...

09 ⏮

ದೂ(ದು)ರಾಲೋಚನೆಯಂತೆಯೇ ಬಂಟ್ವಾಳದಲ್ಲಿ ಭಾನ್ಗಡಿಗಳು ನಡೆಯುತ್ತಿವೆ. ಮಂಗಳೂರಿನಲ್ಲಿ ಭಟ್ಟ ಮಾಡಿದ ಹಿಂದೂತ್ವದ ಪತ್ರಿಕಾಗೋಷ್ಠಿಯ ಮಾತುಗಳ ಸದ್ದಿನ್ನೂ ಅಡಗಿರಲಿಲ್ಲ; ಆಗಲೇ ಅಶ್ರಫ್ ಕಲಾಯಿ ಕಗ್ಗೊಲೆ ಆಗಿತ್ತಲ್ಲ, ಇದಕ್ಕೆ ಪ್ರತ್ಯುತ್ತರ ಎಂಬಂತೆ ಆರ್‌ಎಸ್‌ಎಸ್ ಕಟ್ಟಾಳು ಆಗಿದ್ದ ಶರತ್ ಮಡಿವಾಳ ಎಂಬ ಲಾಂಡ್ರಿ ಹುಡುಗನನ್ನು ಆತನ ಅಂಗಡಿ ಎದುರೇ ಇರಿದು ಹಾಕಲಾಯಿತು. ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದ ಶರತ್‌ನನ್ನು ಎತ್ತಿ ಆಸ್ಪತ್ರೆಗೆ ಸಾಗಿಸಿದ್ದು ಆತನ ಮುಸ್ಲಿಮ್ ಗೆಳೆಯ ಅಬ್ದುಲ್ ರವೂಫ್. ಹಿಂದೂಗಳ್ಯಾರೂ ಬರಲಿಲ್ಲ. ಕೆಲವು ದಿನ ಸಾವು-ಬದುಕಿನ ನಡುವೆ ಒದ್ದಾಡಿದ ಶರತ್ ಮೊನ್ನೆ ತೀರಿಕೊಂಡ.

ಇಲ್ಲೊಂದು ನಿಗೂಢವಿದೆ. ಅಶ್ರಫ್‌ನ ಕೊಂದ ಭಜರಂಗಿ ರೌಡಿ ದಳವನ್ನು ಹಿಡಿದು ಹಾಕಿದ ಪೊಲೀಸರು ಸಾಬರ ಕೇರಿ-ಕೇರಿ, ಮನೆ-ಮನೆ ಜಾಲಾಡಿದರೂ ಶರತ್ ಕೊಲೆಗಡುಕರು ಸಿಕ್ಕಿಲ್ಲ. ಅಲ್ಲಿಗೆ ಶರತ್ ಕೊಲೆಯೂ ಪ್ರವೀಣ ಪೂಜಾರಿ, ಹರೀಶ್ ಪೂಜಾರಿ ಮರ್ಡರಿನಂತೆಯೇ ಹಿಂದೂತ್ವದ ಪಾಪಿಗಳೇ ಮಾಡಿದ್ರಾ ಎಂಬ ಅನುಮಾನಕ್ಕೆ ಎಡೆಮಾಡಿದೆ. ಭಟ್ಟನ ಇತಿಹಾಸ-ಭೂಗೋಳ ಬಲ್ಲವರು ಶರತ್ ಹತ್ಯೆ ಬಗ್ಗೆ ಹಲವು ಹಿಂದೂತ್ವದ ವ್ಯಾಖ್ಯಾನ ಮಾಡುತ್ತಿದ್ದಾರೆ. ಶರತ್ ಮಡಿವಾಳನ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದವರನ್ನು ಪೊಲೀಸರಿಂದ ಹಿಡಿಯಲಾಗಲಿಲ್ಲ ಎಂಬುದನ್ನೇ ನೆಪ ಮಾಡಿಕೊಂಡು ಭಟ್ಟ ಕಳೆದ ಶುಕ್ರವಾರ (7-7-2017) ಹಿಂದೂ ಜಾಗೃತಿ ಪ್ರತಿಭಟನೆ ಏರ್ಪಡಿಸಿದ್ದ.

ಬಂಟ್ವಾಳದ ಬಿ.ಸಿ. ರೋಡಲ್ಲಿ ನಿಷೇಧಾಜ್ಞೆ ಇದ್ದರೂ ಧಿಕ್ಕರಿಸಿ ತನ್ನ ಗುಲಾಮ-ಗುಲಾಮಿಗಳಂತಿರುವ ಬಿಜೆಪಿ ಶಾಸಕ-ಸಂಸದರನ್ನು ಕರೆಸಿಕೊಂಡಿದ್ದ ಕಲ್ಲಡ್ಕ ಭಟ್ಟ; ಆಚಾರವಿಲ್ಲದ ನಾಲಿಗೆಯ ಸಂಸದೆ ಶೋಭಾ ಕರಂದ್ಲಾಜೆ, ಹೆತ್ತ ಜಿಲ್ಲೆಗೆ ಬೆಂಕಿ ಹಾಕುವ ದುರ್ಬುದ್ಧಿ ಮಾತುಗಾರಿಕೆಯ ದಕ್ಷಿಣ ಕನ್ನಡದ ಎಂಪಿ ನಳಿನ್‌ಕುಮಾರ್ ಕಟೀಲು, ಕಾರ್ಕಳದ ವೈದಿಕಶಾಹಿ ಬುದ್ಧಿಯ ಶಾಸಕ ಸುನಿಲ್‌ಕುಮಾರ್, ಸಂಘಪರಿವಾರದ ಜನಿವಾರಿಗಳ ಸೇವಕನಂತಿರುವ ಸುಳ್ಯದ ಎಮ್ಮೆಲ್ಲೆ ಅಂಗಾರನಂಥ ಎಡವಟ್ಟುಗಳು ಕಲ್ಲಡ್ಕನ ಹೊತ್ತು ಮರೆಸುವ ಪ್ಲಾನು ಹಾಕಿಕೊಂಡಿದ್ದರು. ಪ್ರತಿಭಟನೆಯ ಮುಂಚೂಣಿಯಲ್ಲಿದ್ದ ಭಜರಂಗಿ ಎಂಪಿ-ಎಮ್ಮೆಲ್ಲೆ-ಹಿಂದೂತ್ವದ ಲೀಡರ್‌ಗಳಿಗೆಲ್ಲ ಕಲ್ಲಡ್ಕ ಭಟ್ಟ ಬಲಾಢ್ಯ ಹಿಂದೂ ಡಾನ್; ಆತನ ಬಂಧಿಸುವ ತಂಟೆಗೆ ಹೋದರೆ ಹುಷಾರ್- ಎಂಬ ಸಂದೇಶ ಕಾಂಗ್ರೆಸ್ ಸರ್ಕಾರಕ್ಕೆ ರವಾನಿಸುವ ಒಳ ಉದ್ದೇಶವಿತ್ತೇ ಹೊರತು ಶರತ್ ಮಡಿವಾಳನ ಹತ್ಯೆ ಸಂಚುಕೋರರ ಬೇಗ ಬಂಧಿಸಿ ಎಂದು ಒತ್ತಾಯಿಸುವ ಉದ್ದೇಶ ಒಂಚೂರೂ ಇರಲಿಲ್ಲ. ಇದನ್ನು ಸಾಬೀತುಪಡಿಸುವಂತಿದೆ ಶೋಭಾ-ನಳಿನ್ ಅಂಡ್ ಗ್ಯಾಂಗ್ 'ಗುರೂಜಿ' ಕಲ್ಲಡ್ಕನ ಹೊತ್ತು ಕುಣಿದಾಡಿದ ಪರಿ!!

ಕಲ್ಲಡ್ಕ ಭಟ್ಟ ಪ್ರತಿಭಟನಾ ಮೆರವಣಿಗೆಗೆ ಬರುತ್ತಿದ್ದಂತೆಯೇ ಆತನಿಗೆ ಜಯಕಾರ ಹಾಕಲಾಯಿತು. ಹೆಗಲಿ ಮೇಲೇರಿಸಿಕೊಂಡು ಭಜರಂಗಿಗಳು ಕುಣಿದು ಕುಪ್ಪಳಿಸಿದರು. ಭಕ್ತರ ಹೆಗಲ ಮೇಲೆ ಕುಳಿತ ಕಲ್ಲಡ್ಕ ಭಟ್ಟ ಮುಷ್ಟಿಕಟ್ಟಿದ ಕೈ ಮೇಲಕ್ಕೆತ್ತಿ ಹಿಂದೂತ್ವದ (ಹುಸಿ) ಕೆಚ್ಚು ತೋರಿಸುತ್ತ ಸಂಭ್ರಮಿಸಿದ್ದು ನಿರ್ಲಜ್ಜವಾಗಿತ್ತು. ತನ್ನ ಹಿಂದೂತ್ವದ ಸಂಘಟನೆಯ ಹುಡುಗ ಆಸ್ಪತ್ರೆಯಲ್ಲಿ ಸಾವಿನೊಂದಿಗೆ ಸೆಣಸಾಡುತ್ತಿದ್ದಾಗ ಭಟ್ಟ ಮತ್ತಾತನ ಚೇಲಾಗಳಿಂದ ಸಂಸದೆ ಶೋಭಾ, ನಳಿನ್, ಶಾಸಕ ಸುನಿಲ್, ಅಂಗಾರ ವಿಜಯೋತ್ಸವದ ಖುಷಿಯಲ್ಲಿ ಓಲಾಡಿದ್ದು ಹಿಂದೂತ್ವದ ಹಕೀಕತ್ತು ನಿಸ್ಸಂಶಯವಾಗಿ ಬಿಚ್ಚಿಟ್ಟಿದೆ. ದುರಂತವೆಂದರೆ, ಶರತ್ ಮಡಿವಾಳ ಬಗ್ಗೆ ಹಿಂದೂಗಳಲ್ಲಿದ್ದ ಕಳವಳ, ಸ್ವಧರ್ಮದ ಭಾವುಕತೆಯನ್ನೇ ಬಂಡವಾಳ ಮಾಡಿಕೊಂಡು ದಾರಿ ತಪ್ಪಿಸಿದ್ದ ಭಟ್ಟ, ಶೋಭಾ, ನಳಿನ್ ವಗೈರೆ ಹಿಂದೂತ್ವ ಹರಿಕಾರರಲ್ಲಿ ಮನುಷ್ಯತ್ವವೇ ಇರಲಿಲ್ಲ; ಶರತ್‌ನ ಕಾಳಜಿ ಇರಲಿಲ್ಲ. ಈ ಸೋಗಲಾಡಿ ಹಿಂದೂ ಮುಂದಾಳುಗಳು ಸ್ಯಾಡಿಸ್ಟ್ ಸಡಗರದಲ್ಲಿ ಇರುವಾಗಲೇ ಅತ್ತ ಶರತ್‌ನ ಉಸಿರಾಟ ನಿಂತಿದೆ! ಪೆದ್ದು ಭಕ್ತರ ಹೆಗಲಿಂದ ಇಳಿದವನೇ ಹೇಡಿ ಕಲ್ಲಡ್ಕ ಭಟ್ಟ ಪರಾರಿಯಾಗಿದ್ದಾನೆ. ಗಲಭೆಯಾದರೆ ಸಿಕ್ಕಿ ಬೀಳುವ ಭಯ ಮತ್ತು ಪೊಲೀಸರ ಪಾಲಾಗುವ ಆತಂಕದಿಂದ 'ಬದುಕಿದೆಯಾ ಬಡಜೀವವೇ' ಎನ್ನುತ್ತ ಭಟ್ಟ ಗಡಿಬಿಡಿಯಲ್ಲಿ ತಲೆ ತಪ್ಪಿಸಿಕೊಂಡಿದ್ದಾನೆ. ಅಮಾಯಕ ಜೀವ ಪಣಕ್ಕಿಟ್ಟು ಹಿಂದೂತ್ವದ ಜೂಜಾಡುವ ಭಟ್ಟ ಅಂತೂ ಗುಂಪಿನ ಹಿಂದಿನಿಂದ ನುಸುಳಿ ನಾಪತ್ತೆಯಾಗಿ ಹೋಗಿದ್ದಾನೆ! ಪೊಲೀಸರು ಕೈಗೆ ಸಿಕ್ಕಿ ಶೋಭಾ-ನಳಿನ್ ಸಂಗಡಿಗರನ್ನು ವ್ಯಾನಿಗೆ ತುಂಬಿಕೊಂಡು ಹೋದರು. ತಕ್ಷಣ ಇದೇ ಅನಾಹುತಕಾರಿ ಹಿಂದೂತ್ವದ ಪಡೆ ಶರತ್‌ನ ಶವಯಾತ್ರೆಗೆ ಅಣಿಯಾಗಿದೆ; ತನ್ಮೂಲಕ ಸೂತಕದ ಸೌಲಭ್ಯ ಬಳಸಿಕೊಳ್ಳಲು ಹವಣಿಸಿದ್ದಾರೆ.

ಶರತ್‌ನ ಶವಯಾತ್ರೆಯಲ್ಲಿ ದೊಡ್ಡ ಮಟ್ಟ... ಹಿಂದೂಗಳು ಜಮೆಯಾಗಿದ್ದರು. ನಿಷೇಧಾಜ್ಞೆ ಇ... ಹಿಂದಿನ ದಿನ ಕಲ್ಲಡ್ಕ ಭಟ್ಟ, ಶೋಭಾ ಅಂಡ್ ಗ್ಯಾ... ಪ್ರತಿಭಟನೆಗೆ ಅವಕಾಶ ಕೊಟ್ಟಿದ್ದ ನಾಲಾಯಕ್ ಪೊಲಿ... ಶರತ್ ಶವಯಾತ್ರೆ ವೇಳೆ ಅಕ್ಷರಶಃ ಇಕ್ಕಟ್ಟಿಗೆ ಸಿಲುಕಿ... ಪೊಲೀಸರೇ ಸಾವಿರಾರು ಮಂದಿಯಿದ್ದರು. ಅಡಿಗಡಿ... ವಿಡಿಯೋ ರಿಕಾರ್ಡಿಂಗ್ ಖಾಕಿಪಡೆ ಮಾಡಿಕೊ... ಇಷ್ಟಾದರೂ ಶವಯಾತ್ರೆಯ ಮೇಲೆ ನಾಲ್ಕೈದು ... ಕಲ್ಲು ತೂರಾಟ ನಡೆದಿದೆ. ಸಾಬರು ಹೆಚ್ಚಿರುವ ಪ್ರದೇಶ... ಹಾದುಹೋಗುವಾಗಲೇ ಕಲ್ಲು ಮೆರವಣಿಗೆ ಮೇಲೆ ಬ... ಮೆರವಣಿಗೆಯಲ್ಲಿದ್ದ ಹಿಂದೂಗಳದೇ ಒಂದು ಕಾರಲ್ಲಿ ... ತುಂಬುತ್ತಿರುವ ವಿಡಿಯೋ ವೈರಲ್ ಆಗಿದೆ. ಕಲ್ಲು ... ಹಿಂದೂಗಳ ಕೆರಳಿಸಿ ಸಂಘರ್ಷ ಎಲೆಕ್ಷನ್‌ತನಕ ಚ... ಇಡುವ ಚಮತ್ಕಾರವಿದಷ್ಟೇ. ಕಲ್ಲು ತೂರಿದ್ದು ಹಿಂದೂ... ಎಂಬುದನ್ನು ವಿಡಿಯೋ ರೆಕಾರ್ಡಿಂಗ್‌ನಿಂದ ಖಾತ್ರಿಯಾ... ಬಿಜೆಪಿ ಮುಂದಾಳುಗಳು ಕಲ್ಲು ತೂರಿದ ... ಪರಿವಾರದವರ ಮೇಲೆ ಬೀಳುತ್ತಿದ್ದಂತೆಯೇ ಬಾಯ... ಬಡಿದುಕೊಳ್ಳುತ್ತಿದ್ದಾರೆ.


ಹಿಂದೂಗಳು ಅಥವಾ ಮುಸ್ಲಿಮ್, ಕ್ರಿಶ್ಚಿಯ... ಮೆರವಣಿಗೆ, ಪ್ರತಿಭಟನೆ, ರ್‍ಯಾಲಿ ನಡೆಸಿದಾಗ ಹಿಂ... ಪುಂಡರಿಂದಲೇ ಕಲ್ಲು ಹೊಡೆಸಿ ಕೋಮು ಗ... ಪ್ರಚೋದಿಸುವುದು ಅಥವಾ ಬಿರುಸಾಗಿಸುವ... ಸಂಘಪರಿವಾರದ ಷಡ್ಯಂತ್ರಗಳಲ್ಲಿ ಒಂದು. 10-15 ಬ... ಧಾಂಡಿಗರನ್ನು ಹಿಂದೂತ್ವದ ಸಭೆ-ರ್‍ಯಾಲಿ ಇರು... ಸಂಘಿಗಳು ರಹಸ್ಯವಾಗಿ ಕಳಿಸುತ್ತಾರೆ. ಅವರಿಗೆ ... ಆಕರ್ಷಕ-ಸಂಬಳವೂ ನಿಗದಿಸಲಾಗುತ್ತದೆ. ಅ... ಕಾರ್ಯಾಚರಣೆ ನಡೆಸಬೇಕಾದ ಊರಲ್ಲಿ ಐಷಾರಾ...





ೊಡಗು: ಸಂಸದ ಸಿಮ್ಮನ ಹಗಲುವೇಷ







ಹೊರಡಿಸಿ ಆಘಾತ ನೀಡಿದೆ. ಹಾಗೆ ನೋಡಿದರೆ ಸೂಕ್ಷ್ಮ ಪರಿಸರ ತಾಣದ ವಿಚಾರದಲ್ಲಿ ಮತ್ತು ಕಸ್ತೂರಿ ರಂಗನ್ ವರದಿಯನ್ನು ಅನುಷ್ಠಾನಗೊಳಿಸುವ ವಿಚಾರದಲ್ಲಿ ಕೊಡಗು ಜಿಲ್ಲೆಯ ಸ್ಥಳೀಯ ಬಿಜೆಪಿಗಳು ಮೇಲ್ನೋಟಕ್ಕಾದರೂ ಜನರ ಪರವಾಗಿ ನಿಂತಿದ್ದರು. ಶಾಸಕರಾದ ಕೆ.ಜಿ. ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್ ಇಂಥಾ ಪ್ರಯತ್ನಗಳನ್ನು ಬಹಿರಂಗವಾಗಿ ವಿರೋಧಿಸುತ್ತಾ ಬಂದಿದ್ದರು. ಕೇಂದ್ರ ಸರಕಾರದ ಈ ಕಾರ್ಯಕ್ರಮವನ್ನು ಅವರುಗಳು ಟೀಕಿಸಿದ್ದರು. ಅಲ್ಲದೇ, ಕಸ್ತೂರಿ ರಂಗನ್ ವರದಿ ವಿರೋಧಿಸುವ ನಿಟ್ಟಿನಲ್ಲಿ ನಡೆದ ಸರ್ವಪಕ್ಷಗಳ ಸಭೆಯಲ್ಲೂ ಅವರು ಭಾಗವಹಿಸಿದ್ದರು.


ಆದರೆ ಅದ್ಯಾವಾಗ ಈ ಚಡ್ಡಿ ಸಂಸದ ಸಿಮ್ಮ ಕೊಡಗಿನ ಕಾಂಟ್ರ್ಯಾಕ್ಟು ಹಿಡಿದವನಂತೆ ಜಿಲ್ಲೆಯ ಜನರ ಕಿವಿಗೆ ಹೂ ಇಡಲು ಮುಂದಾದನೋ ಆಗಿನಿಂದ ಕೊಡಗು ಜನರ ಹೋರಾಟವೇ ದಿಕ್ಕೆಟ್ಟು ಹೋಯ್ತು. "ಕಸ್ತೂರಿ ರಂಗನ್ ವರದಿಯ ಅನುಷ್ಠಾನದ ವಿಚಾರದ ಬಗ್ಗೆ ನೀವೇನು ತಲೆಕೆಡಿಸಿಕೊಳ್ಳಬೇಡಿ, ಅದನ್ನು ನನ್ನ ಹೆಗಲ ಮೇಲೆ ಹಾಕಿ. ಯಾವ ಕಾರಣಕ್ಕೂ ಕೇಂದ್ರ ಸರ್ಕಾರದ ಅಂತಹ ತೀರ್ಮಾನ ಕೈಗೊಳ್ಳದಂತೆ ನಾನು ನೋಡಿಕೊಳ್ತೀನಿ. ನೀವು ನಿಶ್ಚಿಂತೆಯಿಂದ ಮಲಗಿ" ಎಂದು ಪ್ರತಾಪ ಸಿಂಹ ಹಾಡಿದ ಲಾಲಿಹಾಡಿಗೆ ಕೊಡಗಿನ ಜನ ನೆಮ್ಮದಿಯಾಗಿ ಕಣ್ಮುಚ್ಚಿದ ಪರಿಣಾಮವೇ ಇವತ್ತು ಮೊದಲ ಹಂತದ ಸೂಕ್ಷ್ಮ ಪರಿಸರ ತಾಣದ ಘೋಷಣೆ ಹೊರಬಿದ್ದಿರೋದು.

ಅದೇನೊ ಹೇಳ್ತಾರಲ್ಲ ಚೆಟ್ಟ ಬಿದ್ದರೂ ಮೀಸೆ ಮಣ್ಣಾಗಲಿಲ್ಲ, ಹಾಗೆ ತನ್ನದೇ ಕೇಂದ್ರ ಸರ್ಕಾರ ಕೊಡಗಿನ ಬದುಕುಗಳ ಮೇಲೆ ಪ್ರಹಾರ ಮಾಡಿದ್ದರೂ "ಕೇಂದ್ರ ಸರಕಾರ ಜಸ್ಟ್ ನೋಟಿಫೈ ಮಾಡಿದೆ ಅಷ್ಟೆ. ಇನ್ನೂ ಅನುಷ್ಠಾನ ಮಾಡಿಲ್ಲ, ನಾನದಕ್ಕೆ ಅವಕಾಶ ಕೊಡಲ್ಲ" ಎಂದು ಮತ್ತೆ ಜನರನ್ನು ವಂಚಿಸಲು ಹೊರಟಿದ್ದಾನೆ. ಒಮ್ಮೆ ನೋಟಿಫೈ ಆದಮೇಲೆ ಅನುಷ್ಠಾನ ಆಗೋದು ಕಷ್ಟದ ಮಾತಾ? ಇಷ್ಟೇ ಅಲ್ಲ, ಕೇಂದ್ರ ಸರ್ಕಾರದ ಈ ಜನದ್ರೋಹಿ ಕೆಲಸವನ್ನು ರಾಜ್ಯ ಸರ್ಕಾರದ ಮುಸುಡಿಗೆ ಬಳಿಯಲು ಸಿಮ್ಮ ತನ್ನೆಲ್ಲ ಬುದ್ಧಿವಂತಿಕೆಯನ್ನು ಖರ್ಚು ಮಾಡುತ್ತಿದ್ದಾನೆ. "ಕರ್ನಾಟಕದ ಕಾಂಗ್ರೆಸ್ ಸರಕಾರದ ಬೇಜವಾಬ್ದಾರಿತನದಿಂದಾಗಿ ಈ ರೀತಿ ಆಗಿದೆ. ರಾಜ್ಯ ಸರಕಾರ ಕೇಂದ್ರಕ್ಕೆ ಸಲ್ಲಿಸಿರುವ ವರದಿ ಜನರ ಹಿತಾಸಕ್ತಿಗೆ ವಿರುದ್ಧವಾಗಿದ್ದರಿಂದಲೇ ಕೇಂದ್ರ ಇಂಥಾ ನಿರ್ಧಾರ ತೆಗೆದುಕೊಂಡಿದೆ. ರಾಜ್ಯ ಸರಕಾರ ಕೇಂದ್ರಕ್ಕೆ ಸಲ್ಲಿಸಿರುವ ವರದಿಯನ್ನು ಬಹಿರಂಗಪಡಿಸಲಿ. ಆಗ ಕಾಂಗ್ರೆಸಿನ ನಿಜ ಬಣ್ಣ ಗೊತ್ತಾಗುತ್ತೆ" ಎಂಬ ಎಡಬಿಡಂಗಿ ಹೇಳಿಕೆಗಳಲ್ಲೇ ಕಾಲಹರಣ ಮಾಡುತ್ತಿದ್ದಾನೆ.

ರಾಜ್ಯ ಸರ್ಕಾರ ವರದಿ ಕೊಟ್ಟಿದ್ದನ್ನೆಲ್ಲ ಕೇಂದ್ರ ಜಾರಿ ಮಾಡಿಬಿಡುತ್ತಾ? ಹಾಗಿದ್ದರೆ ಕಾವೇರಿ, ಮಹದಾಯಿ ವಿಚಾರದಲ್ಲಿ ರಾಜ್ಯ ಸರ್ಕಾರದ ಮನವಿಗಳಿಗೆ ಯಾಕೆ ಅಷ್ಟು ನಿಷ್ಠುರವಾಗಿ ಸ್ಪಂದಿಸಿತು? ಒಂದುವೇಳೆ, ರಾಜ್ಯ ಸರ್ಕಾರದ ವರದಿ ನಿಜಕ್ಕೂ ಜನವಿರೋಧಿಯಾಗಿದ್ದರೆ ಅದನ್ನು ಕೇಂದ್ರ ಸರ್ಕಾರ ತಿರಸ್ಕರಿಸಬಹುದಿತ್ತಲ್ಲವಾ? ಜನವಿರೋಧಿ ಅಂತ ಗೊತ್ತಾದ ಮೇಲೂ ಅಂಗೀಕರಿಸಿ ನೋಟಿಫೈ ಮಾಡಿದ್ದೇಕೆ? ಈಗ ಬೊಬ್ಬೆ ಹೊಡೆಯುವುದು ಬಿಟ್ಟು ಬಿಜೆಪಿಯ ಸಂಸದನಾಗಿರುವ ಸಿಮ್ಮ ತನ್ನದೇ ಪಕ್ಷದ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದ ಜನವಿರೋಧಿ ವರದಿ ಕುರಿತು ಮನವರಿಕೆ ಮಾಡಿಕೊಡಬಹುದಿತ್ತಲ್ಲವೇ? ಊಹೂಂ, ಇಂಥಾ ಯಾವ ಪ್ರಶ್ನೆಗಳೂ ಸಿಮ್ಮನಿಗೆ ರುಚಿಸುವಂತದ್ದಲ್ಲ!

ವಾಸ್ತವದಲ್ಲಿ ರಾಜ್ಯ ಸರಕಾರ ಸಲ್ಲಿಸಿದ್ದ ಆಕ್ಷೇಪಣೆಗಳಲ್ಲಿ ಯಾವುದೇ ನ್ಯೂನತೆಗಳು ಇರಲಿಲ್ಲ. 2015ರಲ್ಲಿ ಕೇಂದ್ರ ಸರಕಾರ ಕರಡು ಅಧಿಸೂಚನೆ ಹೊರಡಿಸಿದಾಗ ಅದಕ್ಕೆ ಕೊಡಗು ಜಿಲ್ಲೆಯಲ್ಲಿ ವ್ಯಾಪಕವಾದ ವಿರೋಧ ವ್ಯಕ್ತವಾಗಿತ್ತು. ಆಗ ನಡೆದ ಬೃಹತ್ ಪ್ರತಿಭಟನಾ ಸಭೆಯಲ್ಲಿ ಕೆ.ಜಿ. ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್ ರಾಜ್ಯ ಸರಕಾರ ಕಳುಹಿಸಿರುವ ಆಕ್ಷೇಪಣೆಗಳು ಸಮರ್ಪಕವಾಗಿಲ್ಲ, ಆದ್ದರಿಂದ ಜನತೆಯ ಪರವಾಗಿ ಸಮಿತಿಯು ಆಕ್ಷೇಪಣೆಗಳನ್ನು ಸಲ್ಲಿಸುತ್ತದೆ ಎಂದು ಹೇಳಿದ್ದರು. ಅಲ್ಲದೆ, ಜನಸಾಮಾನ್ಯರಿಂದ ಸುಮಾರು ಹತ್ತು ಸಾವಿರ ಆಕ್ಷೇಪಣೆಗಳನ್ನು ಸಂಗ್ರಹಿಸಿ, ಕೇಂದ್ರ ಸರಕಾರಕ್ಕೆ ಕಳುಹಿಸಲಾಗಿತ್ತು. ಸಿಮ್ಮ ಬೊಬ್ಬಿರಿಯುತ್ತಿರುವಂತೆ ರಾಜ್ಯದ ವರದಿ ಜನವಿರೋಧಿ ಅಂತಲೇ ಒಪ್ಪಿಕೊಳ್ಳೋಣ, ಜನಾನುರಾಗಿ ಕೇಂದ್ರ ಸರ್ಕಾರ ಕಡೇಪಕ್ಷ ಜನಸಾಮಾನ್ಯ ಸಮಿತಿಯಿಂದ ಸಲ್ಲಿಕೆಯಾದ ಹತ್ತು ಸಾವಿರ ಆಕ್ಷೇಪಣೆಗಳನ್ನಾದರು ಪರಿಗಣಿಸಿ ನೋಟಿಫೈ ನಿರ್ಧಾರದಿಂದ ಹಿಂದೆ ಸರಿಯಬಹುದಿತ್ತಲ್ಲವೆ?

ಅಸಲಿಗೆ ಕರ್ನಾಟಕ ರಾಜ್ಯ ಸರಕಾರವು ಜನರು ವಾಸಿಸುವ ಪ್ರದೇಶವನ್ನು ಸೂಕ್ಷ್ಮ ಪರಿಸರ ತಾಣದಿಂದ ಹೊರಗಿಡಬೇಕು ಎಂದು ವರದಿಯಲ್ಲಿ ಕೇಂದ್ರ ಸರಕಾರಕ್ಕೆ ತಿಳಿಸಿತ್ತು, ಅದನ್ನು ಕೇಂದ್ರ ಲೆಕ್ಕಕ್ಕೇ ತೆಗೆದುಕೊಂಡಿಲ್ಲ, ಅದನ್ನು ಮರೆಮಾಚುವ ಸಲುವಾಗಿ ಸಿಮ್ಮ, ರಾಜ್ಯ ಸರಕಾರ ಕೇರಳ ಮಾದರಿಯಲ್ಲಿ ಸೂಕ್ಷ್ಮ ಪರಿಸರ ತಾಣದ ವಿಚಾರದಲ್ಲಿ ಸರ್ವೆ ಕಾರ್ಯ ಮಾಡಲಿಲ್ಲ, ಹಾಗಾಗಿ ಕೇರಳ ಸರಕಾರಕ್ಕೆ ರಿಯಾಯಿತಿ ದೊರೆತಿದ್ದು ಕರ್ನಾಟಕಕ್ಕೆ ದೊರೆತಿಲ್ಲ ಎಂದೆಲ್ಲ ಅರಚಾಡುತ್ತಿದ್ದಾನೆ. ಕೇಂದ್ರ ಪರಿಸರ ಖಾತೆಯು ಸರ್ವೋಚ್ಚ ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸುವ ಮುನ್ನ 2014ರ ಜುಲೈ 7ರಂದು ಪಶ್ಚಿಮಘಟ್ಟ ಪ್ರದೇಶದ ಆರು ರಾಜ್ಯಗಳ ಪರಿಸರ ಸಚಿವರ ಸಭೆಯನ್ನು ನಡೆಸಿತ್ತು, ಅಲ್ಲಿ ಕರ್ನಾಟಕ ರಾಜ್ಯದ ಪರಿಸರ ಮತ್ತು ಅರಣ್ಯ ಸಚಿವರಾದ ರಮಾನಾಥ್ ರೈಯವರು ರಾಜ್ಯ ಸರಕಾರದ ನಿಲುವನ್ನು ಸ್ಪಷ್ಟಪಡಿಸಿದ್ದರು. ಆಗಸ್ಟ್ 2016ರಲ್ಲಿ ಪಶ್ಚಿಮಘಟ್ಟ ಪ್ರದೇಶದ ಸಂಸತ್ ಸದಸ್ಯರ ಸಭೆಯನ್ನು ಕೇಂದ್ರ ಪರಿಸರ ಖಾತೆ ನಡೆಸಿತ್ತು, ಅದರಲ್ಲಿ ನಮ್ಮ ಘನ ಸಂಸದರುಗಳು (ಹದಿನೆಂಟು ಮಂದಿ ಬಿಜೆಪಿ ಮಹಾನುಭಾವರೇ ಇದ್ದಾರೆ) ಗೈರುಹಾಜರಾಗಿದ್ದರು. ಈ ಬಗ್ಗೆ ಯಾವುದೇ ಅಧ್ಯಯನವಿಲ್ಲದ ಹಿರಿಯ ಸಂಸದ



ಶರದ್ ಪವಾರ್ ತನಗೆ ವರದಿಯೇ ಕೈಸೇರಿಲ್ಲ ಎಂದು ಅಂದು ಹೇಳಿದ್ದರು. ಅದನ್ನು ಪ್ರಶ್ನಿಸುವುದಕ್ಕೆ ನಮ್ಮ ಸಂಸದರೇ ಇರಲಿಲ್ಲ.

ಈ ವಿಚಾರದಲ್ಲಿ ಸೂಕ್ಷ್ಮ ಪರಿಸರ ತಾಣವನ್ನು ಗುರುತಿಸಿ ವರದಿ ಸಲ್ಲಿಸಲು ವಿಳಂಬ ಮಾಡಿದರೆ ಎಲ್ಲಾ ರಕ್ಷಿತಾರಣ್ಯದ ಸುತ್ತಮುತ್ತ 10 ಕಿ.ಮೀ. ವ್ಯಾಪ್ತಿಯಲ್ಲಿ ಸೂಕ್ಷ್ಮ ಪರಿಸರ ವಲಯವೆಂದು ಏಕಪಕ್ಷೀಯವಾಗಿ ಆದೇಶಿಸುವುದಾಗಿ ಕೇಂದ್ರ ಸರಕಾರ ಎಚ್ಚರಿಸಿದ್ದೇ ಅಲ್ಲದೆ, ಯಾವುದೇ ಕಾರಣಕ್ಕೂ ಸೂಕ್ಷ್ಮ ವಲಯವನ್ನು ಶೂನ್ಯವೆಂದು ಗುರುತಿಸಬಾರದೆಂದು ತಿಳಿಸಿತ್ತು. ಹಾಗಾಗಿ ಅರಣ್ಯ ಪ್ರದೇಶದಿಂದ 1 ಕಿ.ಮೀ. ವ್ಯಾಪ್ತಿಗೆ ಸೂಕ್ಷ್ಮ ಪರಿಸರ ತಾಣವೆಂದು ಘೋಷಿಸುವಂತೆ ರಾಜ್ಯ ಸರಕಾರ ಕೇಂದ್ರಕ್ಕೆ ಶಿಫಾರಸ್ಸು ಮಾಡಿತ್ತು, ಆದರೆ ಅವೆಲ್ಲವನ್ನೂ ಗಣನೆಗೆ ತೆಗೆದುಕೊಳ್ಳದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ಅಂತಿಮ ಅಧಿಸೂಚನೆಯನ್ನು ಹೊರಡಿಸಿದೆ.

ಪ್ರತಾಪ ಸಿಮ್ಮ ರಾಜ್ಯ ಸರ್ಕಾರದ ಮೇಲೆ ಗೂಬೆ ಕೂರಿಸಲು ಯತ್ನಿಸುತ್ತಿದ್ದಾನೆ. ಆದರೆ ಜನ ಆತನ ಮತ್ತು ಆತನ ಪಾರ್ಟಿಯ ಹಗಲುವೇಷವನ್ನು ಚೆನ್ನಾಗಿಯೇ ಅರ್ಥಮಾಡಿಕೊಂಡಿದ್ದಾರೆ. ಕರ್ನಾಟಕದ ಜನತೆ ರಾಜ್ಯದಿಂದ ಒಟ್ಟು 18 ಮಂದಿ ಬಿಜೆಪಿ ಸಂಸದರನ್ನು ಕಳುಹಿಸಿದೆ. ಪಶ್ಚಿಮಘಟ್ಟ ಪ್ರದೇಶದ ಬಹುತೇಕ ಎಲ್ಲಾ ಸಂಸದರು ಬಿಜೆಪಿಯವರೇ ಆಗಿದ್ದಾರೆ. ಕೇರಳದಿಂದ ಒಬ್ಬನೇ ಒಬ್ಬ ಬಿಜೆಪಿ ಸಂಸದನಿಲ್ಲ, ಆದರೆ ಕೇರಳಕ್ಕೆ ಸಿಕ್ಕ ವಿನಾಯ್ತಿಯನ್ನು ರಾಜ್ಯಕ್ಕೆ ಗಿಟ್ಟಿಸಿಕೊಳ್ಳಲು ಇವರಿಗೆ ಸಾಧ್ಯವಾಗಿಲ್ಲ. ಅಂದರೆ ನಮ್ಮ 18 ಮಂದಿ ಸಂಸದರು ಕೇಂದ್ರ ಸರಕಾರದ ಮೇಲೆ ಒತ್ತಡ ತರುವಲ್ಲಿ ವಿಫಲರಾಗಿದ್ದಾರೆ ಅನ್ನೋದು ಸ್ಪಷ್ಟವಾಗುತ್ತೆ.

ವಾಸ್ತವದಲ್ಲಿ ಸೂಕ್ಷ್ಮ ಪರಿಸರ ತಾಣದ ಘೋಷಣೆ ಮಾಡುವ ಸಂಪೂರ್ಣ ಅಧಿಕಾರ ಇರೋದು ಕೇಂದ್ರ ಸರ್ಕಾರಕ್ಕೆ. ರಾಜ್ಯ ಸರ್ಕಾರ ಹೆಚ್ಚೆಂದರೆ ವರದಿ ಕೊಡಬಹುದು, ಮನವಿ ಸಲ್ಲಿಸಬಹುದು, ಶಿಫಾರಸ್ಸು ಮಾಡಬಹುದು. ಆದರೆ ಅಂತಿಮ ವಿವೇಚನೆ ಕೇಂದ್ರಕ್ಕೆ ಬಿಟ್ಟಿದ್ದು. ಇಷ್ಟಿದ್ದಾಗ್ಯೂ ಕೇಂದ್ರ ಸರ್ಕಾರದ ಜನವಿರೋಧಿ ಘನಕಾರ್ಯವನ್ನು ರಾಜ್ಯ ಸರ್ಕಾರದ ಮೇಲೆ ಹೊರಿಸಲು ಹೆಣಗಾಡುತ್ತಿದ್ದಾನಲ್ಲ ಈ ಸಂಸದ ಸಿಮ್ಮ. ಇಂತಹವನಿಗೆ ಏನೆನ್ನಬೇಕು.

■ ಬಿ.ಎನ್. ಮನು ಶೆಣೈ

ರ್ನಾಟಕದ ಕಾಶ್ಮೀರದಲ್ಲಿ ಕೇಸರಿ ರಾಜಕಾರಣಿಗಳ ಟಿಕಲ್ ಟೆರರಿಸಂ ಹದ್ದು ಮೀರಿ ಹೋಗುತ್ತಿದೆ. ಲ್ಲೂ ಸಂಸದ ಪೇಪರ್ ಸಿಮ್ಮನ ಅಡಾಹುಡಿ ಕೆಗಳು ಜನರನ್ನು ದಿಕ್ಕು ತಪ್ಪಿಸುತ್ತಿವೆ. ಸಂಕೀರ್ಣ ಗಳೆಂದರೆ ರಂಜನೀಯ ಲೇಖನ ಕುಟ್ಟಿದಷ್ಟೇ ಸಲೀಸು ಆತ ಭಾವಿಸಿರೋದು ಕೊಡಗು ಜನರ ದುರಂತ. ಇಂಡಿಯಾದ ಅಪ್ರಬುದ್ಧ ಎಂಪಿಯಂತೆ ಮಾತಾಡುವ ಧ್ವನಿಯಲ್ಲಿ ದ್ವಂದ್ವವೇ ತುಂಬಿಕೊಂಡಿರುತ್ತೆ. ಜಿಲ್ಲೆಯ ಗಿರುವ ಸೂಕ್ಷ್ಮ ಪರಿಸರ ತಾಣ ನೋಟಿಫಿಕೇಷನ್ ದಲ್ಲೂ ಆತ ಅಂತದ್ದೇ ಕಮಂಗಿ ಆಟ ಆಡಲು ದಾಗಿದ್ದಾನೆ.

ೊಡಗಿನ ಜನ ತಮ್ಮ ಬದುಕುಗಳನ್ನು ಹದಗೆಡಿಸಲಿ ಯಾವ ಸೂಕ್ಷ್ಮ ಪರಿಸರ ತಾಣದ ಬಗ್ಗೆ ಆತಂಕ ಡಿದ್ದರೋ ಮೊನ್ನೆ ಕೇಂದ್ರ ಸರ್ಕಾರ ಆ ಘೋಷಣೆಯನ್ನು

ೇಲು ಅಥವಾ ಸಂಘಿ ಲೀಡರ್‌ಗಳ ಮನೆಯಲ್ಲಿ -ವಸತಿ ವ್ಯವಸ್ಥೆ ಮಾಡಲಾಗುತ್ತದೆ. ಹೊರ ನವರಾದ ಇವರು ಮೆರವಣಿಗೆ-ಸಭೆಗಳ ಮೇಲೆ ಕಲ್ಲು ದ ಮರುಕ್ಷಣವೇ ಜಾಗ ಖಾಲಿ ಮಾಡುತ್ತಾರೆ. ಗಿನಲ್ಲಿ ನಡೆದ ಟಿಪ್ಪು ಜಯಂತಿ ವೇಳೆಯ ಕಲ್ಲು ಟ; ಭಟ್ಕಳದ ಜಾತ್ರೆಯ ತೇರಿನ ಮೇಲೆ 1990ರ ದ ಆರಂಭದಲ್ಲಿ ಬಿದ್ದ ಕಲ್ಲುಗಳು, ಇದೇ ಬಂಟ್ವಾಳದಲ್ಲಿ ಪವಾಡ ನಡೆದಿದೆ... ಹೀಗೆ ಈ ಪಟ್ಟಿ ಬೆಳೆಯುತ್ತ ಗುತ್ತದೆ.



ದೆಲ್ಲ ಪೊಲೀಸ್ ಇಲಾಖೆಗೂ ಗೊತ್ತಿರುವ ಸಂಘಿ . ಆದರೆ ಖಾಕಿಗಳು ಕಾವಿ ದೀಕ್ಷೆ ಪಡೆದಂತೆ ಡ್ಯೂಟಿ ಾಡುತ್ತಿದ್ದಾರೆ. ಇದೇ ಬಂಟ್ವಾಳ-ಕಲ್ಲಡ್ಕದ ದುರಂತಕ್ಕೆ ಖ ಕಾರಣ. ಏಳು ದಶಕದ ಹಿಂದೆ ಸಂಘಿಗಳ ಗುರು' ವಿನಾಯಕ್ ಸಾವರ್ಕರ್ ಕಂಡ 'ಕನಸು' ಕರ್ನಾಟಕದಲ್ಲೂ, ಅದರಲ್ಲೂ ಕರಾವಳಿಯಲ್ಲಿ ಾಗುತ್ತಿದೆ. "ಆರ್‌ಎಸ್‌ಎಸ್ ಸಿಪಾಯಿ ಸೇನೆ, ಪೊಲೀಸ್ . ಆಡಳಿತಾಂಗದ ಆಯಕಟ್ಟಿನ ಜಾಗದಲ್ಲಿ ಕೊಳ್ಳಬೇಕು.... ಆಗ ಹಿಂದೂತ್ವ ರಾಷ್ಟ್ರದ ಗುರಿ ಾಗುತ್ತದೆ...." ಎಂದಿದ್ದ ಸಾವರ್ಕರ್. ಸಾವರ್ಕರ್ ಸೇ ಬಂಟ್ವಾಳಕ್ಕೆ ಗಂಡಾಂತರಕಾರಿಯಾಗಿದೆ. ಸಿದ್ದು ರ ತಡವಾಗಿ ಎಚ್ಚೆತ್ತುಕೊಂಡಿದೆ. ಹಲವು ವರ್ಷದಿಂದ ಕನ್ನಡದಲ್ಲಿ ಬೇರುಬಿಟ್ಟು ಸಂಘಿಗಳ ಜತೆ ಾಗಿರುವವರ ಹುಡುಕಾಟ-ವರ್ಗಾವಣೆಗೆ ಸರ್ಕಾರ ಾಗಿದೆ. ಅದು ಆದಷ್ಟು ಬೇಗ ಆಗಬೇಕು.

ಾಗೆಯೇ ಕರ್ನಾಟಕದ ದಕ್ಷಿಣ ಕರಾವಳಿಯ ಶಾಂತಿ- ಸ್ಥಕ್ಕೆ ಸಂಚಕಾರ ತರುತ್ತಿರುವ ಚಡ್ಡಿ ಚಾಂಡಾಲ ಪ್ರಚಾರಕರ ಭಟ್ಟರ ಒಡ್ಡು ಜೈಲಿಗೆ ಹಾಕಬೇಕಿದೆ. ಕರಾವಳಿ ತಣ್ಣಗಾಗುತ್ತದೆ. 1990ರ ದಶಕದಲ್ಲಿ ಭಟ್ಕಳದಲ್ಲಿ ಒಂದಿಡೀ ವರ್ಷ ಕೋಮು ಕಿಚ್ಚು-ರಕ್ತಪಾತದ ಹಿಂದೂತ್ವದ ಹಿಕಮತ್ತು ನಡೆಸಿದ್ದ ಇಂದಿನ ಸಂಸದ ಅನಂತಕುಮಾರ್ ಹೆಗಡೆ ರಾಕ್ಷಸನಾಗಿ ಬೆಳೆದಿದ್ದ, ಪೊಲೀಸ್ ಅಧಿಕಾರಿಗಳು ಆತನ ಬಗ್ಗೆ ಮೃದುವಾಗಿದ್ದರಿಂದಲೇ ಆತ ಕೊಳ್ಳಿ ದೆವ್ವದಂತಾಗಿದ್ದ. ಯಾವಾಗ ಓಂಪ್ರಕಾಶ್ (ಹಿಂದಿನ ಡಿಜಿಪಿ) ಉತ್ತರ ಕನ್ನಡಕ್ಕೆ ಎಸ್‌ಪಿ ಆಗಿಬಂದರೋ ಆಗ ಹೆಗಡೆಯ ಹಾರಾಟಕ್ಕೆ ಕಡಿವಾಣ ಬಿದ್ದಿತ್ತು, ಅನಂತಕುಮಾರ್ ಹೆಗಡೆಗೆ ಹೆಡೆಮುರಿ ಕಟ್ಟಿ ಬೆಂಡೆತ್ತಿದ್ದರು ಓಮ್. ಯಾವಾಗ ಅನಂತ ಒಳಗೆ ಬಿದ್ದನೋ ಆಗ ಉತ್ತರ ಕನ್ನಡಕ್ಕೆ ಕೋಮು ದಂಗೆಯಿಂದ ಬಿಡುಗಡೆ ಸಿಕ್ಕಿತ್ತು.


ಈಗ ಜಿಲ್ಲಾ ಪೊಲೀಸ್ ವ್ಯವಸ್ಥೆಯೂ ಕೊಂಚ ಹಳಿಗೆ ಬಂದಂತಿದೆ. ಬಂಟ್ವಾಳ ಉದ್ವಿಗ್ನತೆ ಬಹುಬೇಗ ಹತೋಟಿಗೆ ತಂದಿದ್ದಾರೆ ಪೊಲೀಸರು. ಖುದ್ದು ಐಜಿಪಿ ಹರಿಶೇಖರನ್ ಬಂಟ್ವಾಳದ ಮೇಲೆ ನಿಗಾ ಇಟ್ಟಿದ್ದಾರೆ. ಬಿಜೆಪಿಯ ಬಾಯಿಬಡುಕ ಶೋಭಾ, ಸದಾಗೌಡ, ನಳಿನ್‌ನಂಥವರು ನಾಲಿಗೆಗೆ ಲಗಾಮು ಹಾಕಬೇಕಿದೆ. ಶೋಭಾ ಕರಂದ್ಲಾಜೆಯಂತೂ ಬಾಯಿಗೆ ಬಂದದ್ದು ಬೊಗಳುತ್ತಿದ್ದಾರೆ. ತಾನೊಬ್ಬ ಸಂಸದೆ ಎಂಬುದನ್ನು ಮರೆತು ಮೂರನೇ ದರ್ಜೆಯ ಭಜರಂಗಿಯಂತೆ ಪ್ರಚೋದಕ-ಕುಚೋದ್ಯದ ಹೇಳಿಕೆ ಎಸೆಯುತ್ತಿದ್ದಾರೆ.

ತೀರ್ಥಹಳ್ಳಿಯಲ್ಲಿ ನಂದಿತಾ ಪ್ರಕರಣದಲ್ಲಿ ಮೂಗು ತೂರಿಸಿ ಅನಾಹುತ ಮಾಡಿದಂತೆಯೇ ಹಸಿಹಸೀ ಸುಳ್ಳುಗಳನ್ನು ಶೋಭಾ ಹೇಳುತ್ತಿದ್ದಾರೆ. ನೀತಿಗೆಟ್ಟ ರಾಜಕಾರಣ ನಡೆಸಿದ್ದಾರೆ. ಕೇಂದ್ರ ಮಂತ್ರಿ ಸದಾಗೌಡರಿಗಂತೂ ಇನ್ನೂ ರಾಜಕೀಯ ಗಾಂಭೀರ್ಯ, ಹುದ್ದೆಯ ಘನತೆ-ಗೌರವವೇ ತಿಳಿದಿಲ್ಲ. ದಕ್ಷಿಣ ಕನ್ನಡದ ಪರಿಸ್ಥಿತಿ ಇನ್ನಷ್ಟು ಕೆಡಿಸುವ ಹುಚ್ಚು ಮಾತು ಸದಾಗೌಡರು ಆಡುತ್ತಿರುವುದು ನಾಚಿಕೆಗೇಡು. ಸಂಸದ ನಳಿನ್ ತನ್ನ ಕ್ಷೇತ್ರ ಶೋಭಾ ಅತಿಕ್ರಮಿಸುತ್ತಿದ್ದಾರೆಂಬ ಆತಂಕ ಶುರುವಾಗಿದೆ. ಹಾಗಾಗಿ ಆತ ಶೋಭಾ ಜತೆ ಪೈಪೋಟಿಗೆ ಇಳಿದಂತೆ ಹಾರಾಡುತ್ತಿದ್ದಾರೆ. ಇದು ಬಂಟ್ವಾಳದ ನೆಮ್ಮದಿಗೆ ಭಂಗ ತರುತ್ತಿದೆ.

ಹೆಣ ಕೆಡವಿ ಓಟ್‌ಬ್ಯಾಂಕ್ ನಿರ್ಮಿಸಿಕೊಳ್ಳುವ ಸಂಘ ಪರಿವಾರದ ಪಾತಕ ರಾಜಕಾರಣಕ್ಕೆ ಕಡಿವಾಣ ಹಾಕಬೇಕಿದೆ. ಕಾಂಗ್ರೆಸ್‌ನ ತೂಕದ ಲೀಡರ್‌ಗಳಾದ ಆಸ್ಕರ್, ಮೊಯ್ಲಿ, ಪೂಜಾರಿಗಳು ನಾಯಿ-ನರಿಗಳಂತೆ ಕಚ್ಚಾಡುತ್ತ ದಕ್ಷಿಣ ಕನ್ನಡವನ್ನು ಚಡ್ಡಿಗಳಿಗೆ ಬಿಟ್ಟುಕೊಟ್ಟಿದ್ದಾರೆ.

ಕೇಸರಿ ಬೆಕ್ಕಿಗೆ ಗಂಟೆ ಕಟ್ಟೋರು ಯಾರು?

■ ವರದಿಗಾರ



ಆ ಮೂರು ದಿನದ ಚಿಂತಿ

ಡಾ. ಎಚ್. ಎಸ್. ಅನುಪಮಾ

ಮನುಷ್ಯ ಸೃಷ್ಟಿ, ಹೆಣ್ಣಾದ ಸಾಲ ಆಗುಹೋಗುಗಳ ಮೂಲವಾದ ಕ್ರಿಯೆ ಋತುಸ್ರಾವ. ಆದರೆ ಆ ಮೂರು ದಿನಗಳ ಕುರಿತು ಮಾನವ ಸಮಾಜಕ್ಕಿರುವ ಅಜ್ಞಾನ, ಅಸಹ್ಯ ಹೇಳಲಸಾಧ್ಯ. ಆ ಕುರಿತು ಹೆಣ್ಮಕ್ಕಳೂ ಮನಬಿಚ್ಚಿ ಮಾತಾಡುವುದಿಲ್ಲ, ಮುಟ್ಟು ಎಂದು ಹೇಳುವುದೇ ಮರ್ಯಾದೆಯ ಪ್ರಶ್ನೆ, ಅದೂ ಗಂಡಸರ ಎದುರಿಗಂತೂ ಆ ಮಾತು ಎತ್ತುವುದೇ ನಿರ್ಲಜ್ಜತನ ಎಂಬ ಭಾವನೆ ಎಷ್ಟರಮಟ್ಟಿಗೆ ಬೇರೂರಿದೆಯೆಂದರೆ ಸ್ವತಃ ಮುಟ್ಟಿನ ದಿನಗಳಲ್ಲಿ ನೋಯುವ, ಬೇಯುವ, ಆ ಕಾರಣಕ್ಕಾಗಿ ನಿರ್ಲಕ್ಷ್ಯಕ್ಕೆ ಗುರಿಯಾಗಿ 'ಹೊರಗಿರುವ' ಹೆಣ್ಮಕ್ಕಳು ಅದನ್ನೊಂದು ಅತ್ಯಂತ ಖಾಸಗಿ ವಿಷಯವಾಗಿಸಿಕೊಂಡಿದ್ದಾರೆ. ಸಮಸ್ಯೆಗಳನ್ನು ವೈದ್ಯರ ಬಳಿಯೂ ಹೇಳುವುದಿಲ್ಲ. ಹೀಗೆ ಮುಟ್ಟು 'ಹುಶ್ ಹುಶ್' ಸಂಗತಿಯಾದ ಕಾರಣಕ್ಕೇ ಮುಟ್ಟಾದ ಮೂರು ದಿನ ಅವರಿಗೇನಾಗುತ್ತದೆ, ರಕ್ತಹರಿವನ್ನು ಹೇಗೆ ಮ್ಯಾನೇಜ್ ಮಾಡುತ್ತಾರೆ, ಅವರ ಸಮಸ್ಯೆಗಳೇನು ಎಂಬ ಬಗೆಗೆ ಸಮಾಜ ಇದುವರೆಗೂ ಯೋಚಿಸಿರಲಿಲ್ಲ.

ಈಗ ಅಂತಹ ಕಾಲ ಬಂದಿದೆ. ಸಮಾಜ ಮುಟ್ಟಿನ ಬಗೆಗಷ್ಟೆ ಅಲ್ಲ, 'ಮುಟ್ಟಿನ ಸ್ಪಾಲೆ' ಕುರಿತೂ ಚಿಂತಿಸುತ್ತಿದೆ. ಏಕೆಂದರೆ 2000ನೇ ಇಸವಿಯಲ್ಲಿ ಆಸ್ಟ್ರೇಲಿಯಾ ಸರ್ಕಾರ ಮುಟ್ಟಿನ ಟ್ಯಾಂಪೂನುಗಳಿಗೆ 12% ಜಿಎಸ್ಟಿ ವಿಧಿಸಿದಾಗ; ಬ್ರಿಟನಿನಲ್ಲಿ 2014ರಲ್ಲಿ ಪ್ಯಾಡು-ಟ್ಯಾಂಪೂನುಗಳ ಮೇಲೆ ವ್ಯಾಟ್ ವಿಧಿಸಿದಾಗ ಮಹಿಳೆಯರಿಂದ 'ಏಕ್ಸ್ ದಿ ಟ್ಯಾಂಪೂನ್ ಟ್ಯಾಕ್ಸ್', 'ಸ್ಟಾಪ್ ಟ್ಯಾಕ್ಸಿಂಗ್ ಪಿರಿಯಡ್ಸ್' ಮುಂತಾದ ಅಭಿಯಾನಗಳು ನಡೆದವು. ಸರ್ಕಾರ, ಸಮಾಜಗಳು ಮೈ ಕೊಡವಿ ಎಚ್ಚೆತ್ತವು. ಈಗ ಭಾರತದಲ್ಲು ಸ್ಯಾನಿಟರಿ ನ್ಯಾಪ್ಕಿನ್‌ಗಳು 12.5% ಜಿಎಸ್ಟಿಗೆ ಒಳಗಾಗಿ ಇನ್ನಷ್ಟು ತುಟ್ಟಿಯಾಗಿ ವಿಸ್ತೃತ ಚರ್ಚೆ-ಹೋರಾಟ-ಅಭಿಯಾನಕ್ಕೆ ದಾರಿಯಾಗಿವೆ.

ಏನಾದರಿರಲಿ, ಅಧಿಕ ತೆರಿಗೆ ವಿಧಿಸುವ ಮೂಲಕ ಇಂಥದೊಂದು ಮುಕ್ತ ಚರ್ಚೆ ಏರ್ಪಡಲು ಸಹಾಯ ಮಾಡಿದವರಿಗೆ ಧನ್ಯವಾದಗಳು.

ಈ ಮೊದಲು ಆ ಮೂರು ದಿನ ಹೇಗೆ ನಿಭಾಯಿಸುತ್ತಿದ್ದರು? ಹೊರಗೆ ಉಳಿದು ಏಕಾಂಗಿಯಾಗಿ ಆರಾಮವಾಗಿ ಮೂರು ದಿನ ಕಳೆಯುತ್ತಿದ್ದರೋ ಅಥವಾ ಹೊರಗೆ ಗೇಯಬೇಕಾದ ಕಷ್ಟಕುಲದ ಶ್ರಮಿಕ ಹೆಣ್ಮಕ್ಕಳು ಅದೊಂದು ಅನಿವಾರ್ಯ ಕರ್ಮವೆಂದು ಹೊರೆ ಹೊತ್ತು ತಿರುಗುತ್ತಿದ್ದರೋ? ಯಾರಿಗೂ ಗೊತ್ತಿಲ್ಲ. ಯಾಕೆಂದರೆ ಯಾವ ಅಜ್ಜಿ ಮುತ್ತಜ್ಜಿಯೂ ವಿವರವಾಗಿ ಇವನ್ನೆಲ್ಲ ಹೇಳಲೇ ಇಲ್ಲ. ಒಂದಾನೊಂದು ಕಾಲದಿಂದ ಮುಟ್ಟಿನ ಅವಧಿಯಲ್ಲಿ ಸಾಮಾನ್ಯ ಹೆಣ್ಮಕ್ಕಳ ಪರಿಸ್ಥಿತಿ ಏನಾಗಿತ್ತು ಎಂದು ಯಾವ ಸಾಹಿತ್ಯವೂ ಉಲ್ಲೇಖಿಸಿಲ್ಲ. ವರ್ಷಗಟ್ಟಲೆ ಕಾಡಿನಲ್ಲುಳಿದ, ತಿಂಗಳುಗಟ್ಟಲೆ ರಾವಣ ನಗರದಲ್ಲಿದ್ದ ಸೀತೆ ಮುಟ್ಟಾದಾಗ ಏನು ಮಾಡಿದಳೋ ರಾಮಾಯಣ ತಿಳಿಸುವುದಿಲ್ಲ.

ಅಮ್ಮ ಹರಿದ ತನ್ನ ಮೆತ್ತನ್ನ ಹಳೆ ಸೀರೆಯನ್ನು ಚೌಕುಳಿ ಆಕಾರಕ್ಕೆ ಹರಿದು, ಮಡಚಿ ತೊಡೆ ಸಂದಿ ಬೀಳದಂತೆ ಇಟ್ಟುಕೋ ಎಂದದ್ದು ಬಹುಶಃ ಮುಟ್ಟಿನ ಸ್ರಾವವನ್ನು ಹೇಗೆ ನಿಭಾಯಿಸುವುದು ಎನ್ನುವ ಕುರಿತು ಹೇಳಿಕೊಡುವ ಮೊದಲ ಮತ್ತು ಕೊನೆಯ ಪಾಠ. ಮೊದಮೊದಲ ದಿನಗಳಲ್ಲಿ ಅಮ್ಮನ ಮೇಲ್ವಿಚಾರಣೆ ಕೊಂಚಮಟ್ಟಿಗೆ ಇರುತ್ತದಾದರೂ ಬರಬರುತ್ತ ಅದು ಪ್ರತಿ ತಿಂಗಳ ಮಾಮೂಲಿ ರೇಜಿಗೆ, ರಗಳೆಯೆನಿಸಿಬಿಡುತ್ತದೆ. ಮೂರು ಪ್ಲಸ್ ಎರಡು ದಿನಗಳಲ್ಲಿ ತಾನು ಮೈಲಿಗೆಯವಳು ಎಂದು ಅವಳನ್ನು ನಂಬಿಸಿ ಮತ್ತಷ್ಟು ಕೀಳರಿಮೆ ಹುಟ್ಟಿಸಲಾಗುತ್ತದೆ. ಅಕಸ್ಮಾತ್ ಉಟ್ಟ ಬಟ್ಟೆ ರಕ್ತಕಲೆಯಾದರೆ ಅವಮಾನ. ಕನಿಷ್ಠ ಶುಚಿ, ಕಾಮನ್‌ಸೆನ್ಸ್ ಇಲ್ಲದ ಹೆಣ್ಣೆಂಬ ತಿರಸ್ಕಾರ. ಖಾಸಗಿ ಸ್ಥಳವಿರದ ಕಡೆ ಎಲ್ಲೆಲ್ಲೋ ಯಾವ್ಯಾವಾಗಲೋ ಮುಟ್ಟಾಗಿಬಿಟ್ಟರೆ ಕಂಗಾಲು. ಕರ್ಚೀಫು, ಕೈಗೆ ಸಿಕ್ಕ ಬಟ್ಟೆ, ಕಾಗದ, ಹತ್ತಿ ಏನೇನನ್ನೆಲ್ಲ 'ಪ್ಯಾಡು'ಗಳಾಗಿಸಬೇಕಾದ ಅನಿವಾರ್ಯತೆ. ಮಳೆಗಾಲದಲ್ಲಿ ಬಟ್ಟೆ ಒಣಗದೇ ಕಮಟು ವಾಸನೆ ಸೂಸುವಾಗ ಎಲ್ಲರೆದುರಿಗೆ ಅದನ್ನುಟ್ಟು ಹೋಗುವುದು ಹೇಗೆಂದು, ಅಕಸ್ಮಾತ್ ಬಿಸಿಲು ಮುಖ ಕಂಡಾಗ ಹೊರಗೆ ಒಣಗಿಸುವುದು ಹೇಗೆಂದು ಮುಜುಗರ. ಕುಡಿಯಲೇ ನೀರು ಸಿಗದ ಊರುಗಳಲ್ಲಿ ಮುಟ್ಟಿನ ಬಟ್ಟೆ ತೊಳೆಯಲು ಅನುಭವಿಸಬಹುದಾದ ಕಷ್ಟ ಊಹಾತೀತ. ಹೊರಗೆ ತಿರುಗಾಡಲು ಹೋಗುವಾಗ, ಶಾಲೆಕಾಲೇಜುಕಚೇರಿಗೆ ಹೋಗುವಾಗ ಬಟ್ಟೆ ಬದಲಿಸಲು ಆಗದೇ, ಬದಲಿಸಿದರೆ ತೊಳೆಯಲಾಗದೇ, ಬಳಸಿದ್ದು ಬ್ಯಾಗಿನೊಳಗೆ ಇಟ್ಟುಕೊಳ್ಳಲಾಗದೆ, ಬಿಸಾಡಲಾಗದೇ... ಅಯ್ಯಯ್ಯಯ್ಯೋ... ಯಾಕಾದರೂ ಈ ಕಾಲದಲ್ಲಿ ಹೊರಬಿದ್ದೆನೋ, ಯಾಕಾದರೂ ಹುಡುಗಿಯಾದೆನೋ ಅನಿಸುವಂತ ಮೂರು ದಿನದ ಅಪರಾಂಪರ ಕಷ್ಟ ಪರಂಪರೆ! ಇದು ಅನಾದಿಯಿಂದ ಹೆಣ್ಣು ಎದುರಿಸಿಕೊಂಡುಬಂದ ಒಳಸಂಕಟಗಳ ಸರಮಾಲೆ.

ಹೀಗಿರುತ್ತ ಬೇಕಾದಾಗ ಬಳಸಿ ಬಿಸಾಡುವ ಸ್ಯಾನಿಟರಿ ನ್ಯಾಪ್ಕಿನ್ ಬಳಕೆಗೆ ಬಂದಾಗ ಸ್ವರ್ಗದಿಂದಿಳಿದು ಬಂದ ಒಂದು ವರದಂತೆ ಅದು ಹೆಣ್ಮಕ್ಕಳಿಗೆ ಕಂಡಿದ್ದರೆ ಅಚ್ಚರಿಯಿಲ್ಲ. ಹೆಣ್ಣು ಕಲಿಕೆ-ದುಡಿಮೆಗೆ ಮನೆಯಿಂದ ಹೊರಬೀಳುವುದು ಹೆಚ್ಚಾಗುತ್ತ ಹೋದಂತೆ ಯಾವ ಕಾನೂನೂ ಇಲ್ಲದೆ, ಯಾವ ಜಾಹೀರಾತೂ ಇಲ್ಲದೆ, ಹಳ್ಳಿ ದಿಲ್ಲಿಯೆನ್ನದೆ ಸರಸರ ಸ್ಯಾನಿಟರಿ ಪ್ಯಾಡಿನ ಜನಪ್ರಿಯತೆ ಏರಿಬಿಟ್ಟಿತು. ಅದರ ಇರವು-ಬಳಕೆ ಕುರಿತು ಎಲ್ಲ ವರ್ಗ-ವಯೋಮಾನದ ಹೆಣ್ಮಕ್ಕಳೂ ಅರಿತರು. ಎಲಎಲಾ! ಎಷ್ಟು ಸುಲಭ, ಎಷ್ಟು ನಿರಾಳ! ಶಿಕ್ಷಣ-ಉದ್ಯೋಗವೆಂದು ಹೊರಗೆ ಓಡಾಡುವವರಿಗೆ, ನೀರಿರುವವರಿಗೆ, ಇಲ್ಲದವರಿಗೆ, ತಿರುಗಾಟ ಅನಿವಾರ್ಯವಾದವರಿಗೆ ಬಳಸಿ ಬಿಸಾಡುವ, ಸುಲಭದಲ್ಲಿ ಹೊತ್ತೊಯ್ಯಬಲ್ಲ ನ್ಯಾಪ್ಕಿನ್ ತುಂಬ ಆಪ್ತವೆನಿಸಿ ಸಮಾಧಾನದ ನಿಟ್ಟುಸಿರು ಬಿಡುವಂತೆ ಮಾಡಿತು. ಅಪಾಯವೋ, ನಿರಪಾಯವೋ, ಹಿಂದೆಮುಂದೆ ಯೋಚಿಸದೇ ಅದರ ಸುಲಭ ಬಳಕೆಗೆ ಎಲ್ಲರೂ ಮಾರುಹೋದರು.

ಅದು ಹೆಣ್ಮಕ್ಕಳನ್ನು ಬಾಧಿಸುತ್ತಿದ್ದ ಪ್ರಜನನ ಅಂಗಗಳ ಸೋಂಕುರೋಗದ ಪ್ರಮಾಣವನ್ನು ಗಮನಾರ್ಹವಾಗಿ ಕುಗ್ಗಿಸಿತು. ಆ ಮೂರು ದಿನಗಳಲ್ಲೂ ಧೈರ್ಯವಾಗಿ ಹೊರಹೋಗಲು, ಮಾಮೂಲಿಯಾಗಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಆತ್ಮವಿಶ್ವಾಸ ತುಂಬಿತು. 2011ರ ಸರ್ವೇ ಪ್ರಕಾರ ಈಗ ಭಾರತದ 12% ಹೆಣ್ಮಕ್ಕಳು ಸ್ಯಾನಿಟರಿ ಪ್ಯಾಡ್ ಬಳಸುತ್ತಿದ್ದಾರೆ. ಈ ಆರು ವರ್ಷಗಳಲ್ಲಿ ಬಳಕೆದಾರರ ಸಂಖ್ಯೆ ಹೆಚ್ಚಾಗಿರಬಹುದು. ಈಗ ಒಂದಷ್ಟು ಮಹಿಳೆಯರಿಗೆ ಅದು ಅನಿವಾರ್ಯ ಅನಿಸಿರಲೂಬಹುದು.

ಆದರೆ ನಡುನಡುವೆ ಸ್ಯಾನಿಟರಿ ನ್ಯಾಪ್ಕಿನ್ ಬಳಕೆಯ ಮಿತಿಗಳು, ಅದರಿಂದಾಗಬಹುದಾದ ತೊಂದರೆಗಳ ಬಗೆಗೆ ದೀರ್ಘ ಚರ್ಚೆ, ವಾದವಿವಾದವೂ ನಡೆಯಿತು. ಅದು ಈಗಲೂ ನಡೆಯುತ್ತಿದ್ದು ಅದನ್ನು ಗಮನಿಸಬಹುದು.

ಸ್ಯಾನಿಟರಿ ಪ್ಯಾಡಿನ ಕುರಿತು ಇರುವ ಮುಖ್ಯ ತಕರಾರುಗಳು ಹೀಗಿವೆ:

- ಅದು ತುಟ್ಟಿ. ನಮ್ಮಲ್ಲಿ ಲಭ್ಯವಿರುವ ಉತ್ತಮ ನ್ಯಾಪ್ಕಿನ್‌ಗಳು ಎಷ್ಟು ತುಟ್ಟಿಯೆಂದರೆ ಮುಕ್ಕಾಲುಪಾಲು ಜನ 'ಬಡತನ ರೇಖೆ' ಹತ್ತಿರ ಬದುಕುವ ಭಾರತೀಯರಿಗೆ ಅದು ಕೈಗೆಟುಕದಂತಾಗಿದೆ. ಈಗ ಭಾರತದ 35.5 ಕೋಟಿ ಮುಟ್ಟಾಗುವ ಮಹಿಳೆಯರಲ್ಲಿ 70% ಮಹಿಳೆಯರು ಅಷ್ಟು ದುಡ್ಡು ಕೊಟ್ಟು ಪ್ಯಾಡ್ ಕೊಳ್ಳಲು ತಾವು ಸಮರ್ಥರಲ್ಲ ಎಂದೇ ಹೇಳಿದ್ದಾರೆ.


- ಮತ್ತೊಂದು ಸಮಸ್ಯೆ ಬಳಸಿದ ಪ್ಯಾಡಿನ ವಿಲೇವಾರಿಯದು. ನಾವು ಕೊಳ್ಳುವ ಬ್ರ್ಯಾಂಡುಗಳ ಪರಿಸರ ಸ್ನೇಹಿ ವಿಲೇವಾರಿಯೆಂದರೆ ಬಳಸಿದ ನಂತರ ಪೇಪರಿನಲ್ಲಿ ಸುತ್ತಿ ಸಂಗ್ರಹಿಸಿ ಭೂಮಿಯೊಳಗೆ ಹೂಳುವುದು. ಪ್ರತಿತಿಂಗಳು ಭಾರತ ದೇಶ ಒಂದು ಬಿಲಿಯನ್ (100 ಕೋಟಿ) ಕರಗದ ನ್ಯಾಪ್ಕಿನ್ ಪ್ಯಾಡುಗಳನ್ನು, 9000 ಟನ್ ಕರಗದ ನ್ಯಾಪ್ಕಿನ್ ಕಸವನ್ನು ತನ್ನ ಪರಿಸರಕ್ಕೆ ಸೇರಿಸುತ್ತಿದೆ! ಮೊದಲೇ ನಮ್ಮ ಕಸ ವಿಲೇವಾರಿ ಅಭ್ಯಾಸಗಳು ಆರೋಗ್ಯಕರವಾಗಿಲ್ಲ, ಬಳಸಿ ಬಿಸಾಡುವ ವಸ್ತುವನ್ನು ಎಲ್ಲಿ ಬಿಸಾಡಿದೆ, ಏನಾಯಿತು ಎಂಬ ಬಗೆಗೆ ನಾವು ಯೋಚಿಸುವರೇ ಅಲ್ಲ, ಎಲ್ಲೆಂದರಲ್ಲಿ ನ್ಯಾಪ್ಕಿನ್ ಬಿಸಾಡಿ, ಹಾದಿಬೀದಿಗಳಲ್ಲಿ ನಾಯಿಗಳು ಎಳೆದಾಡಿ, ಚಿಂದಿ ಆಯುವವರ ಕೈಗಳ ಗಲೀಜು ಮಾಡಿ, ಸಾರ್ವಜನಿಕ ಟಾಯ್ಲೆಟ್ಟಿನಲ್ಲಿ ತುಂಬಿ ಅವು ಕಟ್ಟಿಕೊಳ್ಳುವಂತಾಗಿ - ನ್ಯಾಪ್ಕಿನ್ ಸೃಷ್ಟಿಸುವ ಅಪಾಯ, ಅಧ್ವಾನಗಳೇನು ಕಡಿಮೆಯಿಲ್ಲ. ನಗರಗಳಲ್ಲಿ ಹೆಸರಿಗಾದರೂ ಕಸ ವಿಲೇವಾರಿಗೊಂದು ವ್ಯವಸ್ಥೆಯಿದೆ. ಆದರೆ ಶಾಲಾಕಾಲೇಜು-ಹೋಟೆಲು-ಮತ್ತಿತರ ಕಡೆಗಳಲ್ಲಿ 'ಡಬ್ಬ'ಕ್ಕೆ ತುಂಬಿದ ನ್ಯಾಪ್ಕಿನ್ ಆಮೇಲೆ ಏನಾಗುತ್ತಿದೆ? ಹಳ್ಳಿಗಳ ದೇಶ ಭಾರತದಲ್ಲಿ ಗ್ರಾಮೀಣ ಕಸ ವಿಲೇವಾರಿಗೆ ಯಾವ ಕಾಯಂ ವ್ಯವಸ್ಥೆಯೂ ಇಲ್ಲ, ಅದರ ಕುರಿತು ಯಾವ ಸ್ವಚ್ಛ ಭಾರತ ಮಿಷನೂ ತಲೆ ಕೆಡಿಸಿಕೊಂಡಿಲ್ಲ. ಹಳ್ಳಿಗಳಲ್ಲಿ ಊರ ಹೊರಗಿನ ರಸ್ತೆ, ಮೈದಾನ, ತಿಪ್ಪೆ ಕಾಡು, ಗುಡ್ಡಗಳಲ್ಲಿ ಪ್ಲಾಸ್ಟಿಕ್ಕೂ, ಅದರೊಳಗೆ ತುಂಬಿ ಚೆಲ್ಲಾಡಲ್ಪಟ್ಟ ಕಸದಲ್ಲಿ ನ್ಯಾಪ್ಕಿನ್ನುಗಳೂ ಕಾಣುತ್ತವೆ. ನ್ಯಾಪ್ಕಿನ್ನುಗಳು ಮಣ್ಣಲ್ಲಿ ಕರಗಲಾರವು. ಏಕೆಂದರೆ ಅವು ಲೀಕ್ ಪ್ರೂಫ್ ಆಗಲು ಪ್ಲಾಸ್ಟಿಕ್ ಹೊರಕವಚ ಹೊಂದಿವೆ. ಎಂದೇ ವರ್ಷಾನುಗಟ್ಟಲೆ ಹಳೆಯ ಮುಟ್ಟಿನ ಪಳೆಯುಳಿಕೆಗಳನ್ನು ನ್ಯಾಪ್ಕಿನ್ನುಗಳ ರೂಪದಲ್ಲಿ ಕಾಣುವಂತಾಗಿದೆ. ಅವನ್ನು ಸುಡುವುದೂ ಅಪಾಯ, ಯಾಕೆಂದರೆ ಪ್ಯಾಡಿನಲ್ಲಿರುವ ರೇಯಾನ್, ಡಯಾಕ್ಸಿನ್ ಎಂಬ ವಿಷಕಾರಕವನ್ನು ಹೊಂದಿದೆ. ಪ್ಯಾಡನ್ನು ಸುಟ್ಟಾಗ ಹೊರಸೂಸುವ ಡಯಾಕ್ಸಿನ್ ಪರಿಸರಕ್ಕೆ ಹಾನಿಕಾರಕವಾಗಿದೆ. ಅಕಸ್ಮಾತ್ ಸೋಂಕಿರುವ ರಕ್ತದ ಪ್ಯಾಡನ್ನು ತಿನ್ನುವುದು ಪಶುಪಕ್ಷಿ ಕ್ರಿಮಿಕೀಟಗಳಿಗೂ ಅಪಾಯಕಾರಿಯಾಗಿದೆ.


- ನ್ಯಾಪ್ಕಿನ್ ತಯಾರಿಯ ಬಗೆಗೆ ಬಹುಪಾಲು ತಿಳಿದಿರುವುದಿಲ್ಲ, ಅದನ್ನು ಕಂಪನಿಗಳು ತಿಳಿಸು[illegible] ಇಲ್ಲ, ಅದರಲ್ಲಿ ಬಳಸುವ ಹಲವು ಕಚ್ಚಾ [illegible] ಪೆಟ್ರೋಲಿಯಂ ಹಾಗೂ ಅರಣ್ಯ ಉಪ ಉತ್[illegible] ಹತ್ತಿ, ಪ್ಲಾಸ್ಟಿಕ್ ಮತ್ತು ಮರದ ಹೊಟ್ಟು-ತಿರು[illegible] ತಯಾರಾಗುವ ಸಿಂಥೆಟಿಕ್ ರೆಯಾನ್ ಬಳಸಿ [illegible] ತಯಾರಿಸಲಾಗುತ್ತದೆ. ನ್ಯಾಪ್ಕಿನ್ ಬಳಕೆಯಿಂದ [illegible] ಸೋಂಕು, ತುರಿಕೆ, ಬಿಳಿ ಮುಟ್ಟು, ಫಂಗಸ್ [illegible] ಉಂಟಾಗುವುದು ಈ ಕಚ್ಚಾವಸ್ತುಗಳಿಂದ. ಅದರ[illegible] ಹೀರಿಕೊಳ್ಳುವುದು ವೇಗವಾಗಲೆಂದು ಬ[illegible] ಪಾಲಿಅಕ್ರಿಲೇಟ್ ಜೆಲ್ ಮತ್ತಿತರ ರಾಸಾಯನಿಕಗಳು[illegible] ಪ್ರೂಫ್ ಆಗಲು ಬಳಸುವ ಪಾಲಿ ಇಥಿ[illegible] ಪರಿಮಳಕ್ಕೆಂದು ಬಳಸುವ ರಾಸಾಯನಿಕಗ[illegible] ದುಷ್ಪರಿಣಾಮಗಳಿಗೆ ಕಾರಣವಾಗಿವೆ. ಅಲ್ಲದೆ ಒಬ್ಬ[illegible] ಜೀವಿತಾವಧಿಯ 30-40 ವರ್ಷ ನಿರಂತರ ದೇ[illegible] ಸಂಪರ್ಕಕ್ಕೆ ಬರುವುದರಿಂದ, ಅದು ಯೋನಿಯ[illegible] ಲೋಳ್ಪೊರೆಯ ಸಂಪರ್ಕಕ್ಕೆ ಬರುವುದರಿಂದ [illegible] ರೋಗಕಾರಕವಾಗಬಹುದು ಎಂಬ ಶಂಕೆಯಿದೆ.

ಈ ವಾದಗಳಲ್ಲಿ ಹುರುಳಿರಬಹುದು, ಇಲ್ಲದಿರಬ[illegible] ಆದರೆ ಹೆಣ್ಮಕ್ಕಳು ತುಟ್ಟಿಯಾದರೂ ನ್ಯಾಪ್ಕಿನ್ ಕೊ[illegible] ಬಳಸಿ, ಹೇಗೋ ವಿಲೇವಾರಿ ಮಾಡಿ ಎಷ್ಟು ಒಗ್ಗಿದ್ದಾ[illegible] ಅವರು ಮರಳಿ 'ಬಟ್ಟೆಯ ದಿನ'[illegible] ಹೋಗಲಾರದವರಾಗಿದ್ದಾರೆ. ನಾವು ದಿನೇದಿನೇ [illegible] ಬಿಸಾಡುವ' ವಸ್ತುಗಳ ದಾಸರಾಗುತ್ತಿದ್ದೇವೆ. [illegible] ಪ್ರಮಾಣದ ಮರುಬಳಸಲಾಗದ, ಪರಿ[illegible] ಅಪಾಯಕಾರಿಯಾದ ಕಸ ಉತ್ಪತ್ತಿ ಮಾಡುತ್ತಿದ್ದೇವೆ. [illegible] ಒಳಿತು ಕೆಡುಕುಗಳ ಬಗೆಗೆ ಕಿಂಚಿತ್ ಯೋಚಿಸದ[illegible] ಬಟ್ಟೆಯಿಂದ ಪ್ಯಾಡಿಗೆ ಬಂದಿದ್ದೇವೆ. ಆ[illegible] ಮರುಚಿಂತಿಸಬೇಕಾದ ಹೊತ್ತು ಬಂದಿದೆ.

ಹಾಗಾದರೆ ಪರಿಸರ ಸ್ನೇಹಿಯಾಗಿ ಹೇಗೆ 'ಮು[illegible] ನಿಭಾಯಿಸುವುದು? ಇಡಿಯ ಮಹಿಳಾ ಸಂಕು[illegible] ಅನ್ವಯವಾಗುವ ಏಕೈಕ ಪರಿಸರ ಸ್ನೇಹಿ, ದೇಹ [illegible] ವಿಧಾನ ಇಲ್ಲ, ಅವರವರ ಆದ್ಯತೆ, ಅವಶ್ಯಕತೆ, ವಯೋ[illegible] ಕೊಳ್ಳುವ-ಬಯಸುವ ಸಾಮರ್ಥ್ಯದ ಮೇಲೆ [illegible] ವಿಧಾನಗಳು ಲಭ್ಯವಿವೆ.

- ಯಾರಿಗೆ ಸಮಯ, ನೀರು, ಸಹನೆ ಲಭ[illegible]








ಮತ್ತು ಸಾಧ್ಯವೋ ಅವರು ಹಳೆಯ ವಿಧಾ[illegible] ಮರಳಬಹುದು. ಶುಭ್ರ, ಒಣ, ಹತ್ತಿಯ ಬಟ್ಟೆ[illegible] ಬಳಸಬಹುದು.

- ಮದುವೆಗಿಂತ ಮುನ್ನ ಬಳಸಲು ಯ[illegible] ಸಮುದಾಯಕ್ಕೆ ನ್ಯಾಪ್ಕಿನ್ ಸೂಕ್ತವಾಗಿದೆ. ಅದಕ್ಕಾಗಿ ಸ[illegible] ಸಹಾಯಧನ ನೀಡಿ ಪರಿಸರಸ್ನೇಹಿ ನ್ಯಾಪ್ಕಿನ್‌ಗಳನ್ನು[illegible] ಕಡಿಮೆ ದರದಲ್ಲಿ ತಯಾರಿಸಲು ಉತ್ತೇಜಿಸಬೇ[illegible] ಅವಶ್ಯವಾಗಿ ನ್ಯಾಪ್ಕಿನ್‌ಗಳಿಗೆ ಸೂಕ್ತ ವಿಲೇವಾರಿ ವ[illegible] ತಿಳಿಸಿ ಹೇಳಬೇಕು. ತಮಿಳುನಾಡಿನ ಕೊಯಮತ್ತೂ[illegible] ಅರುಣಾಚಲಂ ಮುರುಗನಾಥನ್, ಗೋವಾದ ಪೀ[illegible] ಹಳ್ಳಿಯ ಸ್ವಸಹಾಯ ಸಂಘ ಸಹೇಲಿ ಮತ್ತಿತರರು ಕ[illegible] ಬೆಲೆಯ ಪರಿಸರ ಸ್ನೇಹಿ, ಮಣ್ಣಿನಲ್ಲಿ ಕರಗುವ ನ್ಯಾಪ್ಕಿನ್ನು[illegible] ತಯಾರಿಸುತ್ತಿದ್ದಾರೆ. ಗೋವಾ ಹಳ್ಳಿಯ ಮಹಿಳೆಯ[illegible] ದಿನದಲ್ಲಿ ಮಣ್ಣಿನಲ್ಲಿ ಕರಗುವ ನ್ಯಾಪ್ಕಿನ್ ತಯಾರಿಸಿರು[illegible] ಹೇಳಿದ್ದಾರೆ. ಈ ಕುರಿತ ಸತ್ಯಾಸತ್ಯತೆಯ[illegible] ಸಂಶೋಧನೆಗೊಳಪಡಿಸಿ ಸರ್ಕಾರ ಸಹಾಯಧನ [illegible] ಉತ್ತೇಜಿಸಬೇಕು. ಸ್ಯಾನಿಟರಿ ನ್ಯಾಪ್ಕಿನ್‌ನಂತೆ ಮ[illegible] ಬಳಸುವ ಪ್ಯಾಡುಗಳಿಗೂ ಈ ಮಾತು ಅನ್ವಯಿಸು[illegible]

- ಯೋನಿಯೊಳಗಿಟ್ಟುಕೊಳ್ಳುವ ಸಣ್ಣ ಕೊಳವೆಯ[illegible] ಟ್ಯಾಂಪೂನುಗಳು ಬಳಕೆಯಲ್ಲಿವೆ. ಆದರೆ ಕನ್ಯೆಯರಿಗೆ [illegible] ಸೂಕ್ತವಲ್ಲ, ಅಲ್ಲದೆ ಅದಕ್ಕೆ ಬಳಸುವ ಕಚ್ಚಾವ[illegible] ಸ್ಯಾನಿಟರಿ ಪ್ಯಾಡಿನದೇ ಆಗಿದ್ದು ವಿಲೇವಾರಿ ಸವಾಲಿನ[illegible]

ಮೋದಿ ಸರ್ಕಾರದ ಕೃಷಿ ವಿಮಾ ಯೋಜನೆಗಳು–ಕಾರ್ಪೋರೇಟುಗಳಿಗೆ ಒಳ್ಳೆ ಕೊಯ್ಲು?




■ ಸುರೇಶ್ ಭಟ್ ಬಾಕ್ರಬೈಲ್

ತಾನು ವಿಭಿನ್ನ ಪಕ್ಷವೆಂದು ಹೇಳಿಕೊಂಡು ಅಧಿಕಾರಕ್ಕೆ ...ದಿರುವ ಬಿಜೆಪಿಯ ಮೋದಿ ಸರ್ಕಾರ ಆರಂಭದಿಂದಲೂ ...ರನ್ನು ಸಂಪೂರ್ಣವಾಗಿ ಕಡೆಗಣಿಸಿ ಕಾರ್ಪೋರೇಟುಗಳನ್ನೇ ...ಸುವುದರಲ್ಲಿ ತೊಡಗಿರುವಂತಿದೆ. ಇದಕ್ಕೆ ಪುರಾವೆ ...ಬಂತೆ ಅದರ ನೂತನ ಕೃಷಿ ವಿಮಾ ಯೋಜನೆಗಳ ...ಲಿ ಫಲಾನುಭವಿಗಳು ಕಾರ್ಪೋರೇಟು ಕುಳಗಳು ಎಂಬ ...ೋಪಗಳು ಕೇಳಿಬರತೊಡಗಿವೆ. ಆ ಆರೋಪಗಳನ್ನು ...ವರವಾಗಿ ಪರಿಶೀಲಿಸುವ ಮುನ್ನ 2004ರಲ್ಲಿ ...ಷಿವಲಯದ ಸುಧಾರಣೆಗೋಸ್ಕರ, ರೈತರ ಬದುಕನ್ನು ...ಧಾರಿಸುವುದಕ್ಕೋಸ್ಕರ ರಚಿಸಲಾಗಿದ್ದ ಪ್ರೊ. ಸ್ವಾಮಿನಾಥನ್ ...ಯೋಗದ ವರದಿಯನ್ನು ಒಂದಷ್ಟು ಮೆಲುಕು ಹಾಕುವುದು ...ಳ್ಳೆಯದೆಂದು ಅನಿಸುತ್ತದೆ.

ಪ್ರೊ. ಸ್ವಾಮಿನಾಥನ್ ಆಯೋಗ ತನ್ನ ವರದಿಯನ್ನು ...ಲ್ಲಿಸಿ ಇಂದಿಗೆ ಸುಮಾರು ಹನ್ನೊಂದು ವರ್ಷಗಳೆ ...ರುಳಿವೆ. ಆಯೋಗದ ಹಲವಾರು ಸಲಹೆಗಳಲ್ಲಿ ಭೂ ...ಧಾರಣೆ, ನೀರಾವರಿ ಸುಧಾರಣೆ, ಫಲವತ್ತತೆಯ ವೃದ್ಧಿ ...ಹಾರ ಭದ್ರತೆ, ಕೃಷಿ ಸಾಲಗಳಿಗೆ ಶೇಕಡಾ 4ರ ಬಡ್ಡಿದರ, ...ಲಾವಧಿಯ ವಿಸ್ತರಣೆ, ಆಹಾರ ಧಾನ್ಯಗಳಿಗೆ ...ತಿಫಲದಾಯಕ ಬೆಲೆಗಳ ನಿರ್ಧಾರ ಮುಂತಾದವು ಸೇರಿವೆ. ...ಷ್ಟು ಅಪಾಯವಿರುವ, ಅದರಷ್ಟು ಕಡಿಮೆ ಆದಾಯ ...ರುವ ಕ್ಷೇತ್ರ ಇನ್ನೊಂದಿಲ್ಲವೆಂದ ಡಾ. ಸ್ವಾಮಿನಾಥನ್ ...ೈತರಿಗೆ ಮೂಲಭೂತ ಸಾಧನಗಳಾದ ಭೂಮಿ, ನೀರು, ...ವಿಕ ಸಾಧನಗಳು (ಪಶು ಸಂಗೋಪನೆ ಇತ್ಯಾದಿ), ಸಾಲ, ...ಮೆ, ತಂತ್ರಜ್ಞಾನ ಹಾಗೂ ಮಾಹಿತಿ ನಿರ್ವಹಣೆ ಮತ್ತು ...ಾರುಕಟ್ಟೆಗಳು ಖಾತ್ರಿಯಾಗಿ ಲಭ್ಯವಾಗಬೇಕು ಮತ್ತು ...ವುಗಳ ಮೇಲೆ ನಿಯಂತ್ರಣವೂ ಇರಬೇಕು. ಉತ್ಪಾದನಾ ...ಚ್ಚಕ್ಕೆ ಅದರ ಅರ್ಧದಷ್ಟನ್ನು ಸೇರಿಸಿ ಕನಿಷ್ಠ ಬೆಂಬಲ ...ಲೆಯನ್ನು ನಿರ್ಧರಿಸಬೇಕು. ಕೃಷಿಯನ್ನು ರಾಜ್ಯಗಳ ಪಟ್ಟಿಯಿಂದ ಕೇಂದ್ರ ಹಾಗೂ ರಾಜ್ಯಗಳ ಸಹಯೋಗದ ಪಟ್ಟಿಗೆ ಬದಲಾಯಿಸಬೇಕು. ಭೂಮಿಯ ಅಸಮಾನ ಹಂಚಿಕೆ ಕೊನೆಗೊಳ್ಳಬೇಕು, ಬಡವರಿಗೂ ಭೂಮಿ ಸಿಗುವಂತಾಗಬೇಕು..." ಎಂದು ತಿಳಿಸಿದ್ದರು.

ಆದರೆ ರೈತರು ಕೊರಳುದ್ದ ಮಾಡಿ ಕಾದದ್ದೇ ಬಂತು. ಅವರ ಬದುಕು ಸುಧಾರಿಸುವ ಬದಲು ದಿನೇದಿನೇ ಇನ್ನಷ್ಟು ದುಸ್ತರವಾಗುತ್ತಾ ಸಾಗಿದೆ. 1995ರಿಂದ 2016ರ ತನಕ ಮೂರು ಲಕ್ಷಕ್ಕೂ ಅಧಿಕ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಅಧಿಕೃತ ಅಂಕಿಅಂಶಗಳೆ ಹೇಳುತ್ತವೆ. ಇವರಲ್ಲಿ ಹೆಚ್ಚಿನವರು ಸಾಲ ತೀರಿಸಲು ಅಸಾಧ್ಯವಾಗಿ ಬೇರೆ ದಾರಿ ಕಾಣದೆ ಆತ್ಮಹತ್ಯೆಗೆ ಶರಣಾದವರು. ಸರಕಾರಗಳು ಆಗಾಗ ಲೇಪಿಸುವ ಸಾಲಮನ್ನಾ ಎಂಬ ಮುಲಾಮಿನಿಂದ ಏನೂ ಉಪಯೋಗವಿಲ್ಲ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ವಾಸ್ತವ ಏನೆಂದರೆ ಸ್ವಾಮಿನಾಥನ್ ಆಯೋಗದ ಸಲಹೆಗಳನ್ನು ಅದರಲ್ಲೂ ಮುಖ್ಯವಾಗಿ ಕನಿಷ್ಠ ಬೆಂಬಲ ಬೆಲೆ ಕುರಿತ ಸಲಹೆಯನ್ನು (ಉತ್ಪಾದನಾ ವೆಚ್ಚ - ಅದರ 50%) ಪಾಲಿಸಲು ಸರಕಾರಗಳು ಹಿಂದೇಟು ಹಾಕುತ್ತಿವೆ. ಪರಿಣಾಮವಾಗಿ



ರೈತರ ಆದಾಯಗಳಿಗೆ ಕನ್ನ ಬೀಳುತ್ತಿದೆ. ಇಂತಹ ದುರ್ಭರ ಪರಿಸ್ಥಿತಿಯಲ್ಲಿರುವ ರೈತರ ಮುಂದೆ ಎರಡೆರಡು ಸಮಸ್ಯೆಗಳಿವೆ. ಒಂದು ಕಡೆ ಬ್ಯಾಂಕುಗಳಿಂದ ಪಡೆದಿರುವ ಸಾಲಗಳನ್ನು ತೀರಿಸಬೇಕಾಗಿದೆ. ಇನ್ನೊಂದು ಕಡೆ ವಿಮಾ ಕಂಪೆನಿಗಳಿಗೆ ಸಲ್ಲಿಸಿದ ಬೇಡಿಕೆಗಳು ಚುಕ್ತಾ ಆಗುತ್ತಿಲ್ಲ. ಮೋದಿ ಸರ್ಕಾರವಂತೂ ರೈತರನ್ನು ಪೂರ್ತಿಯಾಗಿ ನಿರ್ಲಕ್ಷಿಸಿದ ಪರಿಣಾಮವಾಗಿ ಇಂದು ಅನೇಕ ರಾಜ್ಯಗಳಲ್ಲಿ ರೈತರು ಬಂಡಾಯ ಏಳುತ್ತಿದ್ದಾರೆ. ಸರ್ಕಾರ ಹೆಸರಿಗೇನೊ ರೈತರ ಒಳಿತಿಗೆಂದು ಎರಡು ಹೊಸ ಕೃಷಿ ವಿಮಾ ಯೋಜನೆಗಳನ್ನು ಅನುಷ್ಠಾನಗೊಳಿಸಿದೆಯಾದರೂ ಅದರ ಪ್ರಯೋಜನವೆಲ್ಲ ಕಾರ್ಪೋರೇಟುಗಳ ಪಾಲಾಗುತ್ತಿರುವಂತಿದೆ.

ಮೋದಿ ಸರ್ಕಾರದ ಕೃಷಿವಿಮಾ ಯೋಜನೆಗಳು

ಮೋದಿ ಸರ್ಕಾರ ಯಥಾಪ್ರಕಾರವಾಗಿ ಭಾರಿ ಬಾಜಾಭಜಂತ್ರಿ ಹಾಗೂ ಅತಿ ಅಬ್ಬರದ ಪ್ರಚಾರದೊಂದಿಗೆ ಕಳೆದ ವರ್ಷದಿಂದ ಆರಂಭಿಸಿರುವ ಕೃಷಿ ವಿಮಾ ಯೋಜನೆಗಳು ರೈತರ ಪಾಲಿಗೆ ಇದ್ದೂಇಲ್ಲದಂತಾಗಿವೆ. 2016ರ ಜನವರಿ 13ರಂದು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ಹೊಸರೂಪದ ಹವಾಮಾನ ಆಧರಿತ ಬೆಳೆ ವಿಮೆ ಯೋಜನೆಗಳಿಗೆ ಚಾಲನೆ ನೀಡಲಾಗಿತ್ತು, ಈ ಹೊಸ ಯೋಜನೆಗಳಿಂದಾಗಿ ದೇಶದ ರೈತರು ಬರ, ನೆರೆ, ಅಕಾಲಿಕ ಮಳೆ ಮುಂತಾದ ಪ್ರಾಕೃತಿಕ ವಿಕೋಪಗಳ ಪರಿಣಾಮವಾಗಿ ಅನುಭವಿಸುವ ಬೆಳೆ ನಷ್ಟಕ್ಕೆ ಇನ್ನು ಮುಂದೆ ಸೂಕ್ತ ಪರಿಹಾರ ಸಿಗಲಿದೆ ಎಂದು ಜಾಹೀರಾತು ಮತ್ತು ಪಾವತಿ ಸುದ್ದಿಗಳ ಮೂಲಕ ಡಂಗುರ ಸಾರಲಾಗಿತ್ತು. ತುತ್ತೂರಿ ಮಾಧ್ಯಮಗಳು, ಮೋದಿಭಕ್ತ ಸಾಮಾಜಿಕ ಜಾಲತಾಣಗಳು ವಗೈರೆ ವಗೈರೆ ಮೋದಿ ಸರ್ಕಾರದ ಕಾರ್ಯಕ್ರಮಗಳನ್ನು 'ವಿನೂತನ', 'ರೈತಸ್ನೇಹಿ' ಎಂದೆಲ್ಲ ಕೊಂಡಾಡಿದ್ದೇ ಕೊಂಡಾಡಿದ್ದು!

ಅಸಲಿ ಸಂಗತಿ

ಈ ಎರಡು ಯೋಜನೆಗಳಿಗೆ 2019ರ ಒಳಗಾಗಿ ಶೇಕಡಾ 50ರಷ್ಟು ಬೆಳೆಭೂಮಿಗಳನ್ನು ಒಳಗೊಳ್ಳುವ ಗುರಿಯನ್ನು ವಿಧಿಸಲಾಗಿದೆ. ಆರಂಭದಲ್ಲಿ 'ಕೃಷಿ ವಿಮಾ ಸಂಸ್ಥೆಗಳು ನಿಯಮಿತ' (Agriculture Insurance Companies Limited, ಎಐಸಿಎಲ್) ಎಂಬ ಸರ್ಕಾರಿ ವಿಮಾ ಸಂಸ್ಥೆ ಮತ್ತು 10 ಖಾಸಗಿ ವಿಮಾ ಸಂಸ್ಥೆಗಳಿಗೆ ಅನುಮತಿ ನೀಡಲಾಗಿದೆ. ಅಧಿಕೃತ ಮಾಹಿತಿಗಳ ಪ್ರಕಾರ ಇದುವರೆಗೆ ಅಂದರೆ ಒಂದು ವರ್ಷದ ಅವಧಿಯಲ್ಲಿ 21 ರಾಜ್ಯಗಳ ಶೇಕಡಾ 30ರಷ್ಟು ಬೆಳೆಭೂಮಿಗಳನ್ನೂ 2016ರ ಮಳೆಗಾಲದಲ್ಲಿ (ಖರೀಫ್) ಸುಮಾರು 3.9 ಕೋಟಿ ರೈತರನ್ನೂ (ಹಿಂದಿಗಿಂತ ಕೇವಲ 4 ಪ್ರತಿಶತ ಹೆಚ್ಚು ಅಷ್ಟೆ) ಒಳಗೊಳ್ಳಲಾಗಿದೆ. ಉತ್ತರ ಪ್ರದೇಶ, ರಾಜಸ್ತಾನಗಳಂತಹ ಕೆಲವು ರಾಜ್ಯಗಳು ಯೋಜನೆಯಲ್ಲಿ ಒಂದಷ್ಟು ಹೊಂದಾಣಿಕೆ ಮಾಡಿ ತಮ್ಮ ಆರ್ಥಿಕ ಹೊರೆಯನ್ನು ಇಳಿಸಿಕೊಂಡಿವೆ ಎನ್ನಲಾಗಿದೆ. ಆದರೆ ಒಂದು ವರ್ಷದ ಬಳಿಕ ಬೆಳೆ ವಿಮೆ ವಿತರಣೆಯ ಪರಿಸ್ಥಿತಿ ಹೇಗಿದೆ ಎಂದು ನೋಡಹೊರಟರೆ ವಿಮಾ ಕಂಪೆನಿಗಳು ರೈತರಿಂದ ಭಾರಿ ಮೊತ್ತದ ಕಂತುಗಳನ್ನು ಪಡೆದುಕೊಂಡ ಹೊರತಾಗಿಯೂ ಬೇಡಿಕೆಗಳ ಶೇಕಡಾ 83ರಷ್ಟು ದುಡ್ಡನ್ನು ಪಾವತಿ ಮಾಡದಿರುವ ಆಘಾತಕಾರಿ ಚಿತ್ರಣವೊಂದು ಎದುರಾಗುತ್ತದೆ.

ವಿಜ್ಞಾನ ಮತ್ತು ಪರಿಸರ ಪರ ಕೇಂದ್ರ (Centre for Science and Environment) ಮತ್ತು ಡೌನ್ ಟು ಅರ್ಥ್ (*Down To Earth*) ನಿಯತಕಾಲಿಕ ಸೇರಿಕೊಂಡು ಮಹತ್ವಾಕಾಂಕ್ಷಿ ಎಂದು ಟಾಂಟಾಂ ಮಾಡಲಾದ ಈ ಯೋಜನೆಗಳನ್ನು ವಿಶ್ಲೇಷಣೆಗೊಡ್ಡಿ "ಭಾರತದ ಪರಿಸರದ ಸ್ಥಿತಿ 2017: ಒಂದು ಅಧ್ಯಯನ" ಎನ್ನುವ ಜಂಟಿ ವರದಿಯೊಂದನ್ನು ಪ್ರಕಟಿಸಿವೆ. ವರ್ಷಕ್ಕೊಮ್ಮೆ ಪ್ರಕಟವಾಗುವ ಈ ವರದಿ ದತ್ತಾಂಶಗಳಿಂದ ಕೂಡಿದ್ದು ಅತ್ಯಂತ ವಿಶ್ವಾಸಾರ್ಹವೂ ಆಗಿದೆ. ಈ ಬಾರಿಯ ಅಧ್ಯಯನ ಹೇಳುವಂತೆ ಸಂಕಷ್ಟಕ್ಕೀಡಾದ ರೈತರಿಗೆ ಈ ಯೋಜನೆಗಳಿಂದ ಏನೇನೂ ಪ್ರಯೋಜನವಾಗಿಲ್ಲ. ನಿರ್ದಿಷ್ಟವಾಗಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ಹೊಸರೂಪದ ಹವಾಮಾನ ಆಧರಿತ ಬೆಳೆ ವಿಮೆ ಯೋಜನೆಗಳ ಅಡಿಯಲ್ಲಿ ಕಾರ್ಯಾಚರಿಸುತ್ತಿರುವ ವಿಮಾ ಕಂಪೆನಿಗಳು 2016ರ ಮಳೆಗಾಲದಲ್ಲಿ ರೂ. 4270.55 ಕೋಟಿ ವಿಮಾ ಕಂತು ಸಂಗ್ರಹಿಸಿವೆ. ಆದರೆ ಇವು ಪಾವತಿಸಿರುವುದು (2017ರ ಏಪ್ರಿಲ್ ತನಕ) ಕೇವಲ ರೂ. 714.14 ಕೋಟಿ ಅಂದರೆ ಕೇವಲ 17 ಪ್ರತಿಶತ ಬೇಡಿಕೆಗಳನ್ನು. ಒಟ್ಟಾರೆಯಾಗಿ ನೋಡಿದರೆ 2016-17ರಲ್ಲಿ ಸಂಗ್ರಹಿಸಲಾದ ರೂ. 21,500 ಕೋಟಿ ಪೈಕಿ 2017ರ ಏಪ್ರಿಲ್ ತನಕ ರೂ. 714.14 ಕೋಟಿಯಷ್ಟೆ ಪಾವತಿಯಾಗಿದೆ ಎಂದರೆ ಶೇಕಡಾವಾರು 3ಕ್ಕಿಂತಲೂ ಕಮ್ಮಿ ಎಂದಾಯಿತು!

ಪ್ರಧಾನ ಮಂತ್ರಿ ಫಸಲು ವಿಮೆ ಯೋಜನೆಯಲ್ಲಿ ಸದ್ಯ ಇರುವ 10 ಖಾಸಗಿ ವಿಮಾ ಕಂಪೆನಿಗಳು ಕಡಿಮೆ ನಷ್ಟದ ಸಾಧ್ಯತೆಗಳಿರುವ ರಾಜ್ಯಗಳಲ್ಲಿ ಕಾರ್ಯಾಚರಿಸುತ್ತಿದ್ದರೂ ಅವುಗಳ ಸಾಧನೆ ಕಳಪೆಯಾಗಿದೆ. ಇವು ಒಟ್ಟು ರೂ. 9041.25 ಕೋಟಿಯಷ್ಟು ವಿಮಾ ಕಂತನ್ನು ಸಂಗ್ರಹಿಸಿವೆಯಾದರೂ (2016ರ ಮಳೆಗಾಲದ ಫಸಲು) ರೂ. 2324.01 ಕೋಟಿ ಪರಿಹಾರದ ಬೇಡಿಕೆ ಬಂದಾಗ ಕೇವಲ ರೂ 570.1 ಕೋಟಿಯನ್ನಷ್ಟೆ (ಸುಮಾರು 25%) ಸಂದಾಯ ಮಾಡಿವೆ. 10ರ ಪೈಕಿ 4 ಕಂಪೆನಿಗಳು ಶೇಕಡಾ 75ರಿಂದ ಶೇಕಡಾ 100ರಷ್ಟು ಬೇಡಿಕೆಗಳನ್ನು ಚುಕ್ತಾ ಮಾಡಿಲ್ಲ. ಬರಪೀಡಿತ ಮಹಾರಾಷ್ಟ್ರ ಸೇರಿದಂತೆ 3 ರಾಜ್ಯಗಳಲ್ಲಿ ಕಾರ್ಯಾಚರಿಸುತ್ತಿರುವ ಇಫ್ಕೋ-ಟೋಕಿಯೊ ಕಂಪೆನಿಗೆ ಬಂದಿರುವ ವಿಮಾ ಬೇಡಿಕೆಗಳಲ್ಲಿ ಶೇಕಡಾ 86ಕ್ಕೂ ಅಧಿಕ ಬೇಡಿಕೆಗಳನ್ನು ಪಾವತಿ ಮಾಡಲಾಗಿಲ್ಲ. ಈ ಯೋಜನೆ ಅಡಿಯಲ್ಲಿ ಎಲ್ಲಾ ಬೇಡಿಕೆಗಳನ್ನು ಚುಕ್ತಾ ಮಾಡಿರುವ ಏಕೈಕ ಸಂಸ್ಥೆ ಎಂದರೆ ಯುನಿವರ್ಸಲ್ ಸೊಂಪೊ ಜಿಐಸಿ (ಕರ್ನಾಟಕದಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತಿದೆ). ಇನ್ನು ಸರ್ಕಾರಿ ವಿಮಾ ಸಂಸ್ಥೆ ಎಐಸಿಐಎಲ್‌ನ ಕಂತು ಸಂಗ್ರಹ ರೂ. 3610.78 ಕೋಟಿ ಇದ್ದರೆ, ಪಾವತಿ ಮಾಡಿರುವುದು ಬರೀ ಸುಮಾರು ರೂ. 830 ಕೋಟಿ (23%).

2016ರ ಮಳೆಗಾಲದ ಬಳಿಕ ರೈತರು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಗೆ ಸ್ಪಂದಿಸಿಲ್ಲ, ಸಾಲಗಾರ ರೈತರ ಸಂಖ್ಯೆಯೂ ಹೆಚ್ಚಾಗಿದೆ. ಈ ರೀತಿಯಾಗಿ ಮಳೆಗಾಲದಲ್ಲಿ ಕಳಪೆ ಸಾಧನೆ ಆಗಿರುವುದನ್ನು ಕಂಡ ಮೋದಿ ಸರ್ಕಾರ ಚಳಿಗಾಲದಿಂದ (ರಬಿ) ನ್ಯಾಷನಲ್ ಇನ್ಶೂರೆನ್ಸ್, ಓರಿಯೆಂಟಲ್ ಇನ್ಶೂರೆನ್ಸ್, ನ್ಯೂ ಇಂಡಿಯ ಇನ್ಶೂರೆನ್ಸ್ ಮತ್ತು ಯುನೈಟೆಡ್ ಇನ್ಶೂರೆನ್ಸ್ ಎಂಬ ಇನ್ನೂ 4 ಸರ್ಕಾರಿ ವಿಮಾ ಸಂಸ್ಥೆಗಳಿಗೆ ಅನುಮತಿ ನೀಡಿದೆ. ಆದರೆ... ಅವುಗಳ ಪೈಕಿ ನ್ಯಾಷನಲ್ ಇನ್ಶೂರೆನ್ಸ್ ಕಂಪೆನಿಯ ಆರ್ಥಿಕ ಪರಿಸ್ಥಿತಿ ಏನೂ ಚೆನ್ನಾಗಿಲ್ಲ. ಓರಿಯೆಂಟಲ್ ಇನ್ಶೂರೆನ್ಸ್ ಮತ್ತು ಯುನೈಟೆಡ್ ಇನ್ಶೂರೆನ್ಸ್‌ಗಳಿಗೆ ಮುಖ್ಯಸ್ಥರೇ ಇಲ್ಲ. ಎಐಸಿಎಲ್‌ನ ಮುಖ್ಯಸ್ಥರನ್ನು ಕಳೆದ 6 ವರ್ಷಗಳಲ್ಲಿ 6 ಬಾರಿ ಬದಲಾಯಿಸಲಾಗಿದೆ. ಅದಿಂದು ಬೇರೆಲ್ಲೂ ನೌಕರಿ ಸಿಗಲಾರದವರ ಕೊನೆಯ ಆಶ್ರಯ ಎಂಬಂತಾಗಿದೆ. ಸದ್ಯ ಆರ್ಥಿಕ ಸೇವೆಗಳ ವಿಭಾಗದ ಆರ್ಥಿಕ ಸಲಹೆಗಾರ ಆರ್.ಎನ್. ದುಬೆ ಎಂಬವರನ್ನು ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ. ಇಷ್ಟೇ ಅಲ್ಲ, ಸಂಸ್ಥೆ ತೀವ್ರ ಸಿಬ್ಬಂದಿ ಕೊರತೆಯನ್ನೂ ಎದುರಿಸುತ್ತಿದೆ. ಕೃಷಿ ವಿಮಾ ಮಾರುಕಟ್ಟೆಯ ಶೇಕಡ 40ರಷ್ಟು ವ್ಯವಹಾರ ಇರುವ ಎಐಸಿಎಲ್‌ನಲ್ಲಿ ಸಿಬ್ಬಂದಿಗಳ ಸಂಖ್ಯೆ 700 ಇರಬೇಕಾದಲ್ಲಿ ಕೇವಲ 300 ಇದ್ದಾರೆ ಅಂದರೆ ಶೇಕಡಾ 50ಕ್ಕಿಂತಲೂ ಕಮ್ಮಿ! ಪರಿಣಾಮವಾಗಿ ದತ್ತಾಂಶಗಳಲ್ಲಿ ಸಾಕಷ್ಟು ಎಡವಟ್ಟುಗಳಾಗಿವೆ. ಮತ್ತೊಂದು ವಿಚಿತ್ರ ಏನೆಂದರೆ ಎಐಸಿಎಲ್ ಆಡಳಿತ ಆರ್ಥಿಕ ಸಚಿವಾಲಯದ ಕೈಕೆಳಗಿದ್ದರೆ ಮೇಲ್ವಿಚಾರಣೆಯ ಹೊಣೆ ವಹಿಸಿರುವುದು ಕೃಷಿ ಸಚಿವಾಲಯಕ್ಕೆ!

ಇದೆಲ್ಲವನ್ನು ಪರಿಗಣಿಸಿದಾಗ ಮೋದಿ ಸರ್ಕಾರದ ನೂತನ ಕೃಷಿ ವಿಮಾ ಯೋಜನೆಗಳ ಅಸಲಿ ಲಾಭವನ್ನು ಹೊಡೆಯುತ್ತಿರುವುದು ಕಾರ್ಪೋರೇಟು ಕುಳಗಳು ಎಂಬ ಆರೋಪದಲ್ಲಿ ಹುರುಳಿಲ್ಲ ಎನ್ನಲಾಗುವುದಿಲ್ಲ.

(ಆಧಾರ: *downtoearth.org.in*ನಲ್ಲಿ ಜಿತೇಂದ್ರರ ಲೇಖನ ಮತ್ತು ಇತರ ಮೂಲಗಳು)

12◀◀

• ಇದರ ಜೊತೆಗೆ ಕನ್ಯೆಯರಲ್ಲದ ಹೆಣ್ಮಕ್ಕಳು ...ವಾಗಿ ಬಳಸಬಹುದಾದ ಒಂದು ಪರ್ಯಾಯವಿದೆ. ...ದು 'ಮುಟ್ಟಿನ ಬಟ್ಟಲು' ಅಥವಾ 'ಮೆನ್‌ಸ್ಟ್ರುವಲ್ ...ಪ್'. ಶಿ ಕಪ್, ಸಿಲ್ಕಿ ಕಪ್, ಗ್ರೀನ್ ಕಪ್, ದಿವಾ ಕಪ್ ...ಎಸ್), ಮೂನ್ ಕಪ್ (ಯುಕೆ) ಮುಂತಾದ ಬ್ರ್ಯಾಂಡ್ ...ಸರುಗಳಲ್ಲಿ ದೊರೆಯುತ್ತದೆ.

ಮಕ್ಕಳಿಗೆ ಬಾಟಲಿ ಹಾಲು ಕುಡಿಸುವಾಗ ಬಳಸುವ ...ಬ್ಬರ್ ನಿಪ್ಪಲ್ ನೋಡಿರುತ್ತೀರಿ. ಅಂಥದೇ ಮೆತ್ತನ್ನ ...ದೆ ದೃಢವಾದ ಮುಟ್ಟಿನ ಬಟ್ಟಲುಗಳು ಬಂದಿವೆ. ...ಮಗಿಸಿಟ್ಟ ಗಂಟೆಯಾಕಾರದ ಇವುಗಳ ಬುಡದಲ್ಲಿ ಒಂದು ...ೊಟ್ಟು ಇರುತ್ತದೆ. ಒಂದು ಕಾಲನ್ನು ಕುರ್ಚಿ ಅಥವಾ ...ಮೋಡಿಸ ಮೇಲಿಟ್ಟು ಇನ್ನೊಂದು ಕಾಲಿನ ಮೇಲೆ ನಿಂತು ...ದನ್ನು ಹಾಕಿಕೊಳ್ಳಬಹುದು. ತುದಿ ಮಡಚಿ ...ೋನಿಯೊಳಗೆ ತುಂಬಿ ಒಮ್ಮೆ ತಿರುಪಿದಂತೆ ಸರಿಸಿದರೆ ...ಚ್ಚಿಯಿತು, ಒಳಹೋಗಿ ಸರಿಯಾಗಿ ಹಿಡಿದು ಕೂರುತ್ತದೆ. ...ವರ ರಕ್ತಸ್ರಾವಕ್ಕೆ ತಕ್ಕಂತೆ 4 ರಿಂದ 12 ತಾಸಿಗೊಮ್ಮೆ ...ದನ್ನು ಬದಲಿಸಬೇಕಾಗುತ್ತದೆ. ಅದರ ಬುಡದ ...ಪ್ಪಲಿನಂತಹ ಚೊಟ್ಟು ಎಳೆದರೆ ಹೊರಬರುತ್ತದೆ. ...ಖಾಲಿ ಮಾಡಿ, ತೊಳೆದು ಮತ್ತೆ ಬಳಸಬೇಕು. ತಿಂಗಳ ...ಸ ಮುಗಿದಕೂಡಲೇ ನೀರಲ್ಲಿ ಕುದಿಸಿ, ಒಣಗಿಸಿ, ...ಟ್ಟುಕೊಂಡರೆ 10 ವರ್ಷದ ತನಕ ಬಳಸಬಹುದು.

ಅವರವರ ಎತ್ತರ, ಗಾತ್ರ, ಸ್ರಾವದ ಪ್ರಮಾಣದ ಮೇಲೆ ಭಿನ್ನ ಅಳತೆಯ ಕಪ್‌ಗಳು ಲಭ್ಯವಿವೆ. ಶಿ ಕಪ್ 28 ಎಂಎಲ್ ಹಿಡಿಯುತ್ತದೆ. ದಿವಾ ಕಪ್ 30 ಎಂಎಲ್. ಸಾಧಾರಣವಾಗಿ ತಿಂಗಳ ಸ್ರಾವ 35 ಎಂಎಲ್ ಇರುತ್ತದೆ. ಅದು 10-80 ಎಂಎಲ್ ತನಕವೂ ಇರಬಹುದು. ಮಕ್ಕಳಾಗದ 30 ವರ್ಷ ಒಳಗಿನವರು ಸ್ಮಾಲ್ ಕಪ್, 30 ವರ್ಷ ಮೇಲ್ಪಟ್ಟ ನಾರ್ಮಲ್ ಡೆಲಿವರಿ ಆದವರು ಮೀಡಿಯಂ ಅಥವಾ ಲಾರ್ಜ್ ಕಪ್ ಬಳಸಬಹುದು. ಏನಾದರೂ ಸ್ರಾವದ ಸಮಯದಲ್ಲಿ ಪ್ರತಿದಿನ ಬೆಳಗ್ಗೆ ಒಮ್ಮೆ, ರಾತ್ರಿ ಒಮ್ಮೆ ಕಪ್ ಬರಿದುಮಾಡಿ ತೊಟ್ಟುಕೊಂಡರೆ ಸಾಕಾಗುತ್ತದೆ.

ಒಬ್ಬ ಮಹಿಳೆ ಸರಾಸರಿ 30-40 ವರ್ಷ ಮುಟ್ಟಿನ ಸ್ರಾವಕ್ಕೊಳಗಾಗುತ್ತಾಳೆ. ಇಡಿಯ ಜೀವಮಾನಕ್ಕೆ 4 ಕಪ್ ಸಾಕು. ಒಂದರ ಬೆಲೆ 500 ರೂಪಾಯಿ. 10 ವರ್ಷಕ್ಕೆ 500 ರೂಪಾಯಿ, ಒಂದು ವರ್ಷಕ್ಕೆ 50 ರೂಪಾಯಿ, ತಿಂಗಳಿಗೆ 4 ರೂಪಾಯಿ ಖರ್ಚು!


ಇದು ಐದಾರು ದಶಕಗಳಿಂದ ಅಮೆರಿಕ, ಕೆನಡ, ಯುಕೆ ಮತ್ತಿತರ ಕಡೆ ಬಳಕೆಯಲ್ಲಿದೆ. ಭಾರತದಲ್ಲೂ ಬಳಸಲ್ಪಡುತ್ತಿದೆ. ಆದರೆ ವೈದ್ಯಕೀಯವಾಗಿ ಸುರಕ್ಷಿತವೆಂದು ಸೂಚಿಸಲ್ಪಟ್ಟರೂ ಕನ್ಯತ್ವ ಹೋದೀತು ಎಂದು ಹೆದರಿ, ಮತ್ತಿನ್ನೇನೇನೋ ಆದೀತು ಎಂದು ಹೆದರಿ, ತನ್ನ ಅಂಗದೊಳಗೆ ತಾನೇ ಏನನ್ನೋ ತೂರಿಸಿ ಇಟ್ಟುಕೊಳ್ಳಲು ಹೆದರಿ ಮಹಿಳೆಯರು ಪ್ಯಾಡಿನಷ್ಟು ಸುಲಭವಾಗಿ ಅದಕ್ಕೆ ಒಗ್ಗಿಕೊಂಡಿಲ್ಲ. ಜೊತೆಗೆ ಪ್ರತಿ ತಿಂಗಳು ಸ್ಯಾನಿಟರಿ ಪ್ಯಾಡ್ ಮಾರಿದರೆ ಬರುವಷ್ಟು ಲಾಭ 10 ವರ್ಷ ಬಾಳಿಕೆ ಬರುವ ಕಪ್ ಮಾರಿದರೆ ಬರುವುದಿಲ್ಲವಾದ್ದರಿಂದ ಕಂಪನಿಗಳು ಅದರ ತಯಾರಿಗೆ ಮುಂಡೆ ಬರುತ್ತಿಲ್ಲ.

ಆದರೆ ಇದು ನಮ್ಮ ಭವಿಷ್ಯದ ಪರಿಣಾಮಕಾರಿ, ಸುರಕ್ಷಿತ, ಪರಿಸರ ಸ್ನೇಹಿ, ಕಾಸ್ಟ್ ಎಫೆಕ್ಟಿವ್ ಪರ್ಯಾಯ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಎಂದೇ ಸರ್ಕಾರ ಈ ಮುಂಚೆ ನಿರೋಧ್ ತಯಾರಿಸಿ ಪುಕ್ಕಟೆ ವಿತರಿಸಿದಂತೆ ಈ ಕಪ್‌ಗಳನ್ನೂ ತಯಾರಿಸಿ ಬಳಸಲು ಕೊಡುವುದು ಅವಶ್ಯವಾಗಿದೆ.

ಮುಟ್ಟು ಎನಲು ಹಿಂಜರಿಕೆ. ಮುಟ್ಟಿನ ಬಟ್ಟೆ ತೊಳೆದು ಬಿಸಿಲಿಗೆ ಒಣಗಿಸಲು ಹಿಂಜರಿಕೆ. ನಮ್ಮ ಅಂಗಾಂಗಗಳ ಮುಟ್ಟಿಕೊಳ್ಳಲೂ ಹಿಂಜರಿಕೆ. ಅದರ ಬಗೆಗೆ ಮಾತನಾಡಲೂ ಹಿಂಜರಿಕೆ. ಏನು ಮಾಡುವುದೆಂದು ಕೇಳಲೂ ಹಿಂಜರಿಕೆ. ಹೇಳಿದ್ದನ್ನು ಕೇಳಿಸಿಕೊಳ್ಳಲೂ ಹಿಂಜರಿಕೆ. ಅನುಸರಿಸಲೂ ಅನುಮಾನ ಭರಿತ ಹಿಂಜರಿಕೆ.

ಅವನ್ನೆಲ್ಲ ದಾಟ ಅಂಥ ಒಂದು ದಿನ ಬಂದೀತು. ಆಗ ಹೆಣ್ಮಕ್ಕಳೆಲ್ಲ ತಮ್ಮ ದೇಹವನ್ನು ಸ್ನೇಹಭಾವದಿಂದ ನೋಡಿಯಾರು. ಪ್ಯಾಡು, ಟ್ಯಾಂಪೂನ್, ಕಪ್ಪುಗಳು ಅವರಿಗೆ ಮಾತ್ರ ಅಲ್ಲ, ಅವರನ್ನು ಹೆತ್ತ ಭೂಮಿಗೂ ಸ್ನೇಹಿಯಾಗುವಂತಾದೀತು. ●

ಕಲ್ಲಡ್ಕ ಭಟ್ಟರ ಬಂಧನಾಭಿಲಾಷಿಗಳು ಯಾರು



ಕಲ್ಲಡ್ಕದ ಅಶ್ರಫ್ ಕಲಾಯಿ ಹತ್ಯೆಯಿಂದ ಹಿಡಿದು ಇತ್ತೀಚಿನ ಅನೇಕ ಘಟನೆಗಳಿಗೆ ಸಂಬಂಧಿಸಿದಂತೆ ಕಲ್ಲಡ್ಕ ಭಟ್ಟರ ಬಂಧನವಾಗಬೇಕೆಂದು ಅವರ ವಿರೋಧಿಗಳು ಬಯಸೋದು ಎಷ್ಟು ಸತ್ಯವೋ, ಇದೇ ಭಟ್ಟರ ಸಮೇತ ಸಂಘಪರಿವಾರ ಹಾಗು ಸ್ಥಳೀಯ ಬಿಜೆಪಿ ರಾಜಕಾರಣಿಗಳೂ ಕೂಡ ಇದನ್ನೇ ಬಯಸುತ್ತಿದ್ದಾರೆನ್ನುವುದು ವಿಚಿತ್ರವಾದರೂ ಅಷ್ಟೇ ಸತ್ಯ.

'ಮಂಗಳೂರು ಮುಸ್ಲಿಮ್' ಎನ್ನೋ ಸಾಮಾಜಿಕ ಜಾಲತಾಣದ ಗುಂಪೊಂದು ಕಲ್ಲಡ್ಕ ಭಟ್ಟರ ಹತ್ಯೆಯ ಕುರಿತಾಗಿಯೂ ಇದೀಗ ಸಂದೇಶ ರವಾನಿಸಿದ ಸುದ್ದಿ ಹಬ್ಬಿಸಿರುವಂತೆ ಇಂತಹ ಯಾವುದೇ ಪ್ರಯತ್ನಗಳು ಘಟಿಸಿದರೂ ಸಂಘಿಗಳ ರೊಟ್ಟಿ ಜಾರಿ ತುಪ್ಪಕ್ಕೆ ಬೀಳೋ ಪ್ರಕ್ರಿಯೆಗೆ ಚಾಲನೆ ಸಿಕ್ಕೇ ಬಿಟ್ಟಿತೆಂದೇ ಅದರರ್ಥ.

ಹೌದು, ಸಂಘಿಗಳಿಗಾಗಲೀ ಅಥವ ಅವರ ಪೋಷಕ ಹಾಗು ಮುಖವಾಣಿಗಳಾದ ಇಲ್ಲಿನ ಬಿಜೆಪಿ ರಾಜಕಾರಣಿಗಳಿಗೆಲ್ಲ ಇದೊಂದು ಕಠಿಣ ಪರೀಕ್ಷೆ ಎದುರಾದಂತಹ ಕಾಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಕೈಯಲ್ಲೇ ಇದ್ದಂತಹ ಕರಾವಳಿ ಜಿಲ್ಲೆಯ ಬಹುತೇಕ ಸೀಟನ್ನು ಕಳೆದುಕೊಂಡು ಇನ್ನು ವರ್ಷದೊಳಗೆ ಎದುರಾಗುವ ಚುನಾವಣೆಯಲ್ಲಿ ಅದನ್ನು ಮರಳಿ ಗಿಟ್ಟಿಸಿಕೊಳ್ಳುವ ಅವಶ್ಯಕತೆ ಇವರೆಲ್ಲರಿಗಿದೆ. ಅಭಿವೃದ್ಧಿಯ ಭರವಸೆ, ತಮ್ಮ ಅಧಿಕಾರಾವಧಿಯಲ್ಲಿ ಮಾಡಿದಂತಹ ಉತ್ತಮ ಕೆಲಸಕಾರ್ಯಗಳಿಗಿಂತಲೂ ಇವರ ಹಳೇ ಚಾಳಿಯಾದ ಕೋಮುವಿದ್ವೇಷ ಹಬ್ಬಿಸಿ ಬೆಳೆ ಬೆಳೆಯಿಸಿಕೊಳ್ಳುವ ಪುರಾತನ ತಂತ್ರಕ್ಕೇ ಅವರು ಪುನಃ ಶರಣಾಗ ಹೊರಟಿರುವುದು ಇಲ್ಲಿ ಸ್ಪಷ್ಟ.



ಕೋಮು ಗಲಭೆ ನಡೆಯಬೇಕು, ಈ ಕೋಮು ಜ್ವಾಲೆಗೆ ಬಲಿಬಿದ್ದ ಶೆಟ್ಟಿ, ಬಿಲ್ಲವ, ಮಡಿವಾಳರಂತಹ ಬಿಸಿರಕ್ತದ ಶೂದ್ರ ಹುಡುಗರ ಶವದ ಮೇಲೇ ಸಖತ್ತಾಗಿ ಉಳುಮೆ ಮಾಡಿ, ದ್ವೇಷದ ಗೊಬ್ಬರ ಹಾಕಿ ಭರ್ಜರಿ ಫಸಲು ಪಡೆಯುವ ತಂತ್ರಕ್ಕೀಗಾಗಲೇ ಕಾರ್ಯ ಯೋಜನೆಗಳು ಆರಂಭಗೊಂಡಿದೆ. ವರ್ಷಗಳ ಹಿಂದೆ ಕೋಬ್ರಾಪೋಸ್ಟ್ ಸ್ಟಿಂಗ್ ಆಪರೇಷನ್ನಲ್ಲಿ ಚಡ್ಡಿಗಳೇ ಅವರ ಈ ಹೆಣ ಕೆಡವಿ ವಿದ್ವೇಷ ಹಬ್ಬಿಸೋ ತಂತ್ರವನ್ನು ಒಪ್ಪಿಕೊಂಡಿದ್ದದು ದಾಖಲಾಗಿ ಸುದ್ದಿ ಮಾಡಿತ್ತು.

ತಮ್ಮ ಕಾರ್ಯ ಸಾಧನೆಗೋಸ್ಕರ ದೇಶ ಹೊತ್ತಿ ಉರಿಯುವಂತಾಗಲು 'ಸಾವುಗಳು' ಸಂಭವಿಸಲೇಬೇಕೆಂಬ ಒಮ್ಮತದ ನಿರ್ಧಾರಕ್ಕೆ ಚಡ್ಡಿ ನಾಯಕರುಗಳು ಬಂದಿದ್ದಾರೆಂಬ ಅಂಶ ಅದರಲ್ಲಿ ಬಯಲಾಗಿತ್ತು. ಸಂದರ್ಶನದಲ್ಲಿ ಈಗಿನ ಉತ್ತರ ಪ್ರದೇಶದ ಸಂಸದ ಸಾಕ್ಷಿ ಮಹಾರಾಜ್ ಕರಸೇವಕರ ಸಾವಿಗೆ ನೇರವಾಗಿ ವಿಹೆಚ್‌ಪಿ ನಾಯಕ ಸಿಂಘಾಲರನ್ನೇ ಬೊಟ್ಟು ಮಾಡಿ ಅದಕ್ಕೆ ಆಧಾರವನ್ನೂ ಒದಗಿಸಿದ್ದ. "ಮೇರೆ ಸಾಮ್ನೆ ಸಿಂಘಾಲ್ ಜಿ ನೆ ಕಹಾ, ಕುಚ್ ಲೋಗ್ ನಹಿ ಮರೇಂಗೇ ತೋ ಆಂದೋಲನ್ ಊಪರ್ ನಹಿ ಉಠೇಗಾ (ನನ್ನ ಬಳಿ ಸಿಂಘಾಲ್ 'ಕೆಲವರಾದರೂ ಸಾಯದಿದ್ದರೆ ಈ ಚಳವಳಿ ಅವಶ್ಯವಿರುವ ಕಾವನ್ನು ಪಡೆದುಕೊಳ್ಳದು' ಎಂದಿದ್ದರು)" ಎಂದು ಹೇಳಿದ್ದ. ಮತ್ತೊಂದು ಸಂದರ್ಶನದಲ್ಲಿ ಧರ್ಮೇಂದ್ರ ಸಿಂಘ್ ಗುರ್ಜರ್ ಎನ್ನುವ ಬಜರಂಗದಳದ ನಾಯಕ "ಇವರೆಲ್ಲ ನಮ್ಮಂಥ ಬಿಸಿರಕ್ತದ ಯುವಕರನ್ನು ಸರಿಯಾಗಿ ಬಳಸಿ ಮೂರ್ಖರನ್ನಾಗಿಸಿಕೊಂಡು ನಂತರ ಕೈಬಿಟ್ಟರು" ಎಂದದ್ದು ಈ ಕೋಬ್ರಾ ಪೋಸ್ಟ್ ಕಾರ್ಯಾಚರಣೆಯಿಂದ ಬಯಲಾಗಿತ್ತು. ಹೇಗಿದ್ದರೂ ಎರಡು ಮೂರು ಸೀಟು ಗೆಲ್ಲುತ್ತಿದ್ದ ಬಿಜೆಪಿ ದೆಲ್ಲಿಯಲ್ಲಿ ಸಿಂಹಾಸನವೇರುವಂತಾದದ್ದು ಇದೇ ಕುಖ್ಯಾತ ಬಾಬ್ರಿ ಮಸೀದಿ ಧ್ವಂಸ ಹಾಗು ಆ ಬಳಿಕದ ದೊಂಬಿ ಗಲಾಟೆ ಸಾವುಗಳ ಕಾರಣಕ್ಕೇ ತಾನೇ? ಬಳಿಕ ಇದೇ ತಂತ್ರ ಗುಜರಾತ್ ಹಾಗು ಉತ್ತರ ಪ್ರದೇಶಗಳಲ್ಲೂ ಯಶಸ್ವಿಯಾಗಿ ಪುನರಾವರ್ತನೆಗೊಂಡಿತ್ತು.

ಮೊನ್ನೆ ಬಂಟ್ವಾಳದ ಬಿ.ಸಿ. ರೋಡಿನಲ್ಲಿ ದುಷ್ಕರ್ಮಿಗಳಿಂದ ಹಲ್ಲೆಗೊಳಗಾದ ಮಡಿವಾಳರ ಹುಡುಗ ಶರತ್ ಮಂಗಳೂರಿನ ಆಸ್ಪತ್ರೆಯಲ್ಲಿ ಜೀವನ್ಮರಣ ಸ್ಥಿತಿಯಲ್ಲಿ ಹೋರಾಡುತ್ತಿದ್ದರೆ ಬಂಟ್ವಾಳದಲ್ಲಿ ಸಂಘಿಗಳು ಭಟ್ಟರಯ್ಯನನ್ನು ಹೊತ್ತುಕೊಂಡು ಕೇಕೆ ಹಾಕಿ ಕುಣಿದಾಡುತ್ತಿದ್ದವು. ಒಟ್ಟಾರೆ ಇವರುಗಳಿಗೆ ತಮ್ಮವನೇ ಅಮಾಯಕನೊಬ್ಬ ಸಾಯುವಂತಹ ಶೋಕಕ್ಕಿಂತ ಹುಚ್ಚು ಬಡಿದಾಟಕ್ಕೊಂದು ಒಳ್ಳೆ ನೆವನ ಸಿಕ್ಕಂತಹ ವಿಕೃತಿಯೇ ದೊಡ್ಡದಾಯಿತು. ಅಂದಹಾಗೆ, ದುಷ್ಕರ್ಮಿಗಳು ಹೆತ್ತವರಿಗೆ ಒಬ್ಬನೇ ಆಸರೆಯಾಗಿದ್ದ ಇದೇ ಆರೆಸ್ಸೆಸ್ಸಿಗ ಶರತ್‌ನನ್ನು ಹಲ್ಲೆಗೈದು ಕೆಡವಿ ಹೊರಟಾಗ ಯಾವ ಕೇಕೆದಾರರೂ ಆತನ ನೆರವಿಗೆ ಮುಂದಾಗಲೇ ಇಲ್ಲ. ಕೊನೆಗೆ ರಕ್ತದ ಮಡುವಿನಲ್ಲಿ ಬಿದ್ದಿದ್ದ ಆತನನ್ನು ಆಸ್ಪತ್ರೆಗೆ ಸೇರಿಸಿದ್ದು ಇದೇ ಸಂಘಿಗಳು ಕಾಲು ಕೆರೆದು ಜಗಳಕ್ಕಿಳಿಯುವ ಮುಸಲ್ಮಾನ ಯುವಕ. ಇನ್ನೂ ಸತ್ತಿಲ್ಲದ ಶರತ್‌ನ ತತ್‌ಕ್ಷಣದ ಸಾವನ್ನು (ದೊಂಬಿಗೋಸ್ಕರ) ಸಂಘಿಗಳು ಬಯಸುತ್ತಿದ್ದರೆ, ಅಲ್ಲಿದ್ದ ಹಣ್ಣಿನ ವ್ಯಾಪಾರಿ ಅಬ್ದುರ್ರವೂಫ್ ಎಂಬಾತ ಒಳಗೊಳಗೇ ಕುದಿಯುತ್ತಿದ್ದ ಈ ಪರಿಸರದಲ್ಲಿ ಎಲ್ಲಾ ಸಂಭಾವ್ಯ ಅಪಾಯವನ್ನು ಮೈಮೇಲೆಳೆದುಕೊಂಡು ಶರತ್‌ನನ್ನು ಆಸ್ಪತ್ರೆಗೆ ಸೇರಿಸಿ ಮಾನವೀಯತೆ ಮೆರೆದಿದ್ದ.

ಮಲ್ಲಿಕಾರ್ಜುನ ಬಂಡೆ, ಡಿಕೆ ರವಿ, ತೀರ್ಥಹಳ್ಳಿಯ ನಂದಿತಾ ಸಾವು ಪ್ರಕರಣಗಳಲ್ಲೆಲ್ಲ ಜನರನ್ನು ಉದ್ರೇಕಿಸಿ ನಾಡಿಗೆ ಬೆಂಕಿ ಹಚ್ಚಲು ನೋಡಿದಂತಹ ಚಡ್ಡಿ ಪಟಾಲಮ್ಮು ಇಲ್ಲೂ ಅದೇ ಹೆಣದ ರಾಜಕೀಯದಲ್ಲಿ ಬೇಳೆ ಬೇಯಿಸಿಕೊಳ್ಳಲು ಹೊರಟಿತ್ತು. ಇತ್ತೀಚೆಗೆ ಕೋಣಾಜೆ ಪರಿಸರದಲ್ಲಿ ನಡೆದ ಕಾರ್ತಿಕ್ ರಾಜ್ ಪ್ರಕರಣದಲ್ಲಿ ನಾಟಕವಾಡಿ ಮುಖ ಮೂತಿ ಇಕ್ಕಿಸಿಕೊಂಡಿದ್ದ ಈ ಚಡ್ಡಿಗಳಿಗಿನ್ನೂ ಬುದ್ಧಿಬಂದಂತಿಲ್ಲ, ಯಾರೋ ಹಿಂದೂ ಅಮಾಯಕನ ಹೆಣ ಬಿತ್ತೆಂದರೆ ಇವುಗಳಿಗೆ ಭರ್ಜರಿ ಹಬ್ಬ. ಅದು ಮಡಿಕೇರಿಯ ಕುಟ್ಟಪ್ಪನಾಗಿರಬಹುದು ಅಥವ ಬಂಟ್ವಾಳದ ಶರತ್ತೂ ಆಗಿರಬಹುದು. ಇಲ್ಲಿ ಇವರ ಕಾಳಜಿಗಿಂತ ಓಟಿನ ಲೆಕ್ಕಾಚಾರ ಮತ್ತು ಮುಸಲ್ಮಾನರ ವಿರುದ್ಧದ ದ್ವೇಷವೇ ಮುಖ್ಯವಾಗಿಬಿಡುತ್ತದೆ. ತಮ್ಮ ಕ್ಷೇತ್ರದಲ್ಲಿ ನಯಾಪೈಸೆಯ ಕೆಲಸ ಮಾಡದಿದ್ದರೂ ದೊಂಬಿ ಹಬ್ಬಿಸಲು ಮಾತ್ರ ಸದಾಕಾಲ ಹೊಂಚುವ ಸಂಸದರಾದ ಕರಾವಳಿಗೆ ಬೆಂಕಿ ಇಡುತ್ತೇನೆನ್ನುವಾತನಾಗಲೀ, ಕೂಗು ಮಾರಿ ಉಡುಪಿ ಚಿಕ್ಕಮಗಳೂರಿಗೆ ಸಂಬಂಧಿಸಿದ ಸೋಬಕ್ಕನಾಗಲೀ ಬಂಟ್ವಾಳಕ್ಕೆ ಬಂದು ಸಿದ್ದರಾಮಯ್ಯನ ವಿರುದ್ಧ ಕರುಚಿದ್ದೇ ಕಿರುಚಿದ್ದು.

ಅಶ್ರಫ್ ಕೊಲೆ ಪ್ರಕರಣವೋ ಅಥವ ಮೊನ್ನಿನ ನಿಷೇಧಾಜ್ಞೆ ಉಲ್ಲಂಘಿಸಿ ಶರತ್ ಕುರಿತಾದ ಪ್ರತಿಭಟನೆಯೋ ಇಂತಹ ಯಾವುದೇ ಸಂದರ್ಭದಲ್ಲಿ ಒಂದು ವೇಳೆ ಭಟ್ಟರ ಬಂಧನ ನಡೆದಿದ್ದೇ ಆದರೆ ಇದೇ ನೆಪದಲ್ಲಿ ಕರಾವಳಿಯಾದ್ಯಂತ ಸಾಬರ ಮೇಲಿನ ಹಲ್ಲೆ, ದೊಂಬಿ, ಅಂಗಡಿಗೆ ಬೆಂಕಿ ಇತ್ಯಾದಿಗಳೆಲ್ಲ ಶುರುವಾಗಿ ಜಿಲ್ಲೆಯಲ್ಲಿ ದೊಡ್ಡದೊಂದು ಕೋಮು ಗಲಭೆ ನಡೆಯುವಂತೆ ಯೋಜನೆಯನ್ನು ಇದೀಗಲೇ ಸಿದ್ಧಗೊಳಿಸಲಾಗಿದೆ. ಈ ಗಲಭೆ ಬಡಿದಾಟಗಳಲ್ಲಿ ಕೊನೆಗೆ ಜೈಲುಪಾಲು ಅಥವ ಸಾಯುವವರು ಮಾತ್ರ ಅದೇ ಪೂಜಾರಿ, ಶೆಟ್ಟಿ, ಮಡಿವಾಳರಂತಹ ಶೂದ್ರ ಜನಾಂಗದ ಹಿಂದೂತ್ವದ ಅಮಲು ಹತ್ತಿಸಿ ಛೂ ಬಿಡಲ್ಪಟ್ಟ ಅಮಾಯಕ ತರುಣರು. ಪುರೋಹಿತ ಪಿಂಡಗಳ ಈ 'ಕಾರ್ಯಸಾಧನಾ ಯಜ್ಞ'ಗಳಿಗೆಲ್ಲ ಇಂತಹ 'ಬಲಿ'ಗಳೆಲ್ಲ ಸಹಜ ಅನಿವಾರ್ಯಗಳೆನ್ನುವುದು ಒಂದು ವರ್ಗದ ವಾದ. ಯಾಕೆಂದರೆ ಈ 'ಬಲಿ' ಪ್ರಕ್ರಿಯೆಗೆ ದೊಡ್ಡ ಇತಿಹಾಸವೇ ಇದೆ.

-ಸತೀಶ್ ಪೂಜಾರಿ, ಮಂಗಳೂರು

ಹಂದಿಗೆ, ಕಮಲಕ್ಕೆ ಯಾವಾಗಲೂ ಕೊಳಚೆಯೇ ಇಷ್ಟ

ಮೋದಿಯ ಹೆಸರನ್ನು ಇಸ್ರೇಲಿನಲ್ಲಿ ಒಂದು ಸ್ಥಳೀಯ ಹೂವಿಗೆ ಇಟ್ಟು ಗೌರವಿಸಿದ್ದಾರಂತೆ. ಅಚ್ಛೆ ದಿನ್ ಆಸೆ ತೋರಿಸಿ ಭಾರತದ 125 ಕೋಟಿ ಜನರ ಕಿವಿಗೆ ಹೂವಿಟ್ಟವನ ಹೆಸರನ್ನು ಇಸ್ರೇಲಿನಲ್ಲಿ ಒಂದು ಹೂವಿಗೆ ಇಟ್ಟಿದ್ದು ದೊಡ್ಡ ವಿಡಂಬನೆ. ಧರ್ಮದ ಹೆಸರಲ್ಲಿ ಗುಜರಾತಿನ ಹಲವಾರು ಮುಗ್ಧ ಚಿಕ್ಕ ಚಿಕ್ಕ ಹೂವುಗಳನ್ನು ತ್ರಿಶೂಲದಿಂದ ಹೊಟ್ಟೆ ಬಗೆದು ಹೊಸಕಿ ಹಾಕಿ ಆ ಮಾರಣಹೋಮದ ಮೂಲಕ ಅಧಿಕಾರ ಪಡೆದ ಕಟುಕನ ಹೆಸರನ್ನು ಇಸ್ರೇಲಿನ ಹೂವಿಗೆ ಇಟ್ಟಿದ್ದಾರಂತೆ. ಆ ಮೋದಿಯ ಹೆಸರಿನ ಹೂವಿನಿಂದ 15 ವರ್ಷಗಳಿಂದ ಕೊಳೆಯುತ್ತಿರುವ ಮಾನವ ಮಾಂಸ-ರಕ್ತದ ಘೋರ ವಾಸನೆ ಬರುದು ಕಂಡು ಒಂದು ಪ್ಯಾಲೆಸ್ತೀನ್ ಮಗು ಹೇಸಿಕೊಂಡು ಹೇಳಿತಂತೆ "ಈ ಹೂವಿಗಿಂತ ಮುಳ್ಳೆ ಎಷ್ಟೋ ವಾಸಿ."



ಜೀವಮಾನದಲ್ಲೆಂದೂ ತನ್ನ ಹೆಂಡತಿಗೆ ಅಥವಾ ಒಡಹುಟ್ಟಿದ ತಂಗಿಗೆ ಒಂದು ಎಸಳು ಹೂವು ತಂದು ಕೊಡದಿದ್ದ ಮೋದಿಯ ಹೆಸರನ್ನು ಒಂದು ಹೂವಿಗೆ ಇಸ್ರೇಲ್ ಕೊಟ್ಟಿದ್ದು ವಿಪರ್ಯಾಸ! ಮೇಲಾಗಿ ಅವರ ಪಕ್ಷದ ಚಿನ್ಹ ಕಮಲ ಸಹ ಪರಿಮಳವಿಲ್ಲದ ಹೂವು. ಬೇರೆಯವರ ಊಟದ ತಟ್ಟೆಯಲ್ಲಿ ಏನಿದೆ ಎಂದೇ ನೋಡುತ್ತಾ ಕುಳಿತವರಿಗೆ ಹೊರಗಿನ ನೈಜ ಪ್ರಕೃತಿಯ ಸೌಂದರ್ಯ ಸವಿಯುವಷ್ಟು ರಸಿಕತೆ ಎಲ್ಲಿದೆ? ಅವರ ದೃಷ್ಟಿಯಲ್ಲಿ ತನ್ನದೇ ಮಲ-ಮೂತ್ರದಲ್ಲಿ ಹೊರಳಾಡುವ ಗೋವಿಗಿಂತ ಸುಂದರ ಬೇರಾವುದೂ ಇಲ್ಲ!

ಕರಾವಳಿಯಲ್ಲಿ ಜಾತಿ ಧರ್ಮ ಎಂದು ಸದಾ ಬೆಂಕಿ ಹಚ್ಚುತ್ತಿರುವವರು ಈ ಸಂಗತಿ ಗಮನಿಸಬೇಕು- ತುಳುನಾಡು ಅರ್ಥಾತ್ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಇವತ್ತಿಗೂ ಅತ್ಯಂತ ಹೆಚ್ಚು ಮಲ್ಲಿಗೆ ಬೆಳೆಯುವವರು ಕ್ರಿಶ್ಚಿಯನ್ ಕೃಷಿಕರು. ಅದನ್ನು ಕ್ರಿಶ್ಚಿಯನ್ನರಿಂದ ಠೋಕು ಖರೀದಿಸಿ ಮಾರುಕಟ್ಟೆಗೆ ಕೊಂಡು ಹೋಗಿ ಚಿಲ್ಲರೆಯಾಗಿ ಮಾರುವವರು ಮುಸ್ಲಿಂ ಹೂವಿನ ವ್ಯಾಪಾರಿಗಳು. ಆ ಕ್ರೈಸ್ತರು ಬೆಳೆದ ಮಲ್ಲಿಗೆಯನ್ನು ಮುಸ್ಲಿಮರಿಂದ ಖರೀದಿಸಿ ಹಿಂದೂ ದೇವರಿಗೆ ಹಾಗೂ ಮಹಿಳೆಯರಿಗೆ ಮುಡಿಸುವವರು ಹಿಂದೂಗಳೇ. ಈ ಕ್ರೈಸ್ತ-ಮುಸ್ಲಿಂ-ಹಿಂದೂ ಮಲ್ಲಿಗೆ ಹೂವಿನ ಸರಪಳಿ ಅನೇಕ ದಶಕಗಳಿಂದ ನಡೆದು ಬಂದ ತುಳುನಾಡಿನ ಸಹಬಾಳ್ವೆಯ ಸಂಕೇತ.

ಕರಾವಳಿಯಲ್ಲಿ ರಾಜಕೀಯ ಅಧಿಕಾರಕ್ಕಾಗಿ ಈ ಮಲ್ಲಿಗೆಯಂತಹ ಸೌಹಾರ್ದತೆಗೆ ಈಗ ವಿಷ ಹಾಕುತ್ತಿರುವವರು ಮುಖ್ಯವಾಗಿ ತಮ್ಮ ಜೀವಮಾನದಲ್ಲಿ ಎಂದೂ ಒಂದು ಸಣ್ಣ ಮಲ್ಲಿಗೆ ಸಸಿ ನೆಡದೇ ಇದ್ದ ಹವ್ಯಕರು ಮತ್ತು ಕೊಂಕಣಿ-ಮರಾಠಿ ಬ್ರಾಹ್ಮಣರು. ಇವರು ಇಲ್ಲಿಯ ಮಲ್ಲಿಗೆ ಹೂವಿನ ಆರ್ಥಿಕ ಸರಪಳಿಯ ಸಹಬಾಳ್ವೆ ಅರ್ಥಮಾಡಿಕೊಳ್ಳದೇ ಕೋಮು ಬೆಂಕಿ ಹಚ್ಚಿ ಇಲ್ಲಿಯ ಶಾಂತಿ ಸೌಹಾರ್ದ ಹಾಳು ಮಾಡುತ್ತಿದ್ದಾರೆ.


ಪರಿಮಳವಿಲ್ಲದ ಕಮಲವನ್ನು ತಮ್ಮ ಪಕ್ಷದ ಸಂಕೇತ ಮಾಡಿಕೊಂಡಿರುವ ಕಲ್ಲು ಹೃದಯದವರಿಗೆ ಮೃದು ಮಲ್ಲಿಗೆಯ ಪರಿಮಳ ಮತ್ತು ಸ್ನಿಗ್ಧ ಸೌಂದರ್ಯ ಹೇಗೆ ಇಷ್ಟವಾಗಲು ಸಾಧ್ಯ? ಹಂದಿಗೆ ಮತ್ತು ಕಮಲಕ್ಕೆ ಯಾವಾಗಲೂ ಕೊಳಚೆಯೇ ಇಷ್ಟ ತಾನೇ. ಬರ್ಬರ ಹುಂಬ ಆರ್ಯನ್ನರು ಭಾರತಕ್ಕೆ ವಲಸೆ ಬರುವಾಗ ಕತ್ತಿ ಭರ್ಜಿಯಂತಹ ಆಯುಧ ಹಿಡಿದುಕೊಂಡು ಬಂದರೇ ಹೊರತು ಹೂವಿನ ಬೀಜ ಅಥವಾ ರಾಗಿ ಜೋಳ ಭತ್ತ ಗೋದಿಯ ಬೀಜ ಹಿಡಿದುಕೊಂಡು ಬರಲಿಲ್ಲ. ಹಾಗಾಗಿ ಅವರ ಈಗಿನ ವಂಶಸ್ಥರಿಗೆ ಹಳ್ಳಿಯ ಕೃಷಿಕರ ಶಾಂತಿ ಸಹಬಾಳ್ವೆ ಅರ್ಥವಾಗಲು ಹೇಗೆ ಸಾಧ್ಯ? ಅಮಾಯಕರ ರಕ್ತದ ಹೊಳೆಯಲ್ಲಿ ಮೀನು ಹಿಡಿದು ಶೂದ್ರರ ಹೆಣಗಳನ್ನೇ ಮೆಟ್ಟಲು ಮಾಡಿಕೊಂಡು ರಾಜಕೀಯ ಅಧಿಕಾರ ಹಸ್ತಗತ ಮಾಡಿಕೊಂಡರೆ ಅಲ್ಲಿಗೆ ಈ ಸವರ್ಣೀಯ ನೀಚರ ಉದ್ದೇಶ ಪೂರ್ಣ!

-ಅನಿಲ್ ಕುಮಾರ್ ಪೂಜಾರಿ, ಮಂಗಳೂರು

ಮುಟ್ಟಾದ ಹೆಂಗಸು ಅಪವಿತ್ರ, ಅಮಂಗಳ ಎನ್ನುವುದು 'ಜೀವ ವಿರೋಧಿ

ಎಂತೆಂತಹ ಶತ ಮೂರ್ಖ-ಮೂರ್ಖಿಯರು ಬಿಜೆಪಿಯಲ್ಲಿ ಇದ್ದಾರೆ ನೋಡಿ. ಮಾಳವಿಕಾ ಎಂಬ ಟಿವಿ ನಟಿ ಹಾಗೂ ಬಿಜೆಪಿಯ ಸದಸ್ಯೆ ಮೆನೋಪಾಸ್ ಮುಟ್ಟಿದರೂ ಇನ್ನೂ ಬಡ ಮತ್ತು ಮಧ್ಯಮ ವರ್ಗದ ಮಹಿಳೆಯರ ಋತುಚಕ್ರಗಳ ಸಮಯದಲ್ಲಿ ಏನು ಬೇಕಾಗುತ್ತದೆ ಎಂಬುದನ್ನೂ ಅರ್ಥಮಾಡಿಕೊಂಡಿಲ್ಲ, ಬಿಜೆಪಿಯವರಿಗೆ ಇಂತಹ ಅತಿ ಬುದ್ಧಿವಂತರೇ ಹೆಚ್ಚು ಇಷ್ಟ. ಯಾಕೆಂದರೆ ಇಂತಹವರು ಆಲೋಚಿಸದೇ ಏನೇನೋ ಹುಚ್ಚುಚ್ಚಾಗಿ ಆಡಿ ಬಿಡುತ್ತಾರೆ ಹಾಗೂ ಅದು ಭಕ್ತ-ಕುರಿಗಳಿಗೆ ತುಂಬಾ ಖುಷಿ ಕೊಡುತ್ತದೆ.

ಸ್ಯಾನಿಟರಿ ಪ್ಯಾಡ್ ಬಳಸದೇ ಇದ್ದ ಒಂದು ಮಡಿವಂತರ ಮನೆಯಲ್ಲಿ ಒಂದು ಸ್ಪಾಸ್ಟಿಕ್ (ಮಂದ ಬುದ್ಧಿಯ) ಹುಡುಗಿ 12 ವರ್ಷದವಳಾದಾಗ ಮೊದಲ ಸಾರಿ ಮುಟ್ಟಾದಾಗ ಅವಳಿಗೆ ಸ್ವಚ್ಛತೆ ಕಲಿಸಲು ಮನೆಯವರು ಪಟ್ಟ ಪಾಡು ನೋಡಿದಾಗ ಸ್ಯಾನಿಟರಿ ಪ್ಯಾಡ್ ಎಷ್ಟು ಉಪಯುಕ್ತ ಎಂದು ಮನೆಯ ಹೆಂಗಸರಿಗೆ ಮಾತ್ರವಲ್ಲ ಗಂಡಸರಿಗೂ ಅರ್ಥವಾಗಿತ್ತು. ನಂತರ ಪ್ರತಿ ತಿಂಗಳೂ ಮೂರು-ನಾಲ್ಕು ದಿನ ಆ ಸ್ಪಾಸ್ಟಿಕ್ ಹುಡುಗಿಯಿಂದಾಗಿ ಆ ಮನೆಯವರು ಪಡುತ್ತಿದ್ದ ಪಡಿಪಾಟಲು ಹಾಗೂ ಕೊನೆಗೆ ಅವರು ಅವಳಿಗೆ ಸ್ಯಾನಿಟರಿ ಪ್ಯಾಡ್ ಬಳಸಲು ಕಲಿಸಿ ತಮ್ಮ ಸಂಕಟದಿಂದ ಭಾಗಶಃ ಹೊರಬಂದಿದ್ದು ಆ ಮನೆಯವರಿಗೆ ಮಾತ್ರವಲ್ಲ ನಮ್ಮಂತಹ ನೆರೆಹೊರೆಯವರಿಗೂ ನಿಟ್ಟುಸಿರು ಬಿಡುವಂತಾ ಗಿತ್ತು. ಆದರೆ ಬಿಜೆಪಿಯವರಿಗೆ ಇದೆಲ್ಲಾ ಅರ್ಥವಾಗ ಬೇಕಾದರೆ ಮೊದಲು ಅವರೆಲ್ಲರ ಮನೆಯಲ್ಲಿ ಒಂದೊಂದು ಸ್ಪಾಸ್ಟಿಕ್-ಮಂದಬುದ್ಧಿಯ ಹುಡುಗಿ ಹುಟ್ಟಬೇಕು.



ಮಾಳವಿಕಮ್ಮ 'ಟ್ಯಾಂಪೂನ್' ತಯಾರಿಸುವ ಕ
ಜಾಹೀರಾತು ಗುತ್ತಿಗೆ ಪಡೆದಂತೆ ಕಾಣುತ್ತಿ
ಟ್ಯಾಂಪೂನ್ ಸುಮಾರು 30-35 ವರ್ಷಗಳಿಂದ
ಅಂಗಡಿಗಳಲ್ಲಿ ಲಭ್ಯವಿದ್ದರೂ ಅದು ದುಬಾರಿಯಾಗ
ಬಡ ಹಾಗೂ ಮಧ್ಯಮ ವರ್ಗದ ಮಹಿಳೆಯರು ಸ
ಪ್ಯಾಡುಗಳನ್ನೇ ಬಳಸುತ್ತಿದ್ದರು. ಹಾಗಾಗಿ ಟ್ಯಾಂಪೂನ್
ಏನೆಂದು ಬಹಳಷ್ಟು ವಿದ್ಯಾವಂತ ಮಹಿಳೆ
ಗೊತ್ತಿರಲಿಲ್ಲ. ಆದರೆ ಈಗ ಮಾಳವಿಕಾಳ ಶಿಫಾರಸಿ
ಟ್ಯಾಂಪೂನ್ ಎಂಬ ದುಬಾರಿ ಸ್ಯಾನಿಟರಿ ವಸ್ತುವಿ
ಡಿಮಾಂಡ್ ಬರಬಹುದು. ಇದರಿಂದ ಮಾ
ಒಳ್ಳೆಯ ಕಮಿಷನ್ ಸಿಗಲಿದೆ.

ಮುಟ್ಟಿನ ದಿನಗಳು 'ಅಪವಿತ್ರ ದಿನಗಳ
ದಿನಗಳಲ್ಲಿ ಮಹಿಳೆಯರು ಮಂಗಳ ಕಾಯ
ಪಾಲ್ಗೊಳ್ಳಬಾರದು ಎಂಬ ಭಾರತೀಯ ಸ
ಮೂರ್ಖ ಪದ್ಧತಿ ಕೊನೆಗೊಳ್ಳಬೇಕು. ನಿಜವಾ
ದಿನಗಳು ಪವಿತ್ರ ದಿನಗಳೇ ಆಗಿವೆ. ಯಾಕೆಂದರ
ಜೀವ ಸೃಷ್ಟಿಗೆ ಹೆಣ್ಣಿನ ದೇಹವನ್ನು ಅಣಿಗೊ
ಪ್ರಕೃತಿಯೇ ಸಸ್ತನಿಗಳಿಗಾಗಿ ರಚಿಸಿರುವ ತಂತ್ರವಿದು.
ಸಸ್ತನಿ ಪ್ರಾಣಿಗಳಲ್ಲಿ 'ಪುನರ್ ಉತ್ಪತ್ತಿ' ಅರ್ಥಾತ್ ಮ
ಕಾರ್ಯ ನಿರಂತರವಾಗಿ ತನ್ನಿಂದ ತಾನೇ ನಡೆಯ
ಎಂದು ಪ್ರಕೃತಿಯೇ ರಚಿಸಿದ ಜೈವಿಕ ನಿಯಮ
ಎಲ್ಲಾ ವಿಷಯದಲ್ಲೂ ಪ್ರಕೃತಿಯ ನಿಯಮವೇ ಅ
ಅದನ್ನು ದೇವರು ಸಹ ಬದಲಿಸಲು ಸಾ
ಪ್ರಕೃತಿದೇವಿಯ ಹೊಸ ಜೀವ ಸೃಷ್ಟಿಯ ಪವಿತ್ರ ಕಾ
ಮಹಿಳೆ ಪಾಲ್ಗೊಳ್ಳುವುದು ಮಂಗಳ ಕಾರ್ಯ
ಅಪವಿತ್ರ ಕಾರ್ಯ ಹೇಗಾಗಬಲ್ಲದು? ಮುಟ್ಟಾದ
ಅಪವಿತ್ರ, ಅಮಂಗಳ ಎಂಬ ಶತಮೂರ್ಖ ವಿಚಾ
ಭಾರತೀಯರ ತಲೆಯಲ್ಲಿ ತುಂಬಿರುವ ವೈದಿಕ ಸ
'ಜೀವ ವಿರೋಧಿ' ಹಾಗೂ 'ಪ್ರಕೃತಿ-ವಿರೋದಿ'
ಎನ್ನಲೇ ಬೇಕಾಗುತ್ತದೆ. ಪುರುಷ ಪ್ರಧಾನ ಮ
ಬಿಜೆಪಿಗರು ದೇಶಕ್ಕಾಗಿ ತಮ್ಮ ಕೊರಳ ನೆತ್ತರು ಹ
ಬದಲು ಮಹಿಳೆಯರ ಸ್ಯಾನಿಟರಿ ಪ್ಯಾಡುಗಳಿಂದ
ಹರಿಸಲಾರಂಭಿಸಿದ್ದಾರೆ ಎಂಬುದು ದುರದೃಷ್ಟಕ

-ವೀರಪ್ಪ ಡಿ.ಎನ್. ಮ

ಶರತ್ ಸಾವು ಸಂಘಿಗಳಿಗೆ ಬೇಕಿ

ಹಿಂದಿನ ಒಂದು ದಶಕದಿಂದ ಕರಾವಳಿಯಲ್ಲಿ
ಸಂಘಿ ಕಾಲಾಳುಗಳ ಕೊಲೆ ಸ್ವತಃ ಸಂಘಿಗಳಿಂದಲೇ
ಹಾಗೂ ಈ ಸಂಘಿ ಕಾಲಾಳುಗಳ ಹತ್ಯೆಗಳ ಆ
ಮುಸ್ಲಿಮರ ಮೇಲೆ ಹೊರಿಸುವ ಪ್ರಯತ್ನ ಪ್ರತಿ
ನಡೆದು ಅದು ವಿಫಲವಾಗಿ ಸಂಘಿ ನೇತಾ
ಮುಖಭಂಗವಾಗಿತ್ತು. ಸತ್ತ ಸಂಘಿ ಕಾಲಾಳ
ಹೆಚ್ಚಿನವರು ಬಿಲ್ಲವ ಜಾತಿಯವರೇ ಆಗಿದ್ದರು.
ಸಂಘಿ ಗೂಂಡಾಗಳೂ ಮುಸ್ಲಿಮರ ಹತ್ಯೆ ಮಾಡಿದ
ಸಿಕ್ಕಿ ಬಿದ್ದ ಕೊಲೆಗಾರ ಸಂಘಿಗಳಲ್ಲಿ ಹೆಚ್ಚಿನವರು ಬ
ಆಗಿದ್ದರು. ಹೀಗೆ ಸತ್ತ ಸಂಘಿ ಕಾಲಾಳುಗಳಲ್ಲೂ ಬ




EPW ಸಂಪಾದಕೀಯ

ಕೃಪೆ: *Economic and Political Weekly*
July 8, 2017. Vol. 52. No. 27

■ ಅನು: ಶಿವಸುಂದರ್

ಒತ್ತಡಗಳಿಗೆ ಮಣಿಯುವ ರಾಷ್ಟ್ರಪತಿಗಳೇ?



ರಾಷ್ಟ್ರಪತಿ ಭವನದಲ್ಲಿ ರಾಮನಾಥ ಕೋವಿಂದರ ಅವಧಿಯು ಕೇಂದ್ರೀಕರಣದ ಧೋರಣೆಗಳನ್ನು ಇನ್ನಷ್ಟು ಗಟ್ಟಿಪಡಿಸಬಹುದು.

ಭಾರತೀಯ ಜನತಾ ಪಕ್ಷದ (ಬಿಜೆಪಿ) ನೇತೃತ್ವದ ನ್ಯಾಷನಲ್ ಡೆಮಾಕ್ರಟಿಕ್ ಅಲಿಯನ್ಸ್ (ಎನ್‌ಡಿಎ-ರಾಷ್ಟ್ರೀಯ ಪ್ರಜಾತಾಂತ್ರಿಕ ಒಕ್ಕೂಟ) ರಾಷ್ಟ್ರಪತಿ ಪದವಿಗೆ ರಾಮನಾಥ ಕೋವಿಂದರನ್ನು ಅಭ್ಯರ್ಥಿಯಾಗಿ ಘೋಷಿಸಿರುವುದರಿಂದ ಬಿಜೆಪಿಗೆ ಎರಡು ಲಾಭಗಳಿವೆ. ಒಂದೆಡೆ ಅದು ದಲಿತ ಹಿತಾಸಕ್ತಿಗಳ ಬಗೆಗೆ ಬಾಯುಪಚಾರದ ಮಾತುಗಳನ್ನಾಡುತ್ತಲೇ ಮತ್ತೊಂದೆಡೆ ಹೆಚ್ಚೆಚ್ಚು ಅಧಿಕಾರವನ್ನು ಕೇಂದ್ರೀಕರಿಸಿಕೊಳ್ಳುವ ಅವಕಾಶವನ್ನು ದಕ್ಕಿಸಿಕೊಂಡಿದೆ. ಜುಲೈ 17ರಂದು ನಡೆಯುವ ರಾಷ್ಟ್ರಪತಿ ಚುನಾವಣೆಯ ಫಲಿತಾಂಶವೇನಾಗ ಬಹುದೆಂಬುದು ಹೆಚ್ಚೂಕಡಿಮೆ ಸ್ಪಷ್ಟವಾಗಿಬಿಟ್ಟಿದೆ. ಬಿಜು ಜನತಾ ದಳ, ಜನತಾ ದಳ (ಯುನೈಟೆಡ್) ಮತ್ತು ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್)ನಂಥ ಪಕ್ಷಗಳನ್ನೂ ಒಳಗೊಂಡಂತೆ ಎನ್‌ಡಿಎಗೆ ಸೇರಿಲ್ಲದ ಇತರ ಹಲವಾರು ಪಕ್ಷಗಳು ಈಗಾಗಲೇ ರಾಮನಾಥ್ ಕೋವಿಂದ್ ಅವರಿಗೆ ತಮ್ಮ ಬೆಂಬಲವನ್ನೂ ಘೋಷಿಸಿವೆ. ಹೀಗಾಗಿ ರಾಷ್ಟ್ರಪತಿಯನ್ನು ಚುನಾಯಿಸುವ ಮತಕ್ಷೇತ್ರದ ಶೇ. 55ರಷ್ಟು ಮತಗಳನ್ನೂ ಕೋವಿಂದ್ ಅವರು ಪಡೆದುಕೊಳ್ಳುವ ನಿರೀಕ್ಷೆ ಇದೆ. ಆದ್ದರಿಂದ ಅವರೇ ಪ್ರಣಬ್ ಮುಖರ್ಜಿ ಅವರ ಉತ್ತರಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ರಾಮನಾಥ ಕೋವಿಂದರನ್ನು ರಾಷ್ಟ್ರಪತಿ ಅಭ್ಯರ್ಥಿಯನ್ನಾಗಿ ಘೋಷಿಸುವ ಸಂದರ್ಭದಲ್ಲಿ ಎನ್‌ಡಿಎ ಮತ್ತು ಬಿಜೆಪಿಯ ಅಧ್ಯಕ್ಷರಾಗಿರುವ ಅಮಿತ್ ಶಾ ಕೋವಿಂದರ ಹಿನ್ನೆಲೆಗೆ ಒತ್ತು ಕೊಡುತ್ತಾ ಬಡ ದಲಿತ ಕುಟುಂಬದಲ್ಲಿ ಹುಟ್ಟಿ ಕಷ್ಟಪಟ್ಟು ಮೇಲೆ ಬಂದವರೆಂದು ಬಣ್ಣಿಸಿದರು. ನಿರೀಕ್ಷೆಯಂತೆ ಕೋವಿಂದರ ದಲಿತ ಹಿನ್ನೆಲೆಯು ಸಾಕಷ್ಟು ಆಕರ್ಷಣೆ ಮತ್ತು ಚರ್ಚೆಯನ್ನು ಹುಟ್ಟುಹಾಕಿತು. ಅವರಿಗೆ ಗೋಪಾಲ ಕೃಷ್ಣ ಗಾಂಧಿಯವರನ್ನು ರಾಷ್ಟ್ರಪತಿ ಅಭ್ಯರ್ಥಿಯನ್ನಾಗಿಸಲು ಒಪ್ಪಿಸುವ ಕುರಿತು ಅಳೆದು ಸುರಿದೂ ಲೆಕ್ಕ ಹಾಕುತ್ತಿದ್ದ ಬಹುಪಾಲು ಪ್ರತಿಪಕ್ಷಗಳು ಲೋಕಸಭೆಯ ಮಾಜಿ ಸಭಾಪತಿ ಮೀರಾ ಕುಮಾರ್ ಅವರನ್ನು ತಮ್ಮ ಅಭ್ಯರ್ಥಿಯನ್ನಾಗಿ ಘೋಷಿಸಿವೆ. ಆ ಮೂಲಕ ಈ ದೇಶದ ಸೇನಾಪಡೆಗಳ ಮತ್ತು ಪ್ರಭುತ್ವದ ಮುಖ್ಯಸ್ಥರ ಹುದ್ದೆಗೆ ಒಬ್ಬ ದಲಿತ ಪುರುಷ ಮತ್ತು ಒಬ್ಬ ದಲಿತ ಮಹಿಳೆಯ ನಡುವೆ ಸ್ಪರ್ಧೆ ನಡೆಯಲು ಕಾಂಗ್ರೆಸ್ ದಾರಿ ಮಾಡಿಕೊಟ್ಟಿದೆ.

ಈ ಬೆಳವಣಿಗೆಯಲ್ಲಿ ಹಲವಾರು ಅಂಶಗಳು ಪಾತ್ರ ವಹಿಸಿವೆ. ಹೈದರಾಬಾದ್ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದ ರೋಹಿತ್ ವೇಮುಲಾ ಅವರ ಅಸಹಜ ಸಾವು, ಗುಜರಾತಿನ ಊನಾದಲ್ಲಿ ನಾಲ್ವರು ದಲಿತರ ಮೇಲೆ ಗೋ-ರಕ್ಷಕರು ನಡೆಸಿದ ಹಲ್ಲೆ, ಉತ್ತರ ಪ್ರದೇಶದ ಸಹರಾನ್ಪುರ್‌ನಲ್ಲಿ ದಲಿತರ ಮೇಲೆ ನಡೆದ ಸರಣಿ ಹಲ್ಲೆಗಳನ್ನೂ ಒಳಗೊಂಡಂತೆ ಇತ್ತೀಚಿನ ದಿನಗಳಲ್ಲಿ ದಲಿತರ ಮೇಲೆ ನಡೆಯುತ್ತಿರುವ ದಾಳಿಗಳನ್ನು ನಿಲ್ಲಿಸುವ ಬಗ್ಗೆ ಯಾವುದೇ ಪರಿಣಾಮಕಾರಿ ಕ್ರಮ ತೆಗೆದುಕೊಳ್ಳದಿರುವುದರಿಂದ ನರೇಂದ್ರ ಮೋದಿ ಸರ್ಕಾರವು ಸಾಕಷ್ಟು ಟೀಕೆಗಳನ್ನು ಎದುರಿಸಿತ್ತು. ಕೋವಿಂದ್ ಅವರನ್ನು ರಾಷ್ಟ್ರಾಧ್ಯಕ್ಷ ಪದವಿಯ ಉಮೇದುವಾರರನ್ನಾಗಿ ಮಾಡಿರುವುದು ಮೇಲಿನ ಎಲ್ಲಾ ಘಟನೆಗಳಲ್ಲಿ ಬಿಜೆಪಿ ನಡೆದುಕೊಂಡ ರೀತಿಯನ್ನು ಮುಚ್ಚಿಹಾಕುವ ಒಂದು ಸಿನಿಕ ಪ್ರಯತ್ನವಾಗಿದೆ. ಕೋವಿಂದರ ಉಮೇದುವಾರಿಕೆಯು ಬಿಜೆಪಿ ಮತ್ತು ಸಂಘಪರಿವಾರದ ಇನ್ನೂ ಹಲವಾರು ದೂರಗಾಮಿ ಯೋಜನೆಗಳನ್ನು ಜಾರಿಗೆ ತರಲು ಪೂರಕವಾಗಿದೆ. ಅವುಗಳಲ್ಲಿ ಪ್ರಮುಖವಾದದ್ದು ದಲಿತರ ಎಚ್ಚೆತ್ತ ರಾಜಕೀಯ ಪ್ರಜ್ಞೆಯನ್ನು ಭ್ರಷ್ಟಗೊಳಿಸುವುದು ಮತ್ತು ಅಂತರಾಳದಲ್ಲಿ ಬ್ರಾಹ್ಮಣವಾದವನ್ನು ಮತ್ತು ಜಾತಿ ವ್ಯವಸ್ಥೆಯನ್ನು ಎತ್ತಿಹಿಡಿಯುವ ಹಾಗೂ ಅಲ್ಪಸಂಖ್ಯಾತರ ಅತ್ಯಂತ ಕಡು ದ್ವೇಷಿಯಾದ ಸಂಘಪರಿವಾರ ಪ್ರಣೀತ ಏಕರೂಪಿ ಹಿಂದೂವಾದದೊಳಗೆ ದಲಿತರನ್ನು ಒಳಗೊಳ್ಳುವುದು; ಅಂಬೇಡ್ಕರ್ ಅವರ ಪರಂಪರೆಯನ್ನು ವಶಪಡಿಸಿಕೊಳ್ಳುವುದು; ಉತ್ತರ ಭಾರತದಲ್ಲಿ ದಲಿತರನ್ನು ಮತ್ತು ಇತರ ಹಿಂದುಳಿದ ವರ್ಗಗಳಲ್ಲಿ ವಿಭಜನೆ ತಂದು ಅವರನ್ನು ಇತರ ಪಕ್ಷಗಳ ಹಿಡಿತದಿಂದ ತಮ್ಮ ತೆಕ್ಕೆಗೆ ತಂದುಕೊಳ್ಳುವುದು. ಕೋವಿಂದರ ಉಮೇದುವಾರಿಕೆಯು ವಿರೋಧ ಪಕ್ಷಗಳಲ್ಲಿರುವ ಒಡಕನ್ನೂ ಮತ್ತು ಅವರ ಪರಿಣಾಮಶೂನ್ಯ ರಾಜಕೀಯ ತಂತ್ರಗಾರಿಕೆಯ ನಿರರ್ಥಕತೆಯನ್ನೂ ಎತ್ತಿತೋರಿಸಿದೆ. ರಾಮನಾಥ ಕೋವಿಂದರ ಉಮೇದುವಾರಿಕೆಯ ಹಿಂದಿನ ಅಸ್ಮಿತೆಯ ರಾಜಕೀಯದ ಬಗ್ಗೆ ಮತ್ತು ಬಿಜೆಪಿಯ ಕುತಂತ್ರೀ ರಾಜಕಾರಣದ ಬಗ್ಗೆ ಸಾಕಷ್ಟು ವಿಶ್ಲೇಷಣೆ ಮಾಡಲಾಗಿದ್ದರೂ, ಕೋವಿಂದರ ನಿರೀಕ್ಷಿತ ವಿಜಯದ ದೂರಗಾಮಿ ಪರಿಣಾಮಗಳ ಬಗ್ಗೆಯೂ ಸರಿಯಾದ ಅಂದಾಜು ಹೊಂದಿರಬೇಕಾದದ್ದು ಸಹ ಅಷ್ಟೇ ಮುಖ್ಯವಾಗಿದೆ.

1977ರಲ್ಲಿ ಜನತಾ ಪಕ್ಷವು ಚುನಾವಣೆಯಲ್ಲಿ ಗೆದ್ದ ನಂತರ ಪ್ರಧಾನಿಯಾದ ಮೊರಾರ್ಜಿ ದೇಸಾಯಿ ಅವರಿಗೆ ಕೋವಿಂದ್ ಅವರು ಆಪ್ತ ಕಾರ್ಯದರ್ಶಿಯಾಗಿದ್ದರು. 1980ರ ಚುನಾವಣೆಯಲ್ಲಿ ಇಂದಿರಾ ಗಾಂಧಿಯವರು ಗೆದ್ದು ಮತ್ತೆ ಅಧಿಕಾರಕ್ಕೆ ಮರಳಿದಾಗಲೂ ಕೋವಿಂದ್ ಅವರನ್ನು ಸುಪ್ರೀಂ ಕೋರ್ಟಿನಲ್ಲಿ ಕೇಂದ್ರದ ವಕೀಲರನ್ನಾಗಿ ಉಳಿಸಿಕೊಳ್ಳಲಾಗಿತ್ತು. ಬಿಜೆಪಿಯ ಮೊದಮೊದಲ ದಲಿತ ಸದಸ್ಯರಲ್ಲಿ ಒಬ್ಬರಾಗಿದ್ದ ಕೋವಿಂದ್ ಅವರು (ಅವರು ಬಿಜೆಪಿಯನ್ನು ಸೇರಿಕೊಂಡಿದ್ದು 1991ರಲ್ಲಿ) ಪಕ್ಷದ ಹಲವಾರು ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದ್ದಾರೆ–ಉತ್ತರ ಪ್ರದೇಶ ಘಟಕದ ಜಂಟಿ ಕಾರ್ಯದರ್ಶಿ, ಅದರ ಪರಿಶಿಷ್ಟ ಜಾತಿ ಮೋರ್ಚಾದ ಅಧ್ಯಕ್ಷ ಮತ್ತು ಪಕ್ಷದ ರಾಷ್ಟ್ರೀಯ ವಕ್ತಾರ.. ಇತ್ಯಾದಿ. 1991ರಲ್ಲಿ ಅವರು ಉತ್ತರಪ್ರದೇಶದಿಂದ ಲೋಕಸಭೆಗೆ ಸ್ಪರ್ಧಿಸಿ ಸೋತಿದ್ದರು. ಉತ್ತರ ಪ್ರದೇಶದ ಠಾಕೂರ್ ಲಾಬಿಯೊಂದಿಗೆ ಅವರಿಗೆ ಅಂಥಾ ಸಸ್ನೇಹ ಸಂಬಂಧವೇನೂ ಇರಲಿಲ್ಲವೆಂದೂ ಹೇಳಲಾಗುತ್ತದೆ. 1994 ಮತ್ತು 2006ರ ನಡುವೆ ಬಿಜೆಪಿಯು ಅವರನ್ನು ಎರಡು ಬಾರಿ ರಾಜ್ಯಸಭೆಗೆ ಆಯ್ಕೆ ಮಾಡಿ ಕಳಿಸಿತ್ತು. ಆ ಅವಧಿಯಲ್ಲಿ ಅವರು ಹಲವಾರು ಸಂಸದೀಯ ಸಮಿತಿಗಳ ಸದಸ್ಯರಾಗಿಯೂ ಕೆಲಸ ನಿರ್ವಹಿಸಿದ್ದರು. ಅಟಲ ಬಿಹಾರಿ ವಾಜಪೇಯಿ ಸರ್ಕಾರದ ಅವಧಿಯಲ್ಲಿ ಅವರು ವಿಶ್ವಸಂಸ್ಥೆಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. 2015ರಲ್ಲಿ ಅವರನ್ನು ಬಿಹಾರದ ರಾಜ್ಯಪಾಲರನ್ನಾಗಿ ನೇಮಿಸಲಾಯಿತು.

ಭಾರತವು ಹಲವು ಬಗೆಯ ರಾಷ್ಟ್ರಪತಿಗಳನ್ನು ಕಂಡಿದೆ. ಫಕ್ರುದ್ದೀನ್ ಅಲಿ ಅಹಮದ್ ಅವರು ಇಂದಿರಾ ಗಾಂಧಿಯವರ ತೀರ್ಮಾನಕ್ಕೆ ಮಣಿದು ದೇಶದ ಮೇಲೆ ತುರ್ತುಸ್ಥಿತಿಯನ್ನು ಹೇರಿ ಸಂವಿಧಾನವನ್ನು ತಾತ್ಕಾಲಿಕವಾಗಿ ಅಮಾನತ್ತಿನಲ್ಲಿಟ್ಟ ಕುಖ್ಯಾತಿಯನ್ನು ಪಡೆದಿದ್ದರು. ಪ್ರಾರಂಭದಲ್ಲಿ ಒತ್ತಡಕ್ಕೆ ಮಣಿಯುವ ರಾಷ್ಟ್ರಪತಿ ಎಂದೇ ಪರಿಗಣಿಸಲಾಗಿದ್ದ ಗ್ಯಾನಿ ಜೇಲ್ ಸಿಂಗ್ ಅವರು ಹಲವಾರು ಸಂದರ್ಭಗಳಲ್ಲಿ ಅಂದಿನ ಪ್ರಧಾನಿ ರಾಜೀವ್ ಗಾಂಧಿಯವರ ನಿರ್ಣಯಗಳಿಗೆ ವಿರೋಧ ಒಡ್ಡಿದ್ದರು. ಅಷ್ಟು ಮಾತ್ರವಲ್ಲ, ರಾಷ್ಟ್ರಪತಿ ಕಚೇರಿಯ ಮೇಲೆ ಸರ್ಕಾರವು ಗೂಢಚರ್ಯೆ ನಡೆಸುತ್ತಿದೆ ಎಂಬ ವಿವಾದವು ಹತ್ತಿಕೊಂಡ ಸಂದರ್ಭದಲ್ಲಿ ರಾಜೀವ್ ಗಾಂಧಿಯವರನ್ನು ಹುದ್ದೆಯಿಂದ ವಜಾಮಾಡುವ ಬೆದರಿಕೆಯನ್ನೂ ಹಾಕುವಂಥ ನಾಟಕೀಯ ಬೆಳವಣಿಗೆಗಳು ನಡೆದಿದ್ದವು. ತೀರಾ ಇತ್ತೀಚೆಗೆ ಕೆ.ಆರ್. ನಾರಾಯಣನ್ ಅವರು ಸ್ವತಂತ್ರ ಭಾರತದ ವೈಫಲ್ಯದ ಬಗ್ಗೆ ವಿಶ್ಲೇಷಣೆ ನಡೆಸಿ ಭಾರತದ ಸಂವಿಧಾನಕ್ಕೆ ಅಂಬೇಡ್ಕರ್ ಕೊಡುಗೆಯ ಮಹತ್ವವನ್ನು ಎತ್ತಿ ಹಿಡಿದ ಪ್ರಖ್ಯಾತಿಯನ್ನು ಪಡೆದಿದ್ದರು. ಇದು ಅಂದಿನ ವಾಜಪೇಯಿ ಸರ್ಕಾರವು ಹೊಂದಿದ್ದ ಹಲವಾರು ನಿಲುವುಗಳಿಗೆ ವ್ಯತಿರಿಕ್ತವಾಗಿತ್ತು. ಇತ್ತೀಚಿನ ಇಬ್ಬರು ರಾಷ್ಟ್ರಪತಿಗಳಾದ ಪ್ರತಿಭಾ ದೇವಿಸಿಂಗ್ ಪಾಟೀಲ್ ಮತ್ತು ಪ್ರಣಬ್ ಮುಖರ್ಜಿಯವರುಗಳು ಪಕ್ಷದ ಹುದ್ದೆಯನ್ನು ನಿರ್ವಹಿಸಿದ್ದ ರೀತಿಗಳು ಭಿನ್ನಭಿನ್ನವಾಗಿದ್ದರೂ ಅವರಿಬ್ಬರು ಎಂದಿಗೂ ಆಳುವ ಸರ್ಕಾರಗಳನ್ನು ಎದುರುಹಾಕಿಕೊಳ್ಳಲಿಲ್ಲ. ಇಲ್ಲಿ ಮುಖರ್ಜಿಯವರು ಧರ್ಮ ನಿರಪೇಕ್ಷತೆ ಮತ್ತು ಸ್ವಾತಂತ್ರ್ಯಗಳ ಬಗ್ಗೆ ಆಗಾಗ ಟಿಪ್ಪಣಿಗಳನ್ನು ಮಾಡುತ್ತಿದ್ದರೂ, ಸರ್ಕಾರದ ಎಲ್ಲಾ ತೀರ್ಮಾನಗಳಿಗೂ ಸಮ್ಮತಿಯನ್ನು ನೀಡುತ್ತಿದ್ದರು. ಮಾತ್ರವಲ್ಲ ಭೂ ಸ್ವಾಧೀನ ಕಾಯಿದೆಯಂಥ ಸರ್ಕಾರದ ಹಲವಾರು ವಿವಾದಾಸ್ಪದ ಸುಗ್ರೀವಾಜ್ಞೆಗಳಿಗೂ ಸರ್ಕಾರಿ ಆದೇಶಗಳಿಗೂ ಒಪ್ಪಿಗೆ ನೀಡಿದ್ದರು.

ಕೋವಿಂದ್ ಅವರು ಆಳುವ ಸರ್ಕಾರಗಳ ಆಶಯಗಳನ್ನು ಯಾವುದೇ ಪರಿಶೀಲನೆಗೆ ಒಳಪಡಿಸದೆ ಕುರುಡಾಗಿ ಒಪ್ಪಿಕೊಳ್ಳುವಷ್ಟು ಮಣಿಯುತ್ತಾರೆಯೇ? ಈ ಪ್ರಶ್ನೆಗೆ ಕಾಲವೇ ಉತ್ತರ ಕೊಡಬೇಕೆನ್ನುವುದು ನಿಜವಾದರೂ ಅವರ ರಾಜಕೀಯವು ಆಳುವ ಸರ್ಕಾರದ ರಾಜಕೀಯಕ್ಕಿಂತ ಭಿನ್ನವಾಗಿರುತ್ತದೆಂದು ನಂಬಲು ಯಾವುದೇ ಕಾರಣಗಳಿಲ್ಲ. 320 ಎಕರೆ ವಿಸ್ತೀರ್ಣದಲ್ಲಿ 340 ಕೊಠಡಿಗಳನ್ನು ಹೊಂದಿದ್ದು, ವಿಶ್ವದ ಅತಿ ದೊಡ್ಡ ನಿವಾಸವೆಂದು ಕರೆಸಿಕೊಳ್ಳುವ ರಾಷ್ಟ್ರಪತಿ ಭವನದಲ್ಲಿ ವಾಸಿಸಲಿರುವ ಕೋವಿಂದರ ಅವಧಿಯನ್ನು ಈ ಹಿನ್ನೆಲೆಯಲ್ಲೇ ವಿಶ್ಲೇಷಿಸಬೇಕು. ಈವರೆಗೆ ಅವರೊಬ್ಬ ಆಕ್ರಮಣಶೀಲ ಹೋರಾಟಗಾರರೆಂದೇನೂ ಗುರುತಿಸಿಕೊಂಡಿಲ್ಲ. ಮೋದಿ ಸರ್ಕಾರಕ್ಕೆ ಪ್ರಜಾತಂತ್ರದ ಸಂಸ್ಥೆಗಳ ಬಗ್ಗೆ ಅಂಥಾ ಕಕ್ಕುಲಾತಿಯೇನೂ ಇಲ್ಲ. ಹೀಗಾಗಿ ನಿಷ್ಠೆ ಮತ್ತು ಅಧೀನತೆ ಇರುವವರನ್ನೇ ಮೋದಿಯವರು ಆಯ್ಕೆ ಮಾಡಿರುವುದೂ ಯಾರಿಗೂ ಆಶ್ಚರ್ಯ ತರಬೇಕಿಲ್ಲ. ಇತ್ತೀಚೆಗೆ ಸರ್ಕಾರವು ಮಾಡಿರುವ ಹಲವು ನೇಮಕಾತಿಗಳು ಇದನ್ನು ಸ್ಪಷ್ಟವಾಗಿ ಸಾಬೀತುಪಡಿಸುತ್ತವೆ.

ಕೋವಿಂದ್ ಅವರು ಎಂಥಾ ರಾಷ್ಟ್ರಪತಿಗಳಾಗ ಬಹುದು? ತಮ್ಮ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಅವರು ಮಾಡಿರುವ ಕೆಲವು ಹೇಳಿಕೆಗಳು ಸಂವಿಧಾನದ ಬಗ್ಗೆ ಅವರ ನಿಲುವೇನೆಂದು ತಿಳಿಸುತ್ತದೆ. ಒಬ್ಬ ರಾಷ್ಟ್ರಪತಿಗೆ ಸಂವಿಧಾನವೇ ಪರಮೋಚ್ಛವಾದದ್ದು, ಅದೇ ಅವರಿಗೆ ಗೀತೆ, ರಾಮಾಯಣ, ಬೈಬಲ್ ಮತ್ತು ಕುರಾನ್ ಎಂದು ಅವರು ಹೇಳಿದ್ದಾರೆಂದು ವರದಿಯಾಗಿದೆ. ತಮ್ಮ ಪ್ರತಿಪಾದನೆಗೆ ಧರ್ಮಗ್ರಂಥಗಳನ್ನು ಉಲ್ಲೇಖಿಸಿರುವುದು ಕಳವಳ ಹುಟ್ಟಿಸುವ ಸಂಗತಿಯಾಗಿದೆ. ಸಂವಿಧಾನವು ದೈವದತ್ತವಾದುದಲ್ಲ, ಅದು ನೈತಿಕತೆ, ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಮಾನವಹಕ್ಕುಗಳ ತತ್ವದ ನೆಲೆಯಲ್ಲಿ ರೂಪುಗೊಂಡಿರುವ ಒಂದು ಜೀವಂತ ದಸ್ತಾವೇಜಾಗಿದೆ. ಒಂದು ಗಣತಂತ್ರಾತ್ಮಕ ಪ್ರಜಾಸತ್ತೆಯಲ್ಲಿ ಈ ಎಲ್ಲಾ ಮೌಲ್ಯಗಳು ನಿರಂತರ ಅನುಸಂಧಾನ ನಡೆಸುತ್ತಾ ಪ್ರತಿಪಾದನೆಗೊಳ್ಳುತ್ತಿರುತ್ತವೆ. ಒಂದು ಪ್ರಜಾತಂತ್ರದಲ್ಲಿ ಸಂವಿಧಾನದ ಪಾತ್ರದ ಬಗ್ಗೆ ಕೋವಿಂದ್ ಅವರ ನಿಲುವುಗಳು ಬಹುಸಂಖ್ಯಾತರ ಮೇಲಾಳ್ವಿಕೆಯನ್ನು ಅನುವು ಮಾಡಿಕೊಡುವಂಥ ರಾಷ್ಟ್ರಪ್ರಭುತ್ವಕ್ಕೆ ಸಮರ್ಥನೆ ಒದಗಿಸುತ್ತದೆಯೇ? ಕೋವಿಂದ್ ಅವರ ಇತಿಹಾಸವು ಅವರಿಗೆ ದೇಶದ ರಾಜಕೀಯದಲ್ಲಿ ಹೆಚ್ಚುತ್ತಿರುವ ಕೇಂದ್ರೀಕರಣದ ಮತ್ತು ಪ್ರಜಾಪ್ರಭುತ್ವ ವಿರೋಧಿ ಧೋರಣೆಗಳನ್ನು ಪ್ರತಿರೋಧಿಸುವ ಉದ್ದೇಶವಾಗಲೀ, ಸಾಮರ್ಥ್ಯವಾಗಲೀ ಇದೆಯೆಂದು ಭಾವಿಸುವ ಯಾವ ಪುರಾವೆಯನ್ನೂ ಒದಗಿಸುವುದಿಲ್ಲ. ●


14 ◄◄

ಹೆಚ್ಚು ಮತ್ತು ಕೊಲೆ ಮಾಡಿ ಜೈಲು ಸೇರಿದವರಲ್ಲೂ ಬಿಲ್ಲವರೇ ಹೆಚ್ಚು.

ಕೆಲದಿನಗಳ ಹಿಂದೂ ಅಶ್ರಫ್ ಕಲಾಯಿ ಕೊಲೆಯಲ್ಲೂ ಪಾಲ್ಗೊಂಡು ಸಿಕ್ಕಬಿದ್ದ ಎಂಟು ಆರೋಪಿಗಳಲ್ಲಿ ಬಿಲ್ಲವರೇ ಹೆಚ್ಚು. ಅದಕ್ಕಾಗಿ ಒಂದು ಕಲ್ಲಿನಿಂದ ಎರಡು ಹಕ್ಕಿ ಹೊಡೆಯಲು ಅತ್ಯಂತ ಸಣ್ಣ ಗುಂಪಿಗೆ ಸೇರಿದ ಮಡಿವಾಳ ಸಮುದಾಯದ ಶರತ್‌ನನ್ನು ಸಂಘಿ ಕೊಲೆಗಾರರು ಈ ಬಾರಿ ಗುರಿ ಮಾಡಿದರು ಎಂಬ ಆರೋಪ ಇದೆ. ಇದರಿಂದ ಸಂಘಿಗಳ ಮೇಲೆ ಮುನಿಸಿಕೊಂಡಿರುವ ಬಿಲ್ಲವ ಸಮುದಾಯದವರು ಈ ಬಾರಿ ತಮ್ಮವನೊಬ್ಬ ಬಲಿಯಾಗಲಿಲ್ಲ ಎಂದು ಸ್ವಲ್ಪ ಸಮಾಧಾನ ತಂದುಕೊಳ್ಳಬಹುದು. ಹೀಗೆ ಸಂಘಿ ನೇತಾರರ ಚದುರಂಗದಾಟಕ್ಕೆ ಅಮಾಯಕ ಮಡಿವಾಳನೊಬ್ಬ ಬಲಿಯಾದನು. ಮಡಿವಾಳನ ಬದಲು ಈ ಬಾರಿಯೂ ಬಿಲ್ಲವನೊಬ್ಬನ ಹತ್ಯೆ ಆಗುತ್ತಿದ್ದರೆ ಸಮಸ್ತ ಬಿಲ್ಲವ ಸಮಾಜ ಸಂಘ ಪರಿವಾರದ ವಿರುದ್ಧ ಬಂಡೆದ್ದು ಸಂಘ ಪರಿವಾರದ ಬೇರು ಕರಾವಳಿಯಿಂದ ಸಂಪೂರ್ಣ ಕಿತ್ತು ಹೋಗುತ್ತಿತ್ತು, ಅದು ಆಗಬಾರದೆಂದು ಮಡಿವಾಳನನ್ನು ಆಹುತಿ ಕೊಡಲಾಯಿತು.

ಸ್ವತಃ ಕಲ್ಲಡ್ಕ ಭಟ್ಟ ಅನೇಕ ಸಾರಿ ಈ ರೀತಿ ಹೇಳಿದ್ದಾನೆ: "ಚೆಸ್ ಆಟದಲ್ಲಿ ನಮ್ಮ ರಾಜ ಗೆಲ್ಲಬೇಕಾದರೆ ನಮ್ಮದೇ ಅನೇಕ ಪಾದೆಗಳನ್ನು ಬಲಿ ಕೊಡಬೇಕಾಗುತ್ತದೆ" ಎಂದು. ಅದರಂತೆ ಶರತ್ ಎಂಬ ಅಮಾಯಕ ಪಾದೆಯನ್ನು ಬಲಿಕೊಟ್ಟು ಮುನಿಸಿಕೊಂಡು ದೂರ ಸರಿಯುತ್ತಿರುವ ಬಿಲ್ಲವರನ್ನು ಹತ್ತಿರ ಸೆಳೆಯುವ ಷಡ್ಯಂತ್ರ ಈ ಮಡಿವಾಳನ ಕೊಲೆಯಲ್ಲಿ ನಡೆದಿದೆಯಂತೆ.

ರಿಕ್ಷಾವಾಲ ಅಬ್ದುಲ್ ರವೂಫರ ಪ್ರಯತ್ನದ ಹೊರತಾಗಿಯೂ ಗಾಯಗೊಂಡು ಜೀವನ್ಮರಣದ ನಡುವೆ ಹೋರಾಡುತ್ತಿದ್ದ ಶರತನಿಗೆ ಸರಿಯಾದ ಚಿಕಿತ್ಸೆ ಸಿಗುವಲ್ಲಿ ಸುಮಾರು ಎರಡು ಗಂಟೆ ತಡವಾಯಿತು. ಒಂದು ವೇಳೆ ಅವನಿಗೆ ಅರ್ಧ ಗಂಟೆಯೊಳಗೆ ಪ್ರಥಮ ಚಿಕಿತ್ಸೆ ಸಿಕ್ಕಿ ರಕ್ತ ಒಸರುವಿಕೆ ನಿಲ್ಲಿಸಿದ್ದರೆ ಅವನು ಇಂದು ಬದುಕಿರುತ್ತಿದ್ದ. ಒಂದು ವೇಳೆ ಶರತ್ ಬದುಕುಳಿದರೆ ಅವನು ದಾಳಿಕೋರರ ಗುರುತು ಪೊಲೀಸರಿಗೆ ಹೇಳುವನು ಹಾಗೂ ಅದರಿಂದ ಕೇಸರಿ ಪಡೆಗಳ ಸದಸ್ಯರೇ ಸಿಕ್ಕಿ ಬೀಳುವರು ಎಂಬ ಭಯ ಸಂಘಿಗಳಿಗೆ ಇದ್ದುದರಿಂದ ಶರತ್ ಸಾಯುವುದೇ ಆರೆಸ್ಸೆಸ್ಸಿನವರಿಗೆ ಬೇಕಿತ್ತು.



ಶರತ್ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುವಾಗ ಅವನ ಸಂಘಿ ಮಿತ್ರರು ಅಲ್ಲಿಯೇ ಇದ್ದರೂ, ಇವರೆಲ್ಲಾ ದೊಡ್ಡ ಕಾರು ಜೀಪು ಹೊಂದಿದ್ದರೂ ಅವರ್‍ಯಾರೂ ಶರತ್‌ನನ್ನು ಆಸ್ಪತ್ರೆಗೆ ಸಾಗಿಸಿ ಅವನ ಜೀವ ಉಳಿಸಲು ಪ್ರಯತ್ನಿಸಲಿಲ್ಲ, ರವೂಫ್ ತನ್ನ ಹಳೆ ರಿಕ್ಷಾದಲ್ಲಿ ಶರತ್‌ನನ್ನು ಹತ್ತಿರದ ಫಾದರ್ ಮುಲರ್ಸ್ ಆಸ್ಪತ್ರೆಗೆ ಸೇರಿಸಿದ್ದರೆ ಪೊಲೀಸರು ಬಂದು ಶರತನನ್ನು ದೂರದ ಮಂಗಳೂರಿನ ಇನ್ನೊಂದು ದೊಡ್ಡ ಖಾಸಗಿ ಆಸ್ಪತ್ರೆಗೆ ಸಾಗಿಸಿದರು. ಈ ಮಂಗಳೂರಿನ ಖಾಸಗಿ ಆಸ್ಪತ್ರೆ ಕೋಟಿಗಟ್ಟಲೇ ಕ್ಯಾಪಿಟೇಶನ್ ಫೀಸ್ ನುಂಗುವ ಮೆಡಿಕಲ್ ಕಾಲೇಜಿಗೆ ಸಲಗ್ನ ಆಗಿರುವ ಹೈಟೆಕ್ ಆಸ್ಪತ್ರೆ. ಅಲ್ಲಿ ಬಡವರಿಗೆ ಯಾರೂ ಕೇರ್ ಮಾಡುವುದೇ ಇಲ್ಲ, ಮೇಲಾಗಿ ಆ ಆಸ್ಪತ್ರೆಯ ಬಂಟ ಧಣಿ ಒಬ್ಬ ಮಾಜಿ ಸಾರಾಯಿ ಗುತ್ತಿಗೆದಾರ ಮತ್ತು ಸಂಘ ಪರಿವಾರದ ಸದಸ್ಯ. ಈತ 18 ವರ್ಷಗಳ ಹಿಂದೆ ತನಗೆ ಬ್ಯಾಂಕ್ ಸಾಲ ಕೊಟ್ಟು ಆಸ್ಪತ್ರೆ–ಮೆಡಿಕಲ್ ಕಾಲೇಜು ಕಟ್ಟಲು ನೆರವಾದ ಬ್ಯಾಂಕ್ ಮ್ಯಾನೇಜರ್‌ನನ್ನೇ ಗುಂಡಿಗೆ ದೂಡಿದ ಹೃದಯಹೀನ. ಹಾಗಾಗಿ ಅವನ ಆಸ್ಪತ್ರೆಯಲ್ಲಿ ಶರತನನ್ನು ಬೇಕೆಂದೇ ನಿರ್ಲಕ್ಷ ಮಾಡಿ ಸಾವಿಗೆ ದೂಡಲಾಯಿತು ಎಂಬ ಆರೋಪ ಎದ್ದಿದೆ. ಯಾಕೆಂದರೆ ಶರತ್ ಸಾಯುವುದು ಸಂಘಿಗಳಿಗೆ ಬೇಕಿತ್ತು, ಶರತ್ ದಾಳಿಗೊಳಗಾಗಿ ಬಿದ್ದು ಒದ್ದಾಡುವಾಗ ಅವನ ಸಹಾಯಕ್ಕೆ ಬಾರದ ಒಬ್ಬನೇ ಒಬ್ಬ ಆರೆಸ್ಸೆಸ್ ಸದಸ್ಯ ಅವನು ಸತ್ತ ಮೇಲೆ ಮಾತ್ರ ದೊಡ್ಡದಾಗಿ ಕೂಗಾಡುತ್ತಾ ಭಾರಿ ಮೆರವಣಿಗೆ ಮಾಡಿದರು. ಶವಯಾತ್ರೆಯಲ್ಲಿ ದುಃಖದ ಛಾಯೆ ಇರಲಿಲ್ಲ, ಅದು ಒಂದು ವಿಜಯೋತ್ಸವದಂತಹ ಸಂಭ್ರಮ ಇತ್ತು. ಆಷಾಢಭೂತಿತನಕ್ಕೂ ಒಂದು ಮಿತಿ ಇರಬೇಕು ಅಲ್ಲವೇ.

1975-76ರ ತುರ್ತು ಪರಿಸ್ಥಿತಿ ಸಮಯದಲ್ಲಿ ಬಂಟವಾಳದ ಹತ್ತಿರ ಇಸ್ಮಾಯಿಲ್ ಎಂಬ ಕಾಂಗ್ರೆಸ್ ಕಾರ್ಯಕರ್ತನ ಕೊಲೆಯಾಯಿತು. ಕೊಲೆಗಾರರು ಪೊಲೀಸರ ಉಡುಪಿನಲ್ಲಿ ಬಂದು ಆ ಕೊಲೆ ಮಾಡಿ ಶವವನ್ನು ಕಲ್ಲು ಕಟ್ಟಿ ಬಾವಿಗೆ ಹಾಕಿದ್ದರು. ಕೆಲದಿನಗಳ ನಂತರ ಆ ಶವ ಸಿಕ್ಕಿದರೂ ಅದು ಕೊಳೆತು ಮೀನುಗಳು ತಿಂದು ಗುರುತು ಸಿಗದಂತಾಗಿ ಆ ಕೊಲೆ ಕೇಸ್ ಬಿದ್ದು ಹೋಯಿತು. ಒಂದು ವೇಳೆ 40 ವರ್ಷಗಳ ಹಿಂದೆ ಆ ಕೊಲೆಗಾರರು ಖುಲಾಸೆಗೊಳ್ಳದೇ ಗಲ್ಲಿಗೇರಿದ್ದರೆ ಇಂದು ದಕ್ಷಿಣ ಕನ್ನಡ ಜಿಲ್ಲೆ ಶಾಂತವಾಗಿ ಇರುತ್ತಿತ್ತು. ಯಾಕೆಂದರೆ ಆಗಿನ ಇಸ್ಮಾಯಿಲ್ ಕೊಲೆಯ ಪ್ರಮುಖ ಆರೋಪಿ ಹವ್ಯಕ ಬ್ರಾಹ್ಮಣನಾಗಿದ್ದು ಈಗ ಅವನಿಗೆ 75 ವರ್ಷ ವಯಸ್ಸು ಹಾಗೂ ಕರಾವಳಿಯಲ್ಲಿ ನಡೆಯುತ್ತಿರುವ ಎಲ್ಲಾ ಕೋಮು ಗಲಭೆಗಳ ಹಿಂದೆ ಅವನದೇ ಕೈವಾಡ ಇರುವುದು ನಿಜ. ಒಮ್ಮೆ ಮಾನವ ರಕ್ತದ ರುಚಿ ಕಂಡ ಹುಲಿಗೆ ಆಗಾಗ ಮಾನವ ರಕ್ತ ಬೇಕಾಗುತ್ತದೆ ಎಂಬುದು ಬಂಟ್ವಾಳದಲ್ಲಿ ನಿಜವಾಗಿದೆ.

-ಅಭಿಷೇಕ್ ಪಡಿವಾಳ್, ಸುಳ್ಯ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 26-07-2017 RNI No. KARKAN



ಡಬ್ಬಿಂಗ್ ಹೋರಾಟದ ಗತಿ ಏನು

ಕನ್ನಡ ಚಿತ್ರರಂಗಕ್ಕೆ ಡಬ್ಬಿಂಗ್ ಸುನಾಮಿ ಅಪ್ಪಳಿಸೋದು ಹೆಚ್ಚೂಕಮ್ಮಿ ನಿಕ್ಕಿಯಾದಂತಾಗಿದೆ. ಇಷ್ಟುದಿನ ಡಬ್ಬಿಂಗ್ ವಿರೋಧಿ ಹೋರಾಟಕ್ಕೆ ಶಕ್ತಿ ತುಂಬುತ್ತಿದ್ದುದೇ ದೊಡ್ಮನೆಯ ಹ್ಯಾಟ್ರಿಕ್ ಹೀರೊ ಶಿವಣ್ಣ. ಮೊನ್ನೆ ಉಡುಪಿಯಲ್ಲಿ ಅದ್ಯಾಕೋ ಶಿವಣ್ಣ ಡಬ್ಬಿಂಗ್ ವಿರೋಧಿ ಹೋರಾಟ ಕುರಿತು ಕೈಚೆಲ್ಲುವಂತೆ ಮಾತಾಡಿರೋದು ಈಗಾಗಲೇ ಕೆಎಟಿ ನ್ಯಾಯಮಂಡಳಿಯಲ್ಲಿ ಗೆಲುವು ದಕ್ಕಿಸಿಕೊಂಡಿರುವ ಡಬ್ಬಿಂಗ್ ವೀರರಿಗೆ ದಾರಿ ಸುಗಮ ಮಾಡಿಕೊಟ್ಟಿದೆ. ಜನರಿಗೆ ಇತರೆ ಭಾಷೆ ಚಿತ್ರಗಳ ಡಬ್ಬಿಂಗ್ ಬೇಕೇಬೇಕು ಎಂದಲ್ಲಿ ತಡೆಯಲು ನಾನ್ಯಾರು ಅನ್ನೋ ಹತಾಶೆಯ ಮಾತುಗಳು ಶಿವಣ್ಣನ ಬಾಯಿಂದ ಹೊರಬಿದ್ದಿವೆ. ಹಾಗಂತ ಶಿವಣ್ಣ ಡಬ್ಬಿಂಗ್ ಹಾದಿಗೆ ರತ್ನಗಂಬಳಿಯನ್ನೇನೂ ಹಾಸಿಲ್ಲ. "ಡಬ್ಬಿಂಗ್ ಬೇಕೇಬೇಕು ಎಂದಾದಲ್ಲಿ ಇತರೆ ಭಾಷೆ ಚಿತ್ರಗಳನ್ನು ಕನ್ನಡಕ್ಕೆ ಡಬ್ ಮಾಡಿಯೇ ಬಿಡುಗಡೆ ಮಾಡಿ. ರಾಜ್ಯದಲ್ಲಿ ಬೇರೆ ಯಾವ ಭಾಷೆಯ ಸಿನಿಮಾಗಳನ್ನೂ ಅವುಗಳ ಭಾಷೆಯಲ್ಲೇ ಬಿಡುಗಡೆ ಮಾಡಬೇಡಿ" ಎಂದಿರುವ ಅವರು ಸಣ್ಣದೊಂದು ಚೆಕ್‌ಮೇಟ್ ಕೂಡಾ ಇಟ್ಟಿದ್ದಾರೆ. ಶಿವಣ್ಣ ಹತಾಶೆಯಿಂದ ಮಾತಾಡಿದ್ದಾರೊ, ಆಕ್ರೋಶದಿಂದ ಮಾತಾಡಿದ್ದಾರೋ ಒಟ್ಟನಲ್ಲಿ ಡಬ್ಬಿಂಗ್ ವಿಚಾರದಲ್ಲಿ ಮೊದಲಿಗಿಂತ ಹೆಚ್ಚು ಪ್ರಬುದ್ಧವಾಗಿ ಮತಾಡಿರೋದು ಇಷ್ಟುದಿನ ಭಾವನಾತ್ಮಕವಾಗಿ ಸಾಗುತ್ತಿದ್ದ ಸಂಗತಿಯನ್ನು ಇನ್ನೂ ಗಾಂಭೀರ್ಯ ಮತ್ತು ಕಾನೂನಾತ್ಮಕತೆಯತ್ತ ಮುಖ ಮಾಡಿ ನಿಲ್ಲಿಸಿವೆ.

ಅನುಪಮ್ ಖೇರ್ ಕಂಚಿ ಮಠ ಸೇರ್‍ತಾರಾ?

ಬಾಲಿವುಡ್ ಪೋಷಕ ನಟ ಅನುಪಮ್ ಖೇರ್‌ರ ಇತ್ತೀಚಿಗಿನ ಮಾತುಕತೆ, ವರ್ತನೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದವರಿಗೆ ಈ ಟೈಟಲ್ ಓದುತ್ತಿದ್ದಂತೆಯೇ ಆತ ಕಾವಿ ತೊಟ್ಟು ಸನ್ಯಾಸಿ ಆಗಿ ಬಿಡ್ತಾರಾ ಅನ್ನೋ ಅನುಮಾನ ಮೂಡಬಹುದು. ಆದರೆ ಅಸಲಿ ವಿಷಯ ಅದಲ್ಲ, ಕನ್ನಡ ಮತ್ತು ತಮಿಳಿನಲ್ಲಿ ಮೇಕಿಂಗ್ ಕಾಣಲಿರುವ ಸಿನಿಮಾವೊಂದರಲ್ಲಿ ಆತ ಕಂಚಿ ಮಠದ ವಿವಾದಿತ ಸ್ವಾಮಿಯ ಪಾತ್ರ ಮಾಡ್ತಾರೆ ಎಂಬ ಸುದ್ದಿ ಹರಿದಾಡುತ್ತಿದೆ. ನಟೋರಿಯಸ್ 'ದಂಡುಪಾಳ್ಯ'ದ ರಿಯಾಲಿಟಿ ಇಟ್ಟುಕೊಂಡು ಎರಡು ಸಿನಿಮಾ ಮಾಡಿರೋ ನಿರ್ದೇಶಕ ಶ್ರೀನಿವಾಸ್ ರಾಜು ಕಂಚಿ ಮಠದ ಸ್ವಾಮಿ ಜಯೇಂದ್ರ ಶಂಕರಾಚಾರ್ಯ ಮೇಲಿದ್ದ ಮರ್ಡರ್ ಆರೋಪದ ಮಿಸ್ಟರಿ ಆಧರಿಸಿ ಸಿನಿಮಾ ಮಾಡಲು ಹೊರಟಿದ್ದಾರೆ. ಅದರಲ್ಲಿ ಜಯೇಂದ್ರ ಸ್ವಾಮಿಯ ಗೆಟಪ್ಪನ್ನು ಅನುಪಮ್ ಖೇರ್ ಹಾಕಲಿದ್ದಾರೆಂದು ಸ್ವತಃ ನಿರ್ದೇಶಕರೇ ಹೇಳಿಕೊಂಡಿದ್ದಾರೆ. ಈಗಾಗಲೇ 'ಆಚಾರ್ಯ ಅರೆಸ್ಟ್' ಎಂಬ ಹೆಸರನ್ನೂ ರಿಜಿಸ್ಟರ್ ಮಾಡಿಸಿದ್ದಾರೆ. ಮಠದ ಹಿರಿಯ ಮ್ಯಾನೇಜರ್‌ನನ್ನು ಹತ್ಯೆ ಮಾಡಿಸಿದ್ದ ಆರೋಪದಲ್ಲಿ ಜಯಲಲಿತಾ ಸರ್ಕಾರ ಸ್ವಾಮಿಯನ್ನು ಅರೆಸ್ಟ್ ಮಾಡಿಸಿತ್ತು, ಅದು ಭಾರೀ ಸುದ್ದಿಯಾಗಿತ್ತು. ಈಗ ಶ್ರೀನಿವಾಸ್ ರಾಜು ಅದನ್ನೇ ಸಿನಿಮಾ ಮಾಡಲು ಹೊರಟಿದ್ದಾರೆ. 'ಆನ್ ಇನ್ಸಲ್ಟ್ ಟು ಎವೆರಿ ಹಿಂದೂ' ಎಂಬ ಟ್ಯಾಗ್‌ಲೈನ್ ಇರೋದ್ರಿಂದ ಸಿನಿಮಾ ಪೂರ್ವಗ್ರಹ ಹೊತ್ತ ಒನ್‌ಸೈಡೆಡ್ ಸ್ಟೋರಿಯಾಗಿ ಮೂಡಿಬರೋದ್ರಲ್ಲಿ ಡೌಟಿಲ್ಲ, ಅಂತಾ ಕತೆಗೆ ಅನುಪಮ್ ಖೇರ್ ಅಲ್ಲದೆ ಮತ್ಯಾರು ಸೂಟ್ ಆಗ್ತಾರೆ. ಹಾಗೊಮ್ಮೆ ಖೇರ್ ಈ ಸಿನಿಮಾಗೆ ಒಪ್ಪಿಕೊಂಡಿದ್ದೇ ಆದಲ್ಲಿ ಇದು ಅವರ ದಕ್ಷಿಣ ಭಾರತ ಭಾಷೆಯ ಮೊದಲ ಸಿನಿಮಾ ಆಗಲಿದೆ.

ಅಂತೆಕಂತೆಗಳ ಕುರುಕ್ಷೇತ್ರ

ಚಾಲೆಂಜಿಂಗ್ ಸ್ಟಾರ್ ದರ್ಶನ್‌ರ ಐವತ್ತನೇ ಸಿನಿಮಾ ಎನ್ನಲಾಗುವ ಬಿಗ್ ಬಜೆಟ್‌ನ 'ಕುರುಕ್ಷೇತ್ರ' ಬರೀ ಅಂತೆಕಂತೆಗಳಿಂದಲೇ ಸುದ್ದಿಯಾಗುತ್ತಿರೋದು ವಿಪರ್ಯಾಸ. ಚಿತ್ರ ವಿಪರೀತ ವಿಳಂಬವಾಗುತ್ತಿರೋದಕ್ಕೆ ಸ್ವತಃ ದರ್ಶನ್ ಸಿಟ್ಟಾಗಿದ್ದಾರೆ ಎಂಬ ಗಾಸಿಪ್ ಕೂಡಾ ಗಾಂಧಿನಗರದಲ್ಲಿ ತೇಲಾಡಿತ್ತು, ಶ್ರೀಕೃಷ್ಣನ ಪಾತ್ರವನ್ನು ರವಿಚಂದ್ರನ್ ಮತ್ತು ಕರ್ಣನ ಪಾತ್ರವನ್ನು ಸುದೀಪ್ ಮಾಡಲಿದ್ದಾರೆ ಎಂಬ ಮತ್ತೊಂದು ಸುದ್ದಿಯೂ ಸದ್ದು ಮಾಡಿತ್ತು.

ರವಿಚಂದ್ರನ್ ಪಾತ್ರದ ಬಗ್ಗೆ ಸ್ಪಷ್ಟತೆ ಇಲ್ಲದೆ ಹೋದರು ಕರ್ಣನ ಪಾತ್ರ ಮಾಡಲು ಸುದೀಪ್ ನಿರಾಕರಿಸಿದ್ದರು. ಕೊನೆಗೆ ಕರ್ಣನ ಪಾತ್ರವನ್ನೂ ದರ್ಶನ್ನೇ ನಿಭಾಯಿಸಲಿದ್ದಾರೆ ಎನ್ನಲಾಯ್ತು. ಇದೀಗ ದ್ರೌಪದಿ ಪಾತ್ರದ ಗಾಸಿಪ್ ಸದ್ದು ಮಾಡುತ್ತಿದೆ. ಪಾಂಚಾಲಿ ಪಾತ್ರಕ್ಕೆ ಬಹುಭಾಷಾ ತಾರೆ ನಯನತಾರಾ ಅವರನ್ನು ಅಪ್ರೋಚ್ ಮಾಡಲಾಗಿದೆ ಅನ್ನೋ ರೂಮರ್ ಒಂದು ಕಡೆಗಾದರೆ ಅದೇ ಪಾತ್ರಕ್ಕೆ ಬಾಹುಬಲಿ ಖ್ಯಾತಿಯ ಅನುಷ್ಕಾ ಶೆಟ್ಟಿಯನ್ನು ಕರೆತರುವ ಪ್ಲಾನೂ ನಿರ್ಮಾಪಕ ಮುನಿರತ್ನ ತಲೆಯಲ್ಲಿ ಓಡುತ್ತಿದೆಯಂತೆ.

ಅಂದಹಾಗೆ ಪೌರಾಣಿಕ ಹಿನ್ನೆಲೆಯ ಈ ಸಿನಿಮಾವನ್ನು 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಖ್ಯಾತಿಯ ನಾಗಣ್ಣ ನಿರ್ದೇಶನ ಮಾಡುತ್ತಿದ್ದು, ಮುನಿರತ್ನ ಹುಟ್ಟುಹಬ್ಬವಾದ ಜುಲೈ 23ಕ್ಕೆ ಸೆಟ್ಟೇರಲಿದೆ ಎಂಬುದು ಲೇಟೆಸ್ಟ್ ಸುದ್ದಿ. ಅದಾದರು ನಿಜವಾಗುತ್ತಾ ಕಾದು ನೋಡಬೇಕು.




■ ಗಿರೀಶ್ ತಾಳಿಕಟ್ಟೆ



ಸಾಧುಗೆ ಹೀಗೊಂದು ಪ

ಹಾಸ್ಯನಟ, ಸಂಗೀತ ನಿರ್ದೇಶಕ, ನಿರ್ಮಾಪಕ, ಸಿನಿ ನಿರ್ದೇಶ ಸಕಲಷ್ಟು ಲೇಬಲ್‌ಗಳನ್ನು ಅಂಟಿಸಿಕೊಂಡಿರುವ ಸಾಧು ಕೋಕಿಲಾ ಪ್ರ ಕಲಾವಿದ ಅನ್ನೋದು ಎಷ್ಟು ಸತ್ಯವೋ ಇತ್ತೀತ್ತಲಾಗೆ ಸಿಕ್ಕಾಪಟ್ಟೆ ಆಸಾಮಿ ಎಂಬ ಹಣೆಪಟ್ಟಿ ಲೇಪಿಸಿಕೊಂಡಿರುವುದೂ ಅಷ್ಟೇ ಸ ಅವರನ್ನು ಹಿಡಿದು ಕೆಲಸ ಮಾಡಿಸೋದು ಅಸಾಧ್ಯ ಎಂಬ ಕ ಗಾಂಧಿನಗರದಲ್ಲಿ ಹೆಚ್ಚಾಗುತ್ತಿದೆ. ಹೇಳಿದ ಸಮಯಕ್ಕೆ ಬರದೆ ಚಿತ್ರ ಸತಾಯಿಸೋದು ಮಾಮೂಲಿಯಾಗಿದೆ. ಮೊನ್ನೆ ದರ್ಶನ್ ಅಭಿನಯ ಮಿಲನ ಖ್ಯಾತಿಯ ಪ್ರಕಾಶ್ ಆಕ್ಷನ್-ಕಟ್ ಹೇಳುತ್ತಿರುವ 'ತಾರಕ' ಸ ಅದನ್ನೇ ಮುಂದುವರೆಸಿದ್ದರಂತೆ. ಅದೆಷ್ಟೋ ದಿನ ಸಮಯಕ್ಕೆ ಬಾರದೆ ಕಾಡಿಸಿ, ಡೇಟ್ಸ್ ಇದ್ದ ದಿನವೂ ಸಾಧು ತಪ್ಪಿಸಿಕೊಂ ಇದನ್ನು ಕಂಡೂ ಕಂಡು ಸುಸ್ತಾದ ಚಿತ್ರ ತಂಡ ಸಾಧುವನ್ನು ಡ್ರಾಪ್ ಮಾಡಿ ಆ ಪಾತ್ರವನ್ನು ಮೆತ್ತಗೆ ಕುರಿ ಪ್ರತಾಪ್ ಕೈಲಿ ಪ ಇದರ ಸಣ್ಣ ಸುಳಿವೂ ಇಲ್ಲದ ಸಾಧು ಯಾವತ್ತೋ ಪುರುಸೊ ಫೋನಾಯಿಸಿ 'ಶೂಟಿಂಗ್ ಯಾವತ್ತು' ಅಂತ ವಿಚಾರಿಸಿದ್ದಾರೆ. ಆಗ ಚಿ ಕಡೆಯಿಂದ ಆಘಾತಕಾರಿ ಅಸಲೀ ಉತ್ತರ ಹೊರ ಬಿದ್ದಿದೆ. 'ತಾರಕ ತಂಡ ಕೊಟ್ಟ ಶಾಕ್‌ನಿಂದ ಸಾಧು ಪಾಠ ಕಲಿಯಬೇಕಿದೆ. ಒಂದು ಪ್ರತಿಭೆ ಅಹಂಕಾರದ ಅಶಿಸ್ತಿಗೆ ಬಲಿಯಾಗದಿದ್ದರೆ ಅಷ್ಟೇ ಸಾಕು.

ರೆಡ್ಡಿ ಮಗನ ಸಿನಿಮಾಕ್ಕೆ ತೆಲುಗು ನಿದೇ



ಬಳ್ಳಾರಿಯ ಗಣಿಧಣಿ ಜನಾರ್ದನ ರೆಡ್ಡಿ ತನ್ನ ಮಗ ಕಿರೀಟಿಯನ್ನು ಸ್ಟಾರ್ ಮಾಡಲು ಹೊರಟಿರೋದು ಹಳೆಯ ಸುದ್ದಿ. ನೋಟ್ ಬ್ಯಾನ್ ಅವಾಂತರದಲ್ಲೂ ಮುನ್ನೂರು ಕೋಟಿ ಸುರಿದು ಅದ್ದೂರಿಯಾಗಿ ಮಗಳ ಮದುವೆ ಮಾಡಿ ಬೀಗಿದ್ದ ರೆಡ್ಡಿ ಮಗನ ಸಿನಿ ಪಯಣದ ಲಾಂಚ್‌ಗೂ ಅಷ್ಟೇ ಕಾಸು ಸುರಿಯೋದ್ರಲ್ಲಿ ಡೌಟಿಲ್ಲ. ಮಗನನ್ನು ಸಿನಿಮಾ ಹೀರೊ ಆಗಿಸಲು ಟಾಲಿವುಡ್‌ನ ಸ್ಟಾರ್ ನಿದೇ ರೆಡ್ಡಿ ಗಾಳ ಹಾಕಿರೋದು ಲೇಟೆಸ್ಟ್ ಸುದ್ದಿ. ಈ ಇಬ್ಬರು ತೆಲುಗು ಡೈರೆಕ್ಟರ್ ಶಾರ್ಟ್‌ಲಿಸ್ಟ್ ಆಗಿ ಅದರಲ್ಲಿ ಮೊದಲನೆಯವರು ಪುನೀತ್‌ಗೆ 'ಅಪ್ಪು' ಮೂಲಕ ಎಂಟ್ರಿ ಕೊಡಿಸಿದ್ದ ಪೂರಿ ಜಗನ್ನಾಥ್. ಇವರು ತೆಲುಗಿನಲ್ಲಿ 'ಬದ್ರಿ', 'ಯು 'ಪೋಕಿ', 'ಬಿಸ್‌ನೆಸ್ ಮ್ಯಾನ್', 'ಟೆಂಪರ್' ಸೇರಿದಂತೆ ಹಲವು ಚ ನಿರ್ದೇಶನ ಮಾಡಿದ್ದಾರೆ. ಮತ್ತೊಬ್ಬರು ಮೆಗಾಸ್ಟಾರ್ ಚಿರಂಜೀವಿಯ ಸಿನಿಮಾ 'ಖೈದಿ-150' ನಿರ್ದೇಶನ ಮಾಡಿದ್ದ ವಿ.ವಿ. ನಾಯಕ್. ಕನ್ನಡ ಮತ್ತು ತೆಲುಗಿನಲ್ಲಿ ಚಿತ್ರ ತಯಾರಾಗಲಿದೆಯಂತೆ. ಅಂದಹಾಗೆ, (ಎಚ್.ಡಿ. ಕುಮಾರಸ್ವಾಮಿ), ಹ್ಯಾಪಿ ಬರ್ತ್ ಡೇ (ಚೆಲುವರಾಯ ಲಕ್ಷಣ (ಎಚ್.ಎಂ. ರೇವಣ್ಣ) ಸಿನಿಮಾಗಳ ನಂತರ ಮತ್ತೊಂದು ರಾಜಕಾರಣಿ ಪುತ್ರನನ್ನು ಬೆಳ್ಳಿತೆರೆಗೆ ತರಲು ಸಜ್ಜಾಗುತ್ತಿದೆ. ರೆಡ್ಡಿ ತನ್ನ ಮಗಳ ಮದುವೆಗೆ ಮಾಡಿದ್ದ ವೀಡಿಯೋ ಆ ಪತ್ರಿಕೆಯಲ್ಲಿ ತಮ್ಮ ಫ್ಯಾಮಿಲಿ ಸಾಂಗ್ ಚಿತ್ರೀಕರಿಸಿ ಹಂಚ ಸಿನಿಮಾ ತಯಾರಿಯ ಸ್ಯಾಂಪಲ್ಲಾಗಿ ಅಂತೆ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com